ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಜೆಮೊಲಜಿ - ವೃತ್ತಿ ಜೀವನಕ್ಕೊಂದು ಹೊಸ ದಾರಿ

ಆಳ-ಅಗಲ
ಚಿನ್ನ ದುಬಾರಿ ತಗ್ಗಿದ ಖರೀದಿ, ಹೂಡಿಕೆ
ಪಿಎಫ್‌ಐ ಸಂಚು: ಐದು ರಾಜ್ಯಗಳಲ್ಲಿ ಎನ್‌ಐಎ ದಾಳಿ 9
ಕಲ್ಲಿದ್ದಲು ಕೊರತೆ, ತಾಂತ್ರಿಕ ಕಾರಣದಿಂದ ವಿದ್ಯುತ್ ಉತ್ಪಾದನೆ ಕಡಿಮೆ
ಹಣಕಾಸು ಯೋಜನೆಗೆ 3 ಲೆಕ್ಕಾಚಾರ 8
ವಿದ್ಯುತ್ ಕಣ್ಣಾಮುಚ್ಚಾಲೆ: ಗ್ರಾಹಕರು ಹೈರಾಣ 9

ಕೇಂದ್ರದ ಅನುದಾನ ಹಂಚಿಕೆ ಸೂತ್ರದಲ್ಲಿ ಬದಲಾವಣೆಗೆ ರಾಜ್ಯ ಸರ್ಕಾರದ ಮನವಿ

ಅಭಿವೃದ್ಧಿಗೆ ಮಾನ್ಯತೆ: ಕೇಂದ್ರಕ್ಕೆ ಮೊರೆ

• ಅರೂಪ್ ರಾಯ್‌ಚೌಧರಿ
ಭರತ್ ಜೋಷಿ

ಬೆಂಗಳೂರು: ಕೇಂದ್ರದ ತೆರಿಗೆ ವರಮಾನದಲ್ಲಿ ಹಾಗೂ ಹಲವು ಅನುದಾನಗಳಲ್ಲಿ ಕರ್ನಾಟಕಕ್ಕೆ ನೀಡಬೇಕಿರುವ ಪಾಲು ಎಷ್ಟು ಎಂಬುದನ್ನು ನಿರ್ಧರಿಸುವಾಗ, ಇಲ್ಲಿನ ಆರ್ಥಿಕ ಬೆಳವಣಿಗೆ ಹಾಗೂ ನಗರೀಕರಣವನ್ನು ಕೂಡ ಪರಿಗಣಿಸಬೇಕು ಎಂದು ರಾಜ್ಯ ಸರ್ಕಾರ ಕೋರಿದೆ.

ಈ ಕೋರಿಕೆ ಮಂಡಿಸಿರುವುದಕ್ಕೆ ರಾಜ್ಯ ಸರ್ಕಾರವು ಕೆಲವು ಕಾರಣಗಳನ್ನು ನೀಡಿದೆ. ಕಡಿಮೆ ಅಭಿವೃದ್ಧಿ ಹೊಂದಿದ ರಾಜ್ಯಗಳ ಕಾರ್ಮಿಕರಿಗೆ ಕರ್ನಾಟಕವು ಉದ್ಯೋಗ ನೀಡುತ್ತಿದೆ. ಕೆಲಸದ ಉದ್ದೇಶಕ್ಕಾಗಿ ಕರ್ನಾಟಕಕ್ಕೆ ವಲಸೆ ಬಂದಿರುವವರು ಇಲ್ಲಿ ಸಂಪಾದಿಸುವ ಹಣವು ಅವರ ಕುಟುಂಬಕ್ಕೆ ಕೂಡ ನೆರವಾಗುತ್ತಿದೆ. ಹೀಗಾಗಿ, ಕರ್ನಾಟಕದ ಆರ್ಥಿಕ ಬೆಳವಣಿಗೆ ಮತ್ತು ನಗರೀಕರಣವನ್ನು ಕೂಡ ಪರಿಗಣಿಸಿ ವರಮಾನ, ಅನುದಾನದ ಪಾಲು ತೀರ್ಮಾನಿಸಬೇಕು ಎಂದು ಕೇಳಿಕೊಂಡಿದೆ.

ಈ ಕೋರಿಕೆಯನ್ನು ರಾಜ್ಯ ಸರ್ಕಾರವು ಕೇಂದ್ರ ಹಣಕಾಸು ಸಚಿವಾಲಯಕ್ಕೆ ರವಾನಿಸಿದೆ. ಹಣಕಾಸು ಸಚಿವಾಲಯವು 16ನೆಯ ಹಣಕಾಸು ಆಯೋಗವನ್ನು ರಚಿಸುವ ಕೆಲಸ ಆರಂಭಿಸಿದೆ. ಆಯೋಗಕ್ಕೆ ನಿಗದಿ ಮಾಡಬೇಕಿರುವ ನಿಯಮ, ನಿಬಂಧನೆಗಳನ್ನು ಅಂತಿಮಗೊಳಿಸಲು ರಾಜ್ಯಗಳಿಂದ ಸಲಹೆ ಬೇಕು ಎಂದು ಕೇಳಿದೆ.

ರಾಜ್ಯದ ವಾದ ಹೀಗಿದೆ

- ಆರ್ಥಿಕವಾಗಿ ಮುಂದುವರಿದ ರಾಜ್ಯಗಳು, ಹಿಂದುಳಿದ ರಾಜ್ಯಗಳಿಗೆ ನೆರವಾಗುತ್ತಿವೆ. ಅನುದಾನ ಹಂಚಿಕೆಯ ಸಂದರ್ಭದಲ್ಲಿ ಇದನ್ನೂ ಪರಿಗಣಿಸಬೇಕು
- ಅನುದಾನ ನೀಡುವಾಗ ಯಾವುದೇ ಷರತ್ತು ವಿಧಿಸಬಾರದು
- ಕೇಂದ್ರ ಸಂಗ್ರಹಿಸುತ್ತಿರುವ ಸೆಸ್ ಹಾಗೂ ಸರ್ಚಾರ್ಜ್‌ನಲ್ಲಿ ರಾಜ್ಯಗಳಿಗೆ ಪಾಲು ಸಿಗಬೇಕು

ಪ್ರಜಾವಾಣಿ ವಿಶೇಷ

2026–27ನೆಯ ಹಣಕಾಸು ವರ್ಷದಿಂದ 2030–31ನೆಯ ಹಣಕಾಸು ವರ್ಷದವರೆಗೆ ಕೇಂದ್ರದ ತೆರಿಗೆ ವರಮಾನ, ಇತರ ಅನುದಾನಗಳಲ್ಲಿ ರಾಜ್ಯಗಳ ಪಾಲು ಎಷ್ಟು ಎಂಬುದನ್ನು ತೀರ್ಮಾನಿಸುವುದು ಹೇಗೆ ಎಂಬ ಬಗ್ಗೆ ಹಣಕಾಸು ಆಯೋಗವು ಶಿಫಾರಸು ಮಾಡಲಿದೆ.

ರಾಜ್ಯಗಳ ತಲಾವಾರು ಆದಾಯದ ಮೇಲೆ ಕೆಲವು ನಗರಗಳು ಹೆಚ್ಚಿನ ಪರಿಣಾಮ ಬೀರುತ್ತವೆಯಾದ ಕಾರಣ, ಬೆಂಗಳೂರು, ಹೈದರಾಬಾದ್, ಕೋಲ್ಕತ್ತದಂತಹ ಮಹಾನಗರಗಳನ್ನು ಕೈಬಿಟ್ಟು, ಆಯಾ ರಾಜ್ಯದ ತಲಾ ಆದಾಯವನ್ನು ಹೆಚ್ಚು ನಿಖರವಾಗಿ ಗುರುತಿಸಬೇಕು ಎಂದು ರಾಜ್ಯ ಸರ್ಕಾರವು ಹೇಳಿದೆ. ‘ಕೆಲವು ಮಹಾನಗರಗಳು, ಇಡೀ ರಾಜ್ಯದ ತಲಾ ಆದಾಯ ತೀರ್ಮಾನಿಸುವಲ್ಲಿ ಹೆಚ್ಚಿನ ಪ್ರಭಾವ ಬೀರುತ್ತವೆ. ಇದರಿಂದಾಗಿ ಇಡೀ ರಾಜ್ಯದ ತಲಾ ಆದಾಯವು ಬಹಳ ಹೆಚ್ಚಿದೆ ಎಂದು ಕಾಣಿಸುತ್ತದೆ. ವಾಸ್ತವದಲ್ಲಿ, ಆ ರಾಜ್ಯದ ಇತರ ಪ್ರದೇಶಗಳ ತಲಾ ಆದಾಯವು ಬಹಳ ಕಡಿಮೆ ಇರುತ್ತದೆ’ ಎಂದು ರಾಜ್ಯ ಸರ್ಕಾರದ ಪತ್ರದಲ್ಲಿ ಹೇಳಲಾಗಿದೆ.

‘ಕೇಂದ್ರವು ಸಂಗ್ರಹಿಸುವ ಸೆಸ್ ಹಾಗೂ ಸರ್ಚಾರ್ಜ್ ವರಮಾನವನ್ನು ಕೂಡ ರಾಜ್ಯಗಳ ಜೊತೆ ಹಂಚಿಕೊಳ್ಳಬೇಕು ಎಂದು ನಾವು ಕೇಳಿಕೊಂಡಿದ್ದೇವೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. 15ನೆಯ ಹಣಕಾಸು ಆಯೋಗದ ಶಿಫಾರಸಿನ ಅನ್ವಯ, ಕೇಂದ್ರದ ತೆರಿಗೆ ವರಮಾನದಲ್ಲಿ ಶೇ 41ರಷ್ಟನ್ನು ರಾಜ್ಯಗಳಿಗೆ ಹಂಚಿಕೆ ಮಾಡಬೇಕು. ಆದರೆ ಸೆಸ್ ಹಾಗೂ ಸರ್ಚಾರ್ಜ್ ಮೂಲಕ ಕೇಂದ್ರ ಪಡೆಯುವ ವರಮಾನವನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ಅಗತ್ಯವಿಲ್ಲ.

‘ಪ್ರಮುಖ ನಗರಗಳು ದೇಶದ ಎಲ್ಲೆಡೆಗಳಿಂದ ಕಾರ್ಮಿಕರನ್ನು ಸೆಳೆಯುತ್ತವೆ. ಕಡಿಮೆ ಅಭಿವೃದ್ಧಿ ಹೊಂದಿರುವ ರಾಜ್ಯಗಳ ಕಾರ್ಮಿಕರನ್ನು, ಉದ್ಯೋಗಿಗಳನ್ನು ಸೆಳೆಯುತ್ತಿರುವ ಇಂತಹ ನಗರಗಳಲ್ಲಿ ಹೆಚ್ಚಿನ ಹೂಡಿಕೆಯ ಅಗತ್ಯವಿದೆ’ ಎಂದು ಪತ್ರವು ಹೇಳಿದೆ.

ಕಡಿಮೆ ಅಭಿವೃದ್ಧಿ ಸಾಧಿಸಿರುವ ರಾಜ್ಯಗಳಿಗೆ ತಮ್ಮಿಂದ ಆರ್ಥಿಕ ನೆರವು ಸಿಗುತ್ತಿದೆ ಎಂದು ದಕ್ಷಿಣ ಭಾರತ ಹಾಗೂ ಪಶ್ಚಿಮ ಭಾರತದ ಹಲವು ರಾಜ್ಯಗಳು ಹೇಳಿದ್ದಿದೆ. 15ನೆಯ ಹಣಕಾಸು ಆಯೋಗವು ಶಿಫಾರಸುಗಳನ್ನು ಸಿದ್ಧಪಡಿಸುತ್ತಿದ್ದ ಹೊತ್ತಿನಲ್ಲಿ ದಕ್ಷಿಣ ಭಾರತದ ರಾಜ್ಯಗಳು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರಿಗೆ ಪತ್ರವೊಂದನ್ನು ಬರೆದು, ‘ಆರ್ಥಿಕ ಬೆಳವಣಿಗೆ, ಉದ್ಯೋಗ, ಆರೋಗ್ಯ, ಶಿಕ್ಷಣ, ಜನಸಂಖ್ಯಾ ನಿಯಂತ್ರಣ ಇತ್ಯಾದಿ ಕ್ಷೇತ್ರಗಳಲ್ಲಿ ನಾವು ಸಾಧಿಸಿರುವ ಪ್ರಗತಿಗೆ ಹೆಚ್ಚುವರಿ ಹಣಕಾಸಿನ ನೆರವಿನ ಮೂಲಕ ಉತ್ತೇಜನ ಕೊಡಬೇಕು’ ಎಂದು ಕೇಳಿಕೊಂಡಿದ್ದವು.

‘ರಾಜ್ಯಗಳಿಗೆ ಅನುದಾನ ನೀಡುವಾಗ ಯಾವುದೇ ಷರತ್ತನ್ನು ವಿಧಿಸಬಾರದು ಎಂದು ಪತ್ರದಲ್ಲಿ ಕೋರಲಾಗಿದೆ’ ಎಂದು ಅಧಿಕಾರಿ ತಿಳಿಸಿದರು. ಹೆಚ್ಚು ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಸಾಲ ಮರುಪಾವತಿ ಸಾಮರ್ಥ್ಯವೂ ಹೆಚ್ಚಿರುತ್ತದೆ. ಹೀಗಾಗಿ, ಈ ರಾಜ್ಯಗಳಿಗೆ ಬಂಡವಾಳ ಮಾರುಕಟ್ಟೆಗಳಿಂದ ಹಣ ಸಂಗ್ರಹಿಸಲು ಹೆಚ್ಚಿನ ಷರತ್ತುಗಳನ್ನು ವಿಧಿಸಬಾರದು ಎಂದು ಕರ್ನಾಟಕವು ಹೇಳಿದೆ.

ಈಗಿರುವ ನಿಯಮಗಳ ಪ್ರಕಾರ ಹಣಕಾಸು ಸಚಿವಾಲಯವು ರಾಜ್ಯಗಳಿಗೆ ತಮ್ಮ ಜಿಎಸ್‌ಡಿಪಿಯ ಶೇಕಡ 3.5ರಿಂದ ಶೇ 4ರವರೆಗಿನ ಮೊತ್ತವನ್ನು ಮಾತ್ರವನ್ನು ಸಾಲವಾಗಿ ಪಡೆಯಲು ಅವಾಕಾಶ ಕಲ್ಪಿಸಿದೆ.

ತಿರಂಗಾ ಯಾತ್ರೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ಭಾನುವಾರ ‘ತಿರಂಗಾ ಯಾತ್ರೆ’ ನಡೆಯಿತು –ಪಿಟಿಐ ಚಿತ್ರ

ರಾಜ್ಯದ ವಿವಿಧೆಡೆ ಅಪಘಾತ: ಎಡಿಜಿಪಿ ಮಾಹಿತಿ

24 ಗಂಟೆಗಳಲ್ಲಿ 37 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಶನಿವಾರ ಬೆಳಿಗ್ಗೆ 6 ಗಂಟೆಯಿಂದ ಭಾನುವಾರ ಬೆಳಿಗ್ಗೆ 6 ಗಂಟೆವರೆಗಿನ ಅವಧಿಯಲ್ಲಿ ಸಂಭವಿಸಿರುವ ಅಪಘಾತಗಳಲ್ಲಿ 37 ಮಂದಿ ಮೃತಪಟ್ಟಿದ್ದಾರೆ’ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

‘ಕರಾಳ ಶನಿವಾರ’ ಎಂಬುದಾಗಿ ‘ಎಕ್ಸ್’ (ಟ್ವಿಟರ್) ವೇದಿಕೆಯಲ್ಲಿ ಹೇಳಿರುವ ಅವರು, ‘ಭಾನುವಾರ ನಸುಕಿನಲ್ಲಿ ಚಿತ್ರದುರ್ಗದಲ್ಲಿ ಐವರು ಸಾವಿಗೀಡಾಗಿದ್ದಾರೆ. ಇದರಿಂದಾಗಿ, ರಾಜ್ಯದಲ್ಲಿ 24 ಗಂಟೆಯಲ್ಲಿ 37 ಮಂದಿ ಪ್ರಾಣ ಕಳೆದುಕೊಂಡಂತಾಗಿದೆ’ ಎಂದಿದ್ದಾರೆ.

‘ಮೃತರಲ್ಲಿ ದ್ವಿಚಕ್ರ ವಾಹನ ಸವಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾರು ಪ್ರಯಾಣಿಕರು ಹಾಗೂ ಪಾದಚಾರಿಗಳು ಸಹ ಮೃತಪಟ್ಟಿದ್ದಾರೆ. ಬೈಕ್ ಸವಾರ ಹಾಗೂ ಹಿಂಬದಿ ಸವಾರ, ತಮ್ಮ ಸುರಕ್ಷತೆಗಾಗಿ ಹೆಲ್ಮೆಟ್ ಧರಿಸಿ ಸಂಚರಿಸಬೇಕು. ಕಾರು ಚಾಲಕರು, ರಾತ್ರಿ ಸಮಯದಲ್ಲಿ ಹೆಚ್ಚು ಜಾಗೃತಿ ವಹಿಸಬೇಕು’ ಎಂದೂ ಹೇಳಿದ್ದಾರೆ.

ನಿದ್ರೆ ಮಂಪರಿನಲ್ಲಿ ಅಪಘಾತ: ಅಪಘಾತಗಳ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅಲೋಕ್‌ಕುಮಾರ್, ‘ದೂರದ ಪ್ರಯಾಣದ ಸಂದರ್ಭದಲ್ಲಿ ಚಾಲಕನ ನಿದ್ರೆ ಮಂಪರಿನಿಂದಾಗಿ ಅಪಘಾತಗಳು ಸಂಭವಿಸುತ್ತಿವೆ. ಚಿತ್ರದುರ್ಗದ ಅಪಘಾತಕ್ಕೂ ಇದೇ ಕಾರಣ. ಜನರು ಜೀವ ಕಳೆದುಕೊಳ್ಳುತ್ತಿರುವುದನ್ನು ನೋಡಿದರೆ ದುಃಖವಾಗುತ್ತಿದೆ. ಸವಾರರು ಹಾಗೂ ಚಾಲಕರು, ಜಾಗೃತಿಯಿಂದ ವಾಹನಗಳನ್ನು ಚಲಾಯಿಸಬೇಕು. ಅವರ ನಿರ್ಲಕ್ಷ್ಯದಿಂದ ಇತರರ ಪ್ರಾಣಕ್ಕೂ ಸಂಚಕಾರ ಬರುತ್ತದೆ ಎಂಬುದನ್ನು ಮರೆಯಬಾರದು’ ಎಂದು ಹೇಳಿದರು.

ಯಾವ ಜಿಲ್ಲೆಯಲ್ಲಿ ಎಷ್ಟು ಸಾವು

ಜಿಲ್ಲೆ	ಸಾವುಗಳು		
ತುಮಕೂರು	8	ಬೆಂಗಳೂರು ಗ್ರಾಮಾಂತರ	2
ಚಿತ್ರದುರ್ಗ	5	ಹಾಸನ	2
ಚಿಕ್ಕಮಗಳೂರು	4	ಮೈಸೂರು	2
ಮಂಡ್ಯ	3	ಬೆಂಗಳೂರು ನಗರ	1
		ಇತರೆ ಜಿಲ್ಲೆಗಳು	10

ಕಾಂತರಾಜು ಆಯೋಗ ಸಂಗ್ರಹಿಸಿದ್ದ ‘ದತ್ತಾಂಶ’ ವಿಶ್ಲೇಷಣೆಗೆ ತಜ್ಞರ ಸಮಿತಿ

ಜಾತಿ ಗಣತಿ ವರದಿ ಶೀಘ್ರ ಸಲ್ಲಿಕೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ 2015ರಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ನವೆಂಬರ್ ಅಂತ್ಯದ ಒಳಗೆ ಸರ್ಕಾರಕ್ಕೆ ಸಲ್ಲಿಸಲು ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಕಾರ್ಯಪ್ರವೃತ್ತವಾಗಿದೆ.

ಆಯೋಗದಿಂದ ವರದಿ ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಸ್ಪಷ್ಟಪಡಿಸಿರುವ ಕಾರಣದಿಂದ, ವರದಿ ಸಲ್ಲಿಕೆಗೆ ಅಗತ್ಯವಾದ ಕೆಲಸಗಳನ್ನು ಆಯೋಗ ತ್ವರಿತಗೊಳಿಸಿದೆ. ಅದಕ್ಕೆ ಪೂರಕವಾಗಿ, ಆಯೋಗಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಆಯೋಗದ ಸದಸ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ, ಎಚ್. ಕಾಂತರಾಜು ನೇತೃತ್ವದ ಆಯೋಗ ನಡೆಸಿದ್ದ ಸಮೀಕ್ಷೆಯ ಅಂಕಿಅಂಶಗಳನ್ನು (ದತ್ತಾಂಶ) ಬಳಸಿಕೊಂಡು ವರದಿ ತಯಾರಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಆ ಬೆನ್ನಲ್ಲೆ, ಆಯೋಗವು ಐವರು ವಿಷಯ ತಜ್ಞರ ಸಮಿತಿ ರಚಿಸಿ ಸರ್ಕಾರಕ್ಕೆ ಪತ್ರ ಬರೆದಿದೆ.

5ನೇ ಪುಟ ನೋಡಿ

98 ಗ್ರಾಮಗಳಲ್ಲಿ ನೀರು ಪೂರೈಕೆ ಸ್ಥಗಿತ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರದ (ಸೂಳೆಕೆರೆ) ನೀರು ಕುಡಿಯಲು ಯೋಗ್ಯವಲ್ಲ. ಹೀಗಾಗಿ ಜಿಲ್ಲೆಯ 89 ಗ್ರಾಮ ಹಾಗೂ ಚಿತ್ರದುರ್ಗ ಜಿಲ್ಲೆಯ 9 ಗ್ರಾಮಗಳು ಸೇರಿ ಒಟ್ಟು 98 ಗ್ರಾಮಗಳಿಗೆ ನೀರು ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ.

ಇದೇ ಕೆರೆಯಿಂದ ಪೂರೈಸಲಾಗಿದ್ದ ನೀರು ಕುಡಿದು ಚಿತ್ರದುರ್ಗದ ಕವಾಡಿಗರಹಟ್ಟಿಯಲ್ಲಿ ಇತ್ತೀಚೆಗಷ್ಟೇ 6 ಜನ ಮೃತಪಟ್ಟಿದ್ದು, 200ಕ್ಕೂ ಅಧಿಕ ಜನ ಅಸ್ವಸ್ಥರಾಗಿದ್ದರು.

ಶಾಂತಿಸಾಗರದ ಜಾಕ್‌ವೆಲ್‌ಗಳಿಂದ ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಸೂಕ್ಷ್ಮಾಣುಗಳು ಇರುವುದು ಪತ್ತೆಯಾಗಿತ್ತು. ಹೀಗಾಗಿ ನೀರು ಪೂರೈಕೆ ಸ್ಥಗಿತಗೊಳಿಸಿ ಪರ್ಯಾಯ ಮೂಲಗಳಿಂದ ನೀರು ಒದಗಿಸಲಾಗುತ್ತಿದೆ.

5ನೇ ಪುಟ ನೋಡಿ

ಒಳ ಪುಟಗಳು

ಹಂಪಿ: ಪ್ರವಾಸಿಗರ ದಂಡು 5
ಸೂಕ್ಷ್ಮ ವಲಯದಲ್ಲಿ ನಟ ಗಣೇಶ್ ಕಟ್ಟಡ: ಆಕ್ಷೇಪ 5



ಚಿನಕುರುಳಿ
ಪ್ರಕಾಶ್ ಶೆಟ್ಟಿ

ಸರ್ಕಾರಿ ಆಸ್ಪತ್ರೆಯಲ್ಲಿ ಒಂದೇ ದಿನ 18 ರೋಗಿಗಳ ಸಾವು

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆಯ ಕಲ್ವಾದಲ್ಲಿಯ ಸರ್ಕಾರ ಸ್ವಾಮ್ಯದ ಛತ್ರಪತಿ ಶಿವಾಜಿ ಮಹಾರಾಜ ಆಸ್ಪತ್ರೆಯಲ್ಲಿ (ಸಿಎಸ್‌ಎಚ್‌ಎಂ) 24 ಗಂಟೆಗಳ ಅವಧಿಯಲ್ಲಿ 18 ರೋಗಿಗಳು ಮೃತಪಟ್ಟಿದ್ದಾರೆ. ಮೃತರ ಸಂಬಂಧಿಗಳು ಆಸ್ಪತ್ರೆ ಎದುರು ಭಾನುವಾರ ಸಂಜೆ ಪ್ರತಿಭಟನೆ ನಡೆಸಿದರು.

ಠಾಣೆಯು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ತವರು ಜಿಲ್ಲೆಯೂ ಆಗಿದ್ದು, ಈ ವಿದ್ಯಮಾನವು ರಾಜಕೀಯ ಕೆಸರಾಟಕ್ಕೂ ಕಾರಣವಾಗಿದೆ.

9ನೇ ಪುಟ ನೋಡಿ

ಸೋಮವಾರ ಉಷ್ಣಾಂಶ 21° ಗರಿಷ್ಠ 30° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸುರಿಯುವ ಸಾಧ್ಯತೆ.

ಮುನ್ಸೂಚನೆ: ಮಂಗಳವಾರ 20° 30° | ಬುಧವಾರ 20° 29° | ಗುರುವಾರ 20° 29°

ಸೂರ್ಯೋದಯ: 6:09 ಸೂರ್ಯಾಸ್ತ : 6:43 ಚಂದ್ರೋದಯ: ರಾ. 3:02 ಚಂದ್ರಾಸ್ತ: ಸಂ. 6:42 ಭಾನುವಾರದ ಹವಾಮಾನ : ಗರಿಷ್ಠ 21° ಕನಿಷ್ಠ 30°

ಪ್ರಜಾವಾಣಿ

ಎಕ್ಸ್‌ಪ್ರೆಸ್ ವೇ: 2 ತಾಸಲ್ಲಿ 2 ಕಡೆ ದರೋಡೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ತಾಲ್ಲೂಕಿನಲ್ಲಿ ಎರಡು ಕಡೆ ಎರಡು ಗಂಟೆಗಳಲ್ಲಿ ದರೋಡೆ ನಡೆದಿದೆ.

ತಾಲ್ಲೂಕಿನ ನಗುವನಹಳ್ಳಿ ಗೇಟ್ ಸಮೀಪದಲ್ಲಿ ಭಾನುವಾರ ಮುಂಜಾನೆ ಒಂದು ಗಂಟೆ ಸಮಯದಲ್ಲಿ ಕಾರಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಉಡುಪಿಯ ಶಿವಪ್ರಸಾದ್– ಸುಮಾ ದಂಪತಿಗೆ ಚಾಕು ತೋರಿಸಿ 30 ಗ್ರಾಂ ಚಿನ್ನಾಭರಣವನ್ನು ದುಷ್ಕರ್ಮಿಗಳು ದೋಚಿದ್ದಾರೆ. ಅವರು ಹೆಲ್ಮೆಟ್ ಧರಿಸಿದ್ದರು ಎಂದು ದಂಪತಿ ತಿಳಿಸಿದ್ದಾರೆ.

ಕೊಪ್ಪಳ ಮೂಲದ ಶಿವಪ್ರಸಾದ್ ಉಡುಪಿಯ ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಯಾಗಿದ್ದು, ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಪ್ರವಾಸಕ್ಕೆ ಬಂದಿದ್ದರು. ತಂಗಲು ಹೋಟೆಲ್ ಕೊಠಡಿ ಸಿಗದ ಕಾರಣ ಹೆದ್ದಾರಿ ಪಕ್ಕದಲ್ಲಿ ಕಾರು ನಿಲ್ಲಿಸಿ ಅದರಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ನಗುವನಹಳ್ಳಿ ಗೇಟ್ ಬಳಿ ಭಾನುವಾರ ದರೋಡೆ ನಡೆದ ಸ್ಥಳಕ್ಕೆ ಮಂಡ್ಯ ಜಿಲ್ಲಾ ಎಸ್ಪಿ ಎನ್‌.ಯತೀಶ್ ಭೇಟಿ ನೀಡಿ ಪರಿಶೀಲಿಸಿದರು

ತಾಲ್ಲೂಕಿನ ಗೌರಿಪುರ ಬಳಿ, ವೈದ್ಯ ದಂಪತಿಯನ್ನು ದುಷ್ಕರ್ಮಿಗಳು ಬೆದರಿಸಿ 40 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಕೋಲಾರ ಜಿಲ್ಲೆ ಮಾಲೂರಿನ ಡಾ.ರಕ್ಷಿತ್ ರೆಡ್ಡಿ–ಡಾ.ಮಾನಸ ದಂಪತಿಗೆ ಚಾಕು ತೋರಿಸಿ ಈ ಕೃತ್ಯ ಎಸಗಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದಾಗ ಕಾರಿನ ಟೈರ್ ಪಂಕ್ಚರ್ ಆಗಿದ್ದು, ಮತ್ತೊಂದು ಟೈರ್ ಬದಲಿಸುತ್ತಿದ್ದಾಗ ಈ ಕೃತ್ಯ ನಡೆದಿದೆ.

ಎಸ್‌ಪಿ ಎನ್. ಯತೀಶ್, ಡಿವೈಎಸ್‌ಪಿ ಮುರಳಿ, ಸಿಪಿಐ ಬಿ.ಜಿ. ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಂಕಿತರಿಗೆ ನೆರವು: ವಿಚಾರಣೆ

ಬೆಂಗಳೂರು: ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ಮುಂದುವರಿಸಿರುವ ಸಿಸಿಬಿ ಪೊಲೀಸರು, ಶಂಕಿತರಿಗೆ ಹಣ ನೀಡುತ್ತಿದ್ದ ಆರೋಪದಡಿ ಪರಪ್ಪನ ಅಗ್ರಹಾರ ಕಾರಾಗೃಹ ಬಳಿಯ ದಿನಸಿ ಅಂಗಡಿ ಮಾಲೀಕನನ್ನು ವಿಚಾರಣೆ ನಡೆಸಿದ್ದಾರೆ.

‘ಪ್ರಕರಣದ ರೂವಾರಿಯಾಗಿರುವ ಶಂಕಿತ ಉಗ್ರ ಟಿ. ನಾಸೀರ್, ಜೈಲಿನಲ್ಲಿದ್ದುಕೊಂಡೇ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ. ಈತನಿಗೆ ಅಗತ್ಯವಿದ್ದ ಹಣವನ್ನು ದಿನಸಿ ಅಂಗಡಿ ಮಾಲೀಕ ನೀಡುತ್ತಿದ್ದ. ಇದಕ್ಕಾಗಿ ಶೇ 20ರಷ್ಟು ಕಮಿಷನ್ ಪಡೆಯುತ್ತಿದ್ದನೆಂಬ ಮಾಹಿತಿ ಇತ್ತು. ಹೀಗಾಗಿ, ಮಾಲೀಕನನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ನಾಸೀರ್ ಹಾಗೂ ಇತರೆ ಶಂಕಿತರು, ಹಲವು ದಿನ ಜೈಲಿನಲ್ಲಿದ್ದರು. ಜುನೇದ್ ಹಾಗೂ ಪರಿಚಯಸ್ಥರು ತಂದುಕೊಡುತ್ತಿದ್ದ ಹಣವನ್ನು ಮಾಲೀಕ ತನ್ನ ಬಳಿ ಇಟ್ಟುಕೊಳ್ಳುತ್ತಿದ್ದ. ಹಂತ ಹಂತವಾಗಿ ಜೈಲಿನಲ್ಲಿದ್ದ ನಾಸೀರ್ ಹಾಗೂ ಶಂಕಿತರಿಗೆ ತಲುಪಿಸುತ್ತಿದ್ದನೆಂಬುದು ಗೊತ್ತಾಗಿದೆ’ ಎಂದು ತಿಳಿಸಿವೆ.

‘ವಾಹನ ಅಡ್ಡಗಟ್ಟಿದರೆ ರೌಡಿಪಟ್ಟಿ’

ಬೆಂಗಳೂರು: ‘ರಸ್ತೆಯಲ್ಲಿ ಹೋಗುವ ವಾಹನಗಳನ್ನು ಸುಖಾಸುಮ್ಮನೇ ಅಡ್ಡಗಟ್ಟಿ ಗಲಾಟೆ ಮಾಡಿದರೆ, ಅಂಥ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ರೌಡಿ ಪಟ್ಟಿಗೆ ಹೆಸರು ಸೇರಿಸಲಾಗುವುದು’ ಎಂದು ಕಮಿಷನರ್ ಬಿ. ದಯಾನಂದ್ ಎಚ್ಚರಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಸ್ತೆಯಲ್ಲಿ ವಾಹನ ಅಡ್ಡಗಟ್ಟಿ ಸುಲಿಗೆ ಹಾಗೂ ಗಲಾಟೆ ಮಾಡುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು’ ಎಂದರು.

ಮತೀಯ ಗೂಂಡಾಗಿರಿ: ಆರೋಪಿ ಬಂಧನ

ಮಂಗಳೂರು: ಐವರ ಗುಂಪು ವ್ಯಕ್ತಿಯೊಬ್ಬರ ಮೇಲೆ ಶನಿವಾರ ಮತೀಯ ಗೂಂಡಾಗಿರಿ ನಡೆಸಿದ ಬಗ್ಗೆ ಸುಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಕೇರಳ ಮಲಪ್ಪುರ ಮೂಲದ, ಸದ್ಯ ಸುಳ್ಯದ ಅರಂತೋಡಿಯಲ್ಲಿ ನೆಲೆಸಿರುವ ಮೊಹಮ್ಮದ್ ಜಲೀಲ್ (39 ವರ್ಷ) ಹಲ್ಲೆಗೊಳಗಾದವರು. ಆರೋಪಿ, ಸೋಣಂಗೇರಿ ನಿವಾಸಿ ಪುನೀತ್‌ನನ್ನು ಬಂಧಿಸಲಾಗಿದೆ.

‘ಮಡಿಕೇರಿಯಿಂದ ಸುಳ್ಯಕ್ಕೆ ಬಂದಿದ್ದ ಪರಿಚಯದ ಯುವತಿ ವಿಶ್ರಾಂತಿ ಪಡೆಯಲು ಹೋಟೆಲ್‌ನ ಕೊಠಡಿಯನ್ನು ಬಾಡಿಗೆಗೆ ಪಡೆಯಲು ನೆರವಾಗಿದ್ದೆ. ತೋಡಿಕಾನಕ್ಕೆ ಮರಳುವಾಗ ಐವರ ಗುಂಪು ನನ್ನನ್ನು ಹಿಂಬಾಲಿಸಿತ್ತು. ಗುಂಪಿನಲ್ಲಿದ್ದವರು ನನ್ನ ಕಾರನ್ನು ಅಡ್ಡಗಟ್ಟಿ, ಯುವತಿಗೆ ಬಾಡಿಗೆ ಕೊಠಡಿ ಕೊಡಿಸಿದ್ದನ್ನು ಪ್ರಶ್ನಿಸಿದ್ದರು. ಅವಾಚ್ಯವಾಗಿ ಬೈದು, ಹಲ್ಲೆ ನಡೆಸಿ, ಜೀವ ಬೆದರಿಕೆ ಒಡ್ಡಿದ್ದರು ಎಂದು ಜಲೀಲ್ ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿವೆ.

ಸುದ್ದಿ 2 ನಿಮಿಷ

ನ್ಯಾಯಾಧೀಶರ ನೇಮಕಕ್ಕೆ ಮನವಿ

ಬೆಂಗಳೂರು: ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳಲ್ಲಿ ಇರುವ ಸರ್ಕಾರದ ಪ್ರಕರಣಗಳ ಸಮರ್ಥ ಮತ್ತು ತ್ವರಿತ ವಿಲೇವಾರಿಗೆ ವಿಚಕ್ಷಣ ದಳ ರಚಿಸಬೇಕು. ಕೊರತೆ ಇರುವ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರಿಗೆ ಮನವಿ ಮಾಡಿದ್ದಾರೆ.

ಸರ್ಕಾರದ ಆಸ್ತಿಗಳನ್ನು ಉಳಿಸುವ ನಿಟ್ಟಿನಲ್ಲಿ, ನ್ಯಾಯಪೀಠಗಳಲ್ಲಿ ಸರ್ಕಾರದ ಪರವಾಗಿ ಸಮರ್ಥ ವಾದ ಮಂಡಿಸಲು ಅನುಕೂಲವಾಗುವಂತೆ ವ್ಯವಸ್ಥೆಯೊಂದನ್ನು ಜಾರಿಗೆ ತರುವ ಅವಶ್ಯಕತೆ ಇದೆ. ಸರ್ಕಾರಿ ವಕೀಲರು ಮತ್ತು ದಾಖಲಾತಿಗಳನ್ನು ಒದಗಿಸಲು ಸರ್ಕಾರಿ ಅಧಿಕಾರಿಗಳು ವಿಫಲರಾಗಿದ್ದರಿಂದ ಹಲವು ಪ್ರಕರಣಗಳಲ್ಲಿ ಸರ್ಕಾರದ ವಿರುದ್ಧ ತೀರ್ಪು ಬಂದಿದೆ. ರಾಜ್ಯ, ಹಾಗೂ ಜಿಲ್ಲಾ ಮಟ್ಟದಲ್ಲಿ ವಿಚಕ್ಷಣ ದಳ ರಚಿಸಿ ಅದರ ಮೂಲಕ ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರಿ ವಕೀಲರ ಮಧ್ಯ ಕೊಂಡಿಯಾಗಿ ಕೆಲಸ ಮಾಡಲು ಕ್ರಮ ವಹಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ವಿಚಕ್ಷಣ ದಳಕ್ಕೆ ರಾಜ್ಯ ಮಟ್ಟದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯನ್ನು ಮುಖ್ಯಸ್ಥರನ್ನಾಗಿ ನೇಮಿಸಬೇಕು. ನಿವೃತ್ತ ಐಎಎಸ್ ಅಧಿಕಾರಿ ಮತ್ತು ಕೆಲವು ಕಾನೂನು ಪರಿಣಿತರ ಒಂದು ತಂಡವನ್ನು ರಚಿಸಬೇಕು. ಜಿಲ್ಲಾ ಮಟ್ಟದಲ್ಲಿ ಹಿರಿಯ ವಕೀಲರು ಮತ್ತು ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಕ್ಷಣ ದಳದ ತಂಡ ರಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಬಾರದ ಸಚಿವರು: ಆಕ್ರೋಶ

ಬೆಂಗಳೂರು: ಕೆಪಿಟಿಸಿಎಲ್ ಹಾಗೂ ಎಲ್ಲ ಎಸ್ಕಾಂಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಲು ಆಗ್ರಹಿಸಿ ರಾಜ್ಯ ಕೆಪಿಟಿಸಿಎಲ್ ಹೊರ ಗುತ್ತಿಗೆ ನೌಕರರ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನೆ ಭಾನುವಾರವೂ ಮುಂದುವರಿಯಿತು.

ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭವಾಗಿ ನಾಲ್ಕು ದಿನ ಕಳೆದಿದ್ದರೂ ಸ್ಥಳಕ್ಕೆ ಸಚಿವರು ಹಾಗೂ ಅಧಿಕಾರಿಗಳು ಬಂದು ಸಮಸ್ಯೆ ಆಲಿಸಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರ ಸಮಸ್ಯೆಯನ್ನು ಆಲಿಸಲು ಸ್ಥಳಕ್ಕೆ ಸಚಿವರೇ ಬರಬೇಕು. ಇಂಧನ ಇಲಾಖೆ ಉಪ ಕೇಂದ್ರಗಳಲ್ಲಿ ಪಾಳಿ ಎಂಜಿನಿಯರ್ ಗ್ರೇಡ್–1, ಪಾಳಿ ಎಂಜಿನಿಯರ್ ಗ್ರೇಡ್–2, ಸ್ಟೇಷನ್ ಸಹಾಯಕರು, ಗ್ಯಾಂಗ್‌ಮನ್, ಮೀಟರ್ ರೀಡರ್ಸ್, ಚಾಲಕರು ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಮಳೆಗಾಲದಲ್ಲಿ ಅತ್ಯಂತ ಅಪಾಯಕಾರಿ ಸ್ಥಳ ಕೆಲಸ ಮಾಡುತ್ತಿದ್ದೇವೆ. ಆದರೆ, ಸರ್ಕಾರವು ಹೊರಗುತ್ತಿಗೆ ನೌಕರರನ್ನು ಕಡೆಗಣಿಸಿದೆ’ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

‘ಸರ್ಕಾರವು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದೆ. ಸರ್ಕಾರದ ನಿರ್ಲಕ್ಷ್ಯದಿಂದ ಸೇವಾ ಭದ್ರತೆಯಿಲ್ಲದೇ ಶೋಷಣೆಗೆ ಒಳಗಾಗುತ್ತಿದ್ದೇವೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವಾದರೂ ಸ್ಪಂದಿಸಿ ಸೇವೆ ಕಾಯಂ ಮಾಡಬೇಕು’ ಎಂದು ಸಂಘದ ಅಧ್ಯಕ್ಷ ಲೀಲಾಸಾಗರ್ ಆಗ್ರಹಿಸಿದರು.

ಜೋಡಿ ಕೊಲೆ: ಒಂದೇ ತಿಂಗಳಲ್ಲಿ ಆರೋಪ ಪಟ್ಟಿ

ಬೆಂಗಳೂರು: ಏರೋನಿಕ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಫಣೀಂದ್ರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ವಿನುಕುಮಾರ್ ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ನಾಲ್ವರು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಜುಲೈ 11ರಂದು ನಡೆದಿದ್ದ ಕೊಲೆ ಪ್ರಕರಣದಲ್ಲಿ ಶಬರೀಷ್ ಅಲಿ–ಯಾಸ್ ಫೆಲಿಕ್ಸ್, ವಿನಯ್ ರೆಡ್ಡಿ, ಸಂತೋಷ್ ಅಲಿಯಾಸ್ ಸಂತು , ಅರುಣ್‌ಕುಮಾರ್ ಆಜಾದ್‌ನನ್ನು ಬಂಧಿಸಲಾಗಿತ್ತು.

ತನಿಖೆ ನಡೆಸಿದ್ದ ಎಸಿಪಿ ಟಿ. ರಂಗಪ್ಪ ಹಾಗೂ ಇನ್‌ಸ್ಪೆಕ್ಟರ್ ಗುರುಪ್ರಸಾದ್ ಜಿ. ನೇತೃತ್ವದ ತಂಡ, ಒಂದೇ ತಿಂಗಳಿನಲ್ಲಿ 1,350 ಪುಟಗಳ ಆರೋಪ ಪಟ್ಟಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

‘ವೃತ್ತಿ ವೈಷಮ್ಯದಿಂದಾಗಿ ಕೃತ್ಯ ಎಸಗಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. 22 ಸ್ಥಳಗಳಲ್ಲಿ ಮಹಜರು ನಡೆಸಿ, 126 ಸಾಕ್ಷಿಗಳ ಹೇಳಿಕೆ ಪಡೆಯಲಾಗಿದೆ. ಪುರಾವೆಗಳನ್ನು ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ನೀಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

₹ 30 ಸಾವಿರ ಕೊಟ್ಟಿದ್ದ ಅರುಣ್: ‘ಜಿ–ನೆಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಫಣೀಂದ್ರ ಹಾಗೂ ವಿನುಕುಮಾರ್, ರಾಜೀನಾಮೆ ನೀಡಿ ಹೊರಗೆ ಬಂದಿದ್ದರು. ಹೊಸದಾಗಿ ಏರೋನಿಕ್ಸ್ ಕಂಪನಿ ಕಟ್ಟಿದ್ದರು. ಇದರಿಂದಾಗಿ ಅರುಣ್ ಕುಮಾರ್‌ನ ಜಿ–ನೆಟ್ ಕಂಪನಿಗೆ ನಷ್ಟವಾಗಿತ್ತು. ‘ಫಣೀಂದ್ರ ಹಾಗೂ ವಿನುಕುಮಾರ್ ವಿರುದ್ಧ ವೈಷಮ್ಯ ಬೆಳೆಸಿಕೊಂಡಿದ್ದ ಅರುಣ್‌ಕುಮಾರ್, ವಿಚಾರವನ್ನು ಶಬರೀಷ್ ಅಲಿಯಾಸ್ ಫೆಲಿಕ್ಸ್‌ಗೆ ಹೇಳಿದ್ದ. ಜೊತೆಗೆ, ₹ 30 ಹಣ, ಮಾರಕಾಸ್ತ್ರ ಹೊಂದಿಸಿಕೊಟ್ಟಿದ್ದ.’

‘ಏರೋನಿಕ್ಸ್ ಕಂಪನಿಯಲ್ಲಿದ್ದ ಫೆಲಿಕ್ಸ್‌ನನ್ನು ಕೆಲಸದಿಂದ ತೆಗೆಯಲಾಗಿತ್ತು. ಈತ ಸಹ ಫಣೀಂದ್ರ ಹಾಗೂ ವಿನುಕುಮಾರ್ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಇತರರ ಜೊತೆ ಸೇರಿ ಇಬ್ಬರನ್ನೂ ಹತ್ಯೆ ಮಾಡಿದ್ದ. ಕೃತ್ಯದ ಸಂಚು ಹಾಗೂ ಇತರೆ ಎಲ್ಲ ಮಾಹಿತಿಗೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಿ ಆರೋಪ ಪಟ್ಟಿ ಜೊತೆ ಲಗತ್ತಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೋಕಟ್ಟೆಯಲ್ಲಿ ಮುಳುಗಿ ನಾಲ್ವರು ಸಾವು

ಸಿದ್ಧಗಂಗಾ ಮಠದ ಗೋಕಟ್ಟೆಯಲ್ಲಿ ಘಟನೆ • ರಕ್ಷಣೆಗೆ ಹೋದವರೂ ನೀರುಪಾಲು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಸಿದ್ಧಗಂಗಾ ಮಠದ ಹಿಂಭಾಗದ ಗೋಕಟ್ಟೆಯಲ್ಲಿ ಮುಳುಗಿ ಮಠದ ವಿದ್ಯಾರ್ಥಿ ನಿಲಯದ ಇಬ್ಬರು ವಿದ್ಯಾರ್ಥಿಗಳು ಮತ್ತು ಅವರನ್ನು ರಕ್ಷಿಸಲು ನೀರಿಗಿಳಿದ ಪೋಷಕರು ಸೇರಿದಂತೆ ಒಟ್ಟು ನಾಲ್ವರು ಭಾನುವಾರ ಸಾವನ್ನಪ್ಪಿದ್ದಾರೆ.

ಲಕ್ಷ್ಮಿ

ಮಠದ ವಿದ್ಯಾರ್ಥಿ ನಿಲಯದಲ್ಲಿದ್ದ ರಾಮನಗರದ ಹರ್ಷಿತ್ (12) ಮತ್ತು ಚಿಕ್ಕಬಳ್ಳಾಪುರದ ಶಂಕರ್ (12) ಹಾಗೂ ಮಕ್ಕಳನ್ನು ಕಾಣಲು ಬಂದಿದ್ದ ಬೆಂಗಳೂರಿನ ಬಾಗಲಗುಂಟೆ ನಿವಾಸಿ ಲಕ್ಷ್ಮಿ(33) ಮತ್ತು ಯಾದಗಿರಿ ಜಿಲ್ಲೆಯ ಮಹದೇವಪ್ಪ (40) ಎಂಬವರು ಗೋಕಟ್ಟೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತ ವಿದ್ಯಾರ್ಥಿಗಳು ಆರನೇ ತರಗತಿಯಲ್ಲಿ ಓದುತ್ತಿದ್ದರು.

ತುಮಕೂರಿನ ಸಿದ್ಧಗಂಗಾ ಮಠದ ಹಿಂಭಾಗದಲ್ಲಿರುವ ಗೋಕಟ್ಟೆಯ ಬಳಿ ಮೃತರ ಸಂಬಂಧಿಕರ ಆಕ್ರಂದನ

ಬೆಂಗಳೂರಿನ ಬಾಗಲಗುಂಟೆಯ ಲಕ್ಷ್ಮಿ ಅವರು ಮಗ ರಂಜಿತ್‌ನನ್ನು ನೋಡಲು ಮಠಕ್ಕೆ ಬಂದಿದ್ದರು. ಮಧ್ಯಾಹ್ನ ಊಟದ ನಂತರ ವಿರಮಿಸಲು ರಂಜಿತ್ ಹಾಗೂ ಆತನ ಸ್ನೇಹಿತರಾದ ಹರ್ಷಿತ್, ಶಂಕರ್ ಜೊತೆ ಗೋಕಟ್ಟೆ ಬಳಿ ವಿಹಾರಕ್ಕೆ ತೆರಳಿದಾಗ ಈ ಘಟನೆ ನಡೆದಿದೆ.

‘ಘಟನೆಗೂ ಮುನ್ನ ಮಕ್ಕಳು ಗೋಕಟ್ಟೆಯ ಬಳಿ ಫೋಟೊ ತೆಗೆಸಿಕೊಂಡಿದ್ದಾರೆ. ಸೆಲ್ಫಿ ತೆಗೆದುಕೊಳ್ಳಲು ಹೋದಾಗ ಕಾಲು ಜಾರಿ ಬಿದ್ದಿರಬಹುದು ಎಂಬ ಶಂಕೆ ಇದೆ’ ಎಂದು ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಹೇಳಿದರು.

ನಡೆದದ್ದು ಹೇಗೆ?: ಆಟ ಆಡುತ್ತಿದ್ದಾಗ ಕಾಲಿಗೆ ಮೆತ್ತಿದ ಕೆಸರು ತೊಳೆದುಕೊಳ್ಳಲು ಗೋಕಟ್ಟೆಗೆ ಇಳಿದ ರಂಜಿತ್ ಕಾಲು ಜಾರಿ ನೀರಿಗೆ ಬಿದ್ದಿದ್ದಾನೆ. ಆತನನ್ನು ರಕ್ಷಿಸಲು ಸ್ನೇಹಿತರಾದ ಶಂಕರ್, ಹರ್ಷಿತ್ ಮತ್ತು ರಂಜಿತ್ ತಾಯಿ ಲಕ್ಷ್ಮಿ ಕೂಡ ನೀರಿಗೆ ಇಳಿದಿದ್ದಾರೆ. ನಾಲ್ವರ ಕೂಗಾಟ ಕೇಳಿ ಅಲ್ಲಿಯೇ ಇದ್ದ ಮಹದೇವಪ್ಪ ಕೂಡ ರಕ್ಷಣೆಗಾಗಿ ನೀರಿಗಿಳಿದಿದ್ದಾರೆ.

ರಂಜಿತ್‌ನನ್ನು ರಕ್ಷಿಸಿದ ನಂತರ ಇತರರನ್ನು ರಕ್ಷಿಸಲು ಹೋದ ಮಹದೇವಪ್ಪ ನೀರು ಪಾಲಾಗಿದ್ದಾರೆ. ಹರ್ಷಿತ್, ಶಂಕರ್ ಮತ್ತು ಲಕ್ಷ್ಮಿ ನೀರಿನಲ್ಲಿ ಮುಳುಗಿ ಪ್ರಾಣ ಬಿಟ್ಟಿದ್ದಾರೆ. ಸದ್ಯ ಲಕ್ಷ್ಮಿ ಮತ್ತು ಹರ್ಷಿತ್ ಶವಗಳನ್ನು ಹೊರ ತೆಗೆಯಲಾಗಿದೆ. ಶಂಕರ್ ಮತ್ತು ಮಹದೇವಪ್ಪ ಅವರ ಶವಗಳಿಗಾಗಿ ಹುಡುಕಾಟ ಮುಂದುವರಿದಿದೆ.

ಭಾನುವಾರ ರಜೆ ಇದ್ದ ಕಾರಣ ಮಹದೇವಪ್ಪ ಹಾಸ್ಟೆಲ್‌ನಲ್ಲಿದ್ದ ಮಗನನ್ನು ಕಾಣಲು ಯಾದಗಿರಿಯಿಂದ ಬಂದಿದ್ದರು. ಪ್ರತಿ ವಾರ ಮಕ್ಕಳ ಜತೆ ಸಮಯ ಕಳೆಯಲು ಪೋಷಕರು ಮಠಕ್ಕೆ ಬರುತ್ತಾರೆ. ಸೆಲ್ಫಿ ತೆಗೆದುಕೊಳ್ಳುವಾಗ ಈ ಘಟನೆ ನಡೆದಿದೆ ಎಂಬುವುದು ಸುಳ್ಳು ಎಂದು ಎಸ್‌ಪಿ ರಾಹುಲ್‌ಕುಮಾರ್ ಶಹಪೂರವಾಡ್ ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

R LIMITTY, Wife/o JC731340W, SUB, VIJU KUMAR G, Vill- Methukummal, Sooriacode, Vilavancode, Kanyakumari, Tamil Nadu changed name R LIMITTY to LIMITTY, 11/08/2023, Notary K.V.Mani, Bangalore

PRASANTH K, JC682187Y, NB SUB, Vill- Kanichar, Manathana, Iritty, Kannur, Kerala changed Son's name ADITHYAN to ADITHYA PRASHANTH K, 12/08/2023, Notary K.V. Mani, Bangalore

PUBLIC NOTICE

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

CARRIER OPPORTUNITY to Earn 50k to 1 Lakh per month for Retired, Bankers, Sr.Citizens, Business People and Housewife Part/ Full time. Contact:- 9480612899/ 9008002763.

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PUBLIC NOTICE

My client proposes to develop the property more particularly described in the schedule hereunder from its present owners
(1) MR SIRAJ.,aged about 54 years, son of **Mr.Abdul Basith,**
(2) MRS.HEENA KOWSER, aged about 44 years, wife of Mr.Siraj,
(3) MR.ABDUL SALIK, aged about 24 years, son of Mr.Siraj and
(4)MS.SABURA TAJ, aged about 20 years, daughter of Mr.Siraj, all Residing at S.S.Mansion, No.23, Berlie Street, Langford Town, Shanthinagar, Bengaluru – 560 025.

It is represented by the present owners that they have a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY

All that piece and parcel of the residentially converted land measuring an extent of about 4 Acres 33 Guntas or about 19601.13 sq.mtrs (out of 5 Acres 9 Gunts) comprised in Old Sy.No.30/1A2,New Sy.No.30/25, situated at Chikkanagamangala Village, Sarjapura Hobli, Anekal Taluk, Bangalore District (converted vide Revised Official Memorandum bearing No.ALN(ASH)SR.06/2011-12, dated:02/07/2015 issued by the Special Deputy Commissioner, Bangalore District, Bangalore)presently bearing Property No.150200100500420044 assigned by the Panchayat Development Officer, Department of Rural Development and Panchayat Raj, Shanthipura, Anekal with a Road presently running East to West through the middle of the property connecting Doddanagamangala Village to Chikkanagamangala Village with a present width of 9.5 mtrs and proposed width of 24 mtrs and bounded on the

East by : Sy.No.30/1A1A1 of Chikkanagamangala Village
West by : Sy.No.30/1A1B 1A1C of Chikkanagamangala Village
North by : Sy.No.30/1A1AS of Chikkanagamangala Village
South by : Village boundary of Veerasandra Village

ARVIND RAGHAVAN
Advocate
No.48, "ISHITHA", 2ND Floor, 2nd Main Road, Vyalikaval, Bangalore – 560 003. Mob: 98450 04419

Bangalore Dated:14/08/2023

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9886213331 : 9901641752
9845114560 : 9731810277
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

‘ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ’

ನಗರದ ಕಾಟನ್ ಪೇಟೆ ವಾರ್ಡ್ ಸಂಖ್ಯೆ 120ರ ಬೇಲಿಮಠದ ರಸ್ತೆ ಮತ್ತು ಬಾಲಗಂಗಾಧರ ಸ್ವಾಮೀಜಿ ವಸತಿನಿಲಯದ ಪಕ್ಕದಲ್ಲಿನ ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗಿದೆ. ಈ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ವಸತಿನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ವಾರ್ಡ್ ಸಂಖ್ಯೆ 120ರ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೆ, ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ. ಕೂಡಲೇ ಈ ಪ್ರದೇಶವನ್ನು ಸ್ವಚ್ಛಗೊಳಿಸಲು ಅಧಿಕಾರಿಗಳು ಕ್ರಮಕೈಗೊಳ್ಳಬೇಕು.

ಎಸ್ ಪ್ರಭಾಕರ್, ಚಾಮರಾಜಪೇಟೆ



ಚಾಮರಾಜಪೇಟೆ, ವಾರ್ಡ್ ಸಂಖ್ಯೆ 120 ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ.

ಹೆಸರಘಟ್ಟ ಮುಖ್ಯರಸ್ತೆಯ ಸಿಡೇದಹಳ್ಳಿ ಎನ್‌.ಎಂ. ಎಚ್‌.ರಸ್ತೆಯ ದುಃಸ್ಥಿತಿ.

‘ರಸ್ತೆ ಗುಂಡಿ ಮುಚ್ಚಿ’

ನಗರದ ಹೆಸರಘಟ್ಟ ಮುಖ್ಯರಸ್ತೆಯ ಸಿಡೇದಹಳ್ಳಿ ಎನ್‌.ಎಂ. ಎಚ್‌.ರಸ್ತೆ ಗುಂಡಿಗಳಿಂದ ಕೂಡಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ, ವಾಹನ ಸಂಚಾರಕ್ಕೆ ಅನನಕೂಲವಾಗಿದೆ. ಜತೆಗೆ, ಹಲವಾರು ಅಪಘಾತಗಳು ಸಂಭವಿಸುತ್ತಿವೆ. ಬಿಬಿಎಂಪಿ ಅವರು ಕೂಡಲೇ ಈ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಬೇಕು. ಇಲ್ಲದಿದ್ದರೆ ರಸ್ತೆ ಬಂದ ಮಾಡುವ ಮೂಲಕ ಪ್ರತಿಭಟನೆ ಮಾಡಲಾಗುವುದು.

ಸಂಪತ್, ಕಿರಣ್, ಸ್ಥಳೀಯ ನಿವಾಸಿಗಳು

‘ಪಾದಚಾರಿ ಮಾರ್ಗದಲ್ಲಿ ಕಸ’

ಸಂಪಂಗಿ ರಾಮನಗರದ ಮಿಷನ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇದರಲ್ಲಿ ಬಹುತೇಕ ಕಟ್ಟಡ ತ್ಯಾಜ್ಯವನ್ನು ಪಾದಚಾರಿ ಮಾರ್ಗದಲ್ಲಿ ಸುರಿಯಲಾಗಿದೆ. ಇದರಿಂದ, ನಡಿಗೆದಾರರಿಗೆ ಅನನುಕೂಲವಾಗಿದೆ. ಈ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಿದ್ದು, ಪಾದಚಾರಿಗಳು ಜೀವ ಭಯದಲ್ಲಿ ಮುಖ್ಯರಸ್ತೆಯಲ್ಲಿ ಸಾಗುವ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಬಿಬಿಎಂಪಿ ಅವರು ಕಸ ತೆರವುಗೊಳಿಸಬೇಕು.

ಸುರೇಶ್, ಸ್ಥಳೀಯ ನಿವಾಸಿ

ಸಂಪಂಗಿ ರಾಮನಗರದ ಮಿಷನ್ ರಸ್ತೆಯ ಪಾದಚಾರಿ ಮಾರ್ಗ ಹಾಕಿರುವ ಕಸ.

‘ರಸ್ತೆ ಸರಿಪಡಿಸಿ’

ಹೊಸಕೆರೆ ಕೋಡಿಯಿಂದ ಆರ್‌.ಆರ್‌. ನಗರಕ್ಕೆ ಸಂಪರ್ಕ ಕಲ್ಪಿಸುವ ಕೆರೆ ಏರಿ ರಸ್ತೆಯ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ, ವಾಹನ ಸವಾರರಿಗೆ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದೆ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಾಗುತ್ತದೆ. ಇತ್ತೀಚೆಗೆ ಸುರಿದ ಮಳೆಯಿಂದ ಈ ರಸ್ತೆಯಲ್ಲಿ ದೊಡ್ಡ–ದೊಡ್ಡ ಹೊಂಡಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಸಾಹಸ ಪಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಚ್‌.ಸಿ. ಶ್ರೀನಿವಾಸ್, ಸ್ಥಳೀಯ ನಿವಾಸಿ



ಹೊಸಕೆರೆಹಳ್ಳಿಯಿಂದ ಆರ್‌.ಆರ್‌. ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ದುಃಸ್ಥಿತಿ.

ಸಿಬಿಐ ಕಚೇರಿ ಹತ್ತಿರವಿರುವ ಬಳ್ಳಾರಿ ಮುಖ್ಯರಸ್ತೆಯ ದುಃಸ್ಥಿತಿ.

‘ರಸ್ತೆ ದುರಸ್ತಿಗೊಳಿಸಿ’

ನಗರದ ಸಿಬಿಐ ಕಚೇರಿಯ ಬಳಿ ಬಳ್ಳಾರಿ ರಸ್ತೆಯನ್ನು ಎರಡು ತಿಂಗಳಲ್ಲಿ ಮೂರು ಬಾರಿ ದುರಸ್ತಿಗೊಳಿಸಲಾಗಿದೆ. ಆದರೆ, ಕಳಪೆ ಕಾಮಗಾರಿಯಿಂದ ರಸ್ತೆಯಲ್ಲಿ ಮತ್ತೆ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರಿಗೆ ತಲೆ ನೋವಾಗಿ ಪರಿಣಮಿಸಿದೆ. ಪ್ರತಿನಿತ್ಯ ರಸ್ತೆಯಿಂದ ನಗರಕ್ಕೆ ಸಾವಿರಾರು ವಾಹನಗಳು ಪ್ರವೇಶಿಸುತ್ತಿವೆ. ಈ ಗುಂಡಿಗಳ ಕಾರಣದಿಂದ ಸಂಚಾರ ದಟ್ಟಣೆಯಾಗುತ್ತಿದೆ. ಜತೆಗೆ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿದ್ದು, ಕೂಡಲೇ ಬಿಬಿಎಂಪಿ ಅಧಿಕಾರಿಗಳು ಈ ರಸ್ತೆ ದುರಸ್ತಿಗೊಳಿಸಿ ಶಾಶ್ವತ ಪರಿಹಾರ ಕಲ್ಪಿಸಬೇಕು.

ಶುಭಾ, ದ್ವಿಚಕ್ರ ವಾಹನ ಸವಾರರು

‘ವಿದ್ಯುತ್ ಕಂಬ ತೆರವುಗೊಳಿಸಿ’

ಇಸ್ರೊ ಲೇಔಟ್‌ನ ಎಸ್‌–5 ವಿಭಾಗದ ರಸ್ತೆಯ ಮಧ್ಯದಲ್ಲಿ ಅಳವಡಿಸಿರುವ ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕು. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ರಸ್ತೆಯ ಮಧ್ಯದಲ್ಲಿ ಕಂಬ ಇರುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಈ ಬಗ್ಗೆ ಬೆಸ್ಕಾಂ ಸಹಾಯವಾಣಿಗೆ ಕರೆ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ.

ಮುನಿರಾಜು, ಸ್ಥಳೀಯ ನಿವಾಸಿ

ಇಸ್ರೊ ಲೇಔಟ್ ರಸ್ತೆ ಮಧ್ಯದಲ್ಲಿರುವ ವಿದ್ಯುತ್ ಕಂಬ.

ಪಥಸಂಚಲನದ ಅಭ್ಯಾಸದಲ್ಲಿ ರಮಣಶ್ರೀ ಅಕಾಡೆಮಿಯ ಅಂಧ ಮಕ್ಕಳು ಭಾಗವಹಿಸಿದ್ದರು

ಜೆ.ಪಿ. ನಗರದ ಪಬ್ಲಿಕ್ ಶಾಲೆಯ ಮಕ್ಕಳು ನೃತ್ಯದ ಅಭ್ಯಾಸದಲ್ಲಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರಗಳು/ಎಸ್.ಕೆ. ದಿನೇಶ್

ಸಂಚಾರ ನಿರ್ಬಂಧ

‘15ರಂದು ಬೆಳಿಗ್ಗೆ 8ರಿಂದ 11ರವರೆಗೆ ಕಬ್ಬನ್ ರಸ್ತೆಯಲ್ಲಿ ಬಿಆರ್‌ವಿ ಜಂಕ್ಷನ್‌ನಿಂದ ಕಾಮರಾಜ್ ಜಂಕ್ಷನ್‌ವರೆಗೆ ಸಂಚಾರ ನಿರ್ಬಂಧಿಸಿ, ಪರ್ಯಾಯ ಮಾರ್ಗದಲ್ಲಿ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್. ತಿಳಿಸಿದರು.

‘ಮೈದಾನದ ಸುತ್ತಮುತ್ತ ವಾಹನ ನಿಲುಗಡೆಗೆ ಸ್ಥಳಾವಕಾಶದ ಸಮಸ್ಯೆ ಇರುವುದರಿಂದ ಸಾರ್ವಜನಿಕರು ಬಸ್ ಹಾಗೂ ಮೆಟ್ರೊ ಸೇವೆ ಬಳಸಿಕೊಳ್ಳಬೇಕು’ ಎಂದು ಮನವಿ ಮಾಡಿದರು.

ಬಿಗಿ ಭದ್ರತೆ: ಸ್ವಾತಂತ್ರ್ಯ ದಿನಾಚರಣೆಗೆ ನಗರದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಭದ್ರತೆಗೆ 1,786 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ’ ಎಂದು ತಿಳಿಸಿದರು.

ಒಂಬತ್ತು ಡಿಸಿಪಿ, 15 ಎಸಿಪಿ, 43 ಪೊಲೀಸ್ ಇನ್‌ಸ್ಪೆಕ್ಟರ್, 110 ಪಿಎಸ್‌ಐ, 72ಎಎಸ್‌ಐ, 554 ಹೆಡ್ ಕಾನ್‌ಸ್ಟೆಬಲ್ ಮತ್ತು ಪೊಲೀಸ್ ಕಾನ್‌ಸ್ಟೆಬಲ್, 70 ಮಹಿಳಾ ಪೊಲೀಸ್, 157 ಸಾದಾ ಉಡುಪಿನ ಸಿಬ್ಬಂದಿಗಳು ಮತ್ತು 56 ಕ್ಯಾಮರಾ ಸಿಬ್ಬಂದಿಗಳು ಹಾಗೂ 10 ಶಸಸ್ತ್ರ ಪಡೆ ತುಕಡಿಗಳನ್ನು ನಿಯೋಜಿಸಲಾಗಿದೆ. ಕಣ್ಗಾವಲಿಗೆ 100 ಸಿ.ಸಿ ಟಿ.ವಿ ಕ್ಯಾಮೆರಾಗಳು, ಮೂರು ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಅಳವಡಿಸಲಾಗಿದೆ’ ಎಂದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಮೋಟಾರ್ ಬೈಕ್ ಸಾಹಸ ಪ್ರದರ್ಶನದ ಅಭ್ಯಾಸ

ಸ್ವಾತಂತ್ರ್ಯೋತ್ಸವಕ್ಕೆ ಸಂಭ್ರಮದ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆ. 15ರಂದು ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆಗಳು ಮಾಡಲಾಗಿದೆ.

ಆಕರ್ಷಕ ಪರೇಡ್, ಸಾಂಸ್ಕೃತಿಕ ಕಾರ್ಯಕ್ರಮ, ಸೇನಾ ಸಿಬ್ಬಂದಿಯಿಂದ ಮೈನವಿರೇಳಿಸುವ ಮೋಟಾರ್ ಬೈಕ್ ಸಾಹಸ ಪ್ರದರ್ಶನಕ್ಕೆ ಮಾಣೆಕ್ ಷಾ ಪರೇಡ್ ಮೈದಾನ ಸಜ್ಜಾಗಿದೆ. ಗಣ್ಯರು, ಸಾರ್ವಜನಿಕರು ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳು ಸಂಭ್ರಮ ಕಣ್ತುಂಬಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಬೆಳಿಗ್ಗೆ 9 ಗಂಟೆಗೆ ರಾಷ್ಟ್ರಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಮುಖ್ಯಮಂತ್ರಿ ಅವರು ತೆರೆದ ಜೀಪಿನಲ್ಲಿ ಪರೇಡ್ ತುಕಡಿಗಳ ಪರಿವೀಕ್ಷಣೆ ನಡೆಸಿ, ಸ್ವಾತಂತ್ರ್ಯೋತ್ಸವದ ಸಂದೇಶ ನೀಡಲಿದ್ದಾರೆ’ ಎಂದು ವಿವರಿಸಿದರು.

‘ಪರೇಡ್‌ನಲ್ಲಿ ಬಿಎಸ್‌ಎಫ್, ಮಹಿಳಾ ಸಿಆರ್‌ಪಿಎಫ್, ಗೋವಾ ಪೊಲೀಸ್, ಮಹಿಳಾ ಕೆಎಸ್‌ಆರ್‌ಪಿ, ಕೆಎಸ್‌ಆರ್‌ಪಿ, ಸಿಎಆರ್, ಕೆಎಸ್‌ಐಎಸ್‌ಎಫ್, ಎನ್‌ಸಿಸಿ ಸಶಸ್ತ್ರ ತುಕಡಿಗಳು ಹಾಗೂ ಪೊಲೀಸ್ ತಂಡಗಳು ಭಾಗವಹಿಸಲಿವೆ. ಹೋಂ ಗಾರ್ಡ್ಸ್, ಟ್ರಾಫಿಕ್ ವಾರ್ಡನ್, ಅಗ್ನಿಶಾಮಕ ದಳ ಸಿಬ್ಬಂದಿ, ಡಾಗ್ ಸ್ಕ್ವಾಡ್, ರಮಣಶ್ರೀ ಅಂಧರ ಶಾಲೆ ವಿದ್ಯಾರ್ಥಿಗಳು ಮತ್ತು ಸಮರ್ಥನಂ ಅಂಗವಿಕಲ ಮಕ್ಕಳು ಅವರಿಗೆ ಸಾಥ್ ನೀಡಲಿದ್ದಾರೆ. ಬ್ಯಾಂಡ್‌ನ 38 ತುಕಡಿಗಳಲ್ಲಿ ಸುಮಾರು 1,350 ಜನ ಭಾಗವಹಿಸಲಿದ್ದಾರೆ. ಸಾರ್ವಜನಿಕರಿಗಾಗಿ ಇರುವ ವೀಕ್ಷಣಾ ಗ್ಯಾಲರಿಯನ್ನು ವಿಸ್ತರಿಸಿ ಹೆಚ್ಚು ಸಾರ್ವಜನಿಕರು ಕಾರ್ಯಕ್ರಮ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ವಿವಿಧ ಶಾಲೆಗಳ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಜೆ.ಪಿ. ನಗರದ ಪಬ್ಲಿಕ್ ಶಾಲೆಯ 750 ಮಕ್ಕಳು ‘ವೀರ ನಮನ’ ಪ್ರಸ್ತುತ ಪಡಿಸಲಿದ್ದಾರೆ. ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 700 ವಿದ್ಯಾರ್ಥಿಗಳಿಂದ ‘ವೀರಭೂಮಿ ವಿಧುರಾಶ್ವತ್ಥ ಧ್ವಜ ಸತ್ಯಾಗ್ರಹ’ದ ನೃತ್ಯ-ರೂಪಕವನ್ನು ಪ್ರಸ್ತುತಪಡಿಸಲಿದ್ದಾರೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಮಕ್ಕಳಿಂದ ರೋಪ್ ಸ್ಕಿಪಿಂಗ್, ಎಂ.ಇ.ಜಿ. ತಂಡದಿಂದ ಕಲಾರಿಪಯಟ್ಟು, ಎ.ಎಸ್.ಸಿ ತಂಡದಿಂದ ಟೆಂಟ್ ಪೆಗ್ಗಿಂಗ್ ಮತ್ತು ಎ.ಎಸ್.ಸಿ ತಂಡದಿಂದ ಬೈಕ್ ಸಾಹಸ ಪ್ರದರ್ಶನ ನೀಡಲಿದ್ದಾರೆ’ ಎಂದು ಹೇಳಿದರು.

ಪಥಸಂಚಲನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪೂರ್ವಭಾವಿ ತಾಲೀಮು ಭಾನುವಾರ ನಡೆಯಿತು.

ಅಂಕಿ–ಅಂಶ

- **03** ಮಾಣೆಕ್ ಷಾ ಪರೇಡ್ ಮೈದಾನಕ್ಕೆ ಪ್ರವೇಶ ದ್ವಾರಗಳು
- **38** ಪಥಸಂಚಲನದಲ್ಲಿ ಭಾಗವಹಿಸುವ ತಂಡಗಳು
- **100** ಮೈದಾನದಲ್ಲಿ ಸಿ.ಸಿ. ಟಿವಿ ಕ್ಯಾಮೆರಾ
- **1,500** ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳು
- **1,786** ಭದ್ರತೆಗೆ ಪೊಲೀಸ್ ಸಿಬ್ಬಂದಿ ನಿಯೋಜನೆ

ಎಲ್ಲೆಲ್ಲಿ ಪ್ರವೇಶ?

ಗೇಟ್-2: ಅತಿಗಣ್ಯ ವ್ಯಕ್ತಿಗಳು, ಗಣ್ಯ ವ್ಯಕ್ತಿಗಳು, ಸ್ವಾತಂತ್ರ್ಯ ಹೋರಾಟಗಾರರು, ರಕ್ಷಣಾ ಇಲಾಖೆ ಅಧಿಕಾರಿ, ಪತ್ರಿಕಾ ಪ್ರತಿನಿಧಿಗಳಿಗೆ
ಗೇಟ್-3: ಇತರೆ ಎಲ್ಲ ಇಲಾಖೆಯ ಅಧಿಕಾರಿಗಳು, ನಿವೃತ್ತ ಸೇನಾಧಿಕಾರಿಗಳು, ಬಿಎಸ್‌ಎಫ್ ಅಧಿಕಾರಿಗಳಿಗೆ
ಗೇಟ್-4: ಸಾರ್ವಜನಿಕರಿಗಾಗಿ
ಧ್ವಜಾರೋಹಣದ ಸಮಯ: ಬೆಳಗ್ಗೆ 9

ಪ್ರಾಣಿ ಹಿಂಸೆ ತಪ್ಪಿಸುವಂತೆ ಪಂಜರದ ಒಳಗೆ ಕುಳಿತು ಪ್ರತಿಭಟನೆ ನಡೆಸಲಾಯಿತು.

ಪಂಜರದ ಒಳಗೆ ಕುಳಿತು ವಿನೂತನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಣಿ ಹಾಗೂ ಪಕ್ಷಿಗಳ ಮೇಲೆ ನಡೆಯುತ್ತಿರುವ ಶೋಷಣೆ ತಪ್ಪಿಸುವಂತೆ ಆಗ್ರಹಿಸಿ, ಯುವಕರ ತಂಡವೊಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪಂಜರದ ಒಳಗೆ ಕುಳಿತು ವಿನೂತನ ಪ್ರತಿಭಟನೆ ನಡೆಸಿತು.

ಪ್ರಾಣಿ ಹಾಗೂ ಪಕ್ಷಿಗಳ ಮೇಲೆ ಮನುಷ್ಯರು ಶೋಷಣೆ ನಡೆಸುತ್ತಿದ್ದಾರೆ. ಆಹಾರಕ್ಕಾಗಿ ಪ್ರಾಣಿಗಳನ್ನು ಕೊಂದು ಹಾಕಲಾಗುತ್ತಿದೆ. ಪ್ರಾಣಿಗಳು ವೈಯಕ್ತಿಕ ಆಸ್ತಿಯಾಗಿರುವುದನ್ನು ನಿಷೇಧಿಸಬೇಕು. ರಾಜ್ಯದಲ್ಲಿರುವ ಎಲ್ಲ ಕಸಾಯಿಖಾನೆ ಬಂದ್ ಮಾಡಬೇಕು ಎಂದು ಆಗ್ರಹಿಸಿದರು.

ಪ್ರಾಣಿಗಳೂ ಮನುಷ್ಯರಂತೆಯೇ ದುಃಖ ಅನುಭವಿಸುತ್ತಿವೆ. ಪಂಜರ ಹಾಗೂ ಬೋನಿನ ಒಳಗೆ ಹಾಕಿ ಶೋಷಣೆ ಮಾಡಲಾಗುತ್ತಿದೆ. ನಗರದಲ್ಲಿ ಸಾಕುಪ್ರಾಣಿಗಳ ಮಾರಾಟ ದೊಡ್ಡ ಉದ್ದಿಮೆಯಾಗಿ ಬೆಳೆದಿದ್ದು, ಅನಧಿಕೃತವಾಗಿ ನೂರಾರು ಮಾರಾಟ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮಳಿಗೆಗಳಲ್ಲಿ ಸಾಕುಪ್ರಾಣಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸದೇ ಹಿಂಸೆ ಮಾಡಲಾಗುತ್ತಿದೆ ಎಂದು ದೂರಿದರು.

ನೀರು, ಗಾಳಿ ಹಾಗೂ ಆಹಾರದ ವ್ಯವಸ್ಥೆಯಿಲ್ಲದೇ ಪ್ರಾಣಿ, ಪಕ್ಷಿಗಳು ಸಂಕಟ ಪಡುತ್ತಿವೆ ಎಂದು ಹೇಳಿದರು.

ಮಾಂಸಕ್ಕಾಗಿ ಜಾನುವಾರುಗಳನ್ನು ಕೊಲ್ಲಲಾಗುತ್ತಿದೆ. ಇದು ನೋವಿನ ವಿಚಾರ ಎಂದು ಪ್ರತಿಭಟನಕಾರರು ಹೇಳಿದರು. ಪ್ರತಿಭಟನೆಯಲ್ಲಿ ಹರ್ಷಿಲ್, ಜೀವನ್, ಅಗಸ್ತ್ಯ, ಸ್ಟೀವ್ ಆದಿತ್ಯ ಹಾಜರಿದ್ದರು .

ತರಳು ಗ್ರಾಮ ಪಂಚಾಯಿತಿ ಅಧ್ಯಕ್ಷ–ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಪಿ.ಬಾಲರಾಜ್, ರೂಪ ವೆಂಕಟೇಶ್ ಅವರನ್ನು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ರಾಜ್‌ಕುಮಾರ್ ಅಭಿನಂದಿಸಿದರು

ತರಳು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಾಲರಾಜ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕು ತರಳು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪಿ.ಬಾಲರಾಜ್ (ಬಂಡೆ ತಮ್ಮಯ್ಯ) ಹಾಗೂ ಉಪಾಧ್ಯಕ್ಷರಾಗಿ ರೂಪ ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಪಿ.ಬಾಲರಾಜ್ ಅವರು 13 ಮತ ಪಡೆದರೆ, ಮತ್ತೊಬ್ಬ ಸ್ಪರ್ಧಿ ಬಿಜೆಪಿ ಬೆಂಬಲಿತ ಜಮುನ ರೆಡ್ಡಿ 7 ಮತ ಪಡೆದರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿಜೆಪಿ ಬೆಂಬಲಿತ ಮಹದೇವಮ್ಮ 6 ಮತ, ಕಾಂಗ್ರೆಸ್ ಬೆಂಬಲಿತ ರೂಪ ವೆಂಕಟೇಶ್ 14 ಮತ ಪಡೆದರು.

ಪ್ರಶಾಂತ್ ಚುನಾವಣಾಧಿಕಾರಿಯಾಗಿದ್ದರು. ಸದಸ್ಯರಾದ ವಿನಯ್, ಶಿಲ್ಪ ಷಣ್ಮುಖ, ಲೋಕೇಶ್ ಕುಮಾರ್, ರೂಸಿಯಾ, ಭಾಗ್ಯಮ್ಮ, ಜಾಕಪ್, ನಾಗರಾಜು, ಮಂಗಳ ಬಸವರಾಜು, ಅಂತೋಣಿ ಮೇರಿ ಇತರರು ಉಪಸ್ಥಿತರಿದ್ದರು.

ಸಾಹಿತ್ಯೋತ್ಸವ: ಸಾಂಸ್ಕೃತಿಕ ರಸದೌತಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ಒತ್ತಡ ಹಾಗೂ ವೇಗದ ಜೀವನಕ್ಕೆ ಸಂಗೀತ ಹಾಗೂ ಸಾಹಿತ್ಯವು ಚಿಕಿತ್ಸಕ ಅನುಭವ ನೀಡಬಲ್ಲದು. ಸಂಗೀತ ಆಲಿಸುವುದರಿಂದ ಒತ್ತಡದ ಜೀವನದಿಂದ ಹೊರಬರಲು ಸಾಧ್ಯವಾಗಲಿದೆ’ ಎಂದು ಉರ್ದು ಕವಿ ಕುನ್ವರ್ ರಂಜೀತ್ ಚವ್ಹಾಣ್ ಅವರು ಹೇಳಿದರು.

ನಗರದಲ್ಲಿ ಕೇಂದ್ರದ ಸಂಸ್ಕೃತಿ ಸಚಿವಾಲಯ ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ನಡೆದ ಜಶ್ನ್-ಎ-ಅದಬ್ ಸಾಹಿತ್ಯೋತ್ಸವದ ಸಾಂಸ್ಕೃತಿಕ ಕಾರವಾನ್ ವಿರಾಸತ್‌ನಲ್ಲಿ ಅವರು ಮಾತನಾಡಿದರು.

‘ಬೆಂಗಳೂರು ಯುವಜನರ ನಗರವಾಗಿದೆ. ಅವರನ್ನು ರಂಜಿಸುವ ಉದ್ದೇಶದಿಂದ ನಗರದಲ್ಲಿ ಈ ಸಾಹಿತ್ಯೋತ್ಸವ ಆಯೋಜಿಸಲಾಗಿದೆ. ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯಿದೆ. ಸಾಧ್ಯವಾದಷ್ಟು ಜನರಿಗೆ ಕಲಬೆರಕೆಯಿಲ್ಲದ ಅನುಭವಗಳನ್ನು ಒದಗಿಸುವುದು ನಮ್ಮ ಪ್ರಯತ್ನವಾಗಿದೆ’ ಎಂದು ಅವರು ಹೇಳಿದರು.

ಉತ್ಸವದಲ್ಲಿ ಸಮಾಜದಲ್ಲಿ ಪ್ರಾದೇಶಿಕ ರಂಗಭೂಮಿ ಮತ್ತು ಭಾಷೆಗಳ ಪ್ರಭಾವ ಕುರಿತು ನಡೆದ ಸಂವಾದದಲ್ಲಿ ನಟ ಪ್ರಕಾಶ್ ಬೆಳವಾಡಿ, ನಿರ್ಮಾಪಕ ಫೈಸಲ್ ಮಲ್ಲಿಕ್ ಹಾಗೂ ಅಶೋಕ್ ಚಕ್ರಧರ್ ಪಾಲ್ಗೊಂಡಿದ್ದರು.

ಸಾಂಸ್ಕೃತಿಕ ವೈಭವ: ಎರಡು ದಿನಗಳ ಕಾರ್ಯಕ್ರಮವು ಪ್ರೇಕ್ಷಕರಿಗೆ ಸಾಂಸ್ಕೃತಿಕ ರಸದೌತಣ ನೀಡಿತು. ನಾಗಭೂಷಣ ಹೆಗಡೆ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನಡೆಸಿಕೊಟ್ಟರು. ಕಪಿಲ್ ಜಾಫೇರಿ ಅವರು ಉರ್ದು ಭಾಷೆಯಲ್ಲಿ ದಸ್ತಂಗೋಯ್ ಕಥೆ ಪ್ರಸ್ತುತಪಡಿಸಿ ರಂಜಿಸಿದರು. ಅರ್ಪಿತಾ ಬ್ಯಾನರ್ಜಿ ತಂಡವು ಕಥಕ್ ಪ್ರದರ್ಶನ ನೀಡಿ ಗಮನ ಸೆಳೆಯಿತು.

ನಗರದಲ್ಲಿ ಭಾನುವಾರ ನಡೆದ ಜಶ್ನ್–ಎ–ಅದಬ್ ಸಾಹಿತ್ಯೋತ್ಸವದ ಸಾಂಸ್ಕೃತಿಕ ಕಾರವಾನ್ ವಿರಾಸತ್‌ನಲ್ಲಿ ಕಲಾವಿದೆ ಅರ್ಪಿತಾ ಬ್ಯಾನರ್ಜಿ ನೇತೃತ್ವದ ತಂಡವು ನೃತ್ಯ ಪ್ರಸ್ತುತ ಪಡಿಸಿತು

‘ಕನ್ನಡಿಗರು ಜಾಗೃತರಾಗಿರಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲದಿಂದ ಕಾಲಕ್ಕೆ ನಾಡು-ನುಡಿಗೆ ಸಂಬಂಧಿಸಿದ ಸಮಸ್ಯೆಗಳು ಬದಲಾಗುತ್ತಾ ಇರುತ್ತವೆ. ಆದ್ದರಿಂದ, ಕನ್ನಡಿಗರು ಸದಾ ಜಾಗೃತರಾಗಿರಬೇಕು’ ಎಂದು ಕವಿ ದೊಡ್ಡರಂಗೇಗೌಡ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಭಾನುವಾರ ಆಯೋಜಿಸಿದ ಕನ್ನಡ ಕಾರ್ಯಕರ್ತರ ಕಮ್ಮಟ ಉದ್ಘಾಟಿಸಿ, ಮಾತನಾಡಿದರು. ‘ಪ್ರತಿಯೊಂದು ಭಾಷೆಯಲ್ಲಿಯೂ ಕಾಲ ಕಾಲಕ್ಕೆ ಅನೇಕ ಸಮಸ್ಯೆಗಳು ತಲೆದೋರುತ್ತಿರುತ್ತವೆ. ಅಂತಹ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಪರಿಹಾರ ಕಂಡುಕೊಳ್ಳಬೇಕು. ನಾಡು-ನುಡಿಯ ಉಳಿವಿಗಾಗಿ ಅನಿವಾರ್ಯವಾದರೆ ಹೋರಾಟವನ್ನೂ ಮಾಡಬೇಕು. ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಕಮ್ಮಟಗಳು ಎಲ್ಲೆಡೆ ನಡೆಯಬೇಕು’ ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ‘ನಾಡು–ನುಡಿಯ ಇತಿಹಾಸವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸವಾಗಬೇಕು. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ, ವರ್ಗಾಯಿಸಬೇಕಾದ ಜವಾಬ್ದಾರಿ ಕನ್ನಡಿಗರ ಮೇಲಿದೆ. ಭಾಷೆ ಎದುರಿಸುತ್ತಿರುವ ಸಂಕಷ್ಟ ಹಾಗೂ ಸವಾಲುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಈ ಕಮ್ಮಟದ ಉದ್ದೇಶ’ ಎಂದು ಹೇಳಿದರು.

ಕಮ್ಮಟದಲ್ಲಿ ‘ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ ಹಿರಿಮೆ’ ವಿಷಯದ ಬಗ್ಗೆ ಕವಿ ಎಲ್.ಎನ್. ಮುಕುಂದರಾಜ್, ‘ಕನ್ನಡಕ್ಕಾಗಿ ಸಾಮಾನ್ಯ ಕನ್ನಡಿಗರ ಕರ್ತವ್ಯಗಳು’ ವಿಷಯದ ಬಗ್ಗೆ ಕನ್ನಡಪರ ಚಿಂತಕ ಅರುಣ್ ಜಾವಗಲ್, ‘ಸಿನಿಮಾ ಮತ್ತು ಸಾಹಿತ್ಯದಲ್ಲಿ ಕನ್ನಡದ ಕಾಯಕ ಮಾರ್ಗ’ ವಿಷಯದ ಬಗ್ಗೆ ಚಲನಚಿತ್ರ ನಿರ್ದೇಶಕ ಕೆ.ಎಂ. ಚೈತನ್ಯ ಹಾಗೂ ‘ಕನ್ನಡ ನಾಡು-ನುಡಿ ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ’ ವಿಷಯದ ಬಗ್ಗೆ ಪೂರ್ಣಿಮಾ ಎಸ್. ಅವರು ಮಾತನಾಡಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾದ ಎಲ್. ಹರ್ಷ, ಹಂ.ಗು. ರಾಜೇಶ್, ಎ.ಎಸ್. ನಾಗರಾಜಸ್ವಾಮಿ, ವಿಜಯಲಕ್ಷ್ಮಿ ಸತ್ಯಮೂರ್ತಿ, ಎಸ್. ತಿಮ್ಮಯ್ಯ, ನಾಗೇಶ್, ಆದೂರ್ ಪ್ರಕಾಶ್, ವೀರಭದ್ರಪ್ಪ ಇದ್ದರು.

ಗಿಡಕ್ಕೆ ನೀರೆರೆಯುವ ಮೂಲಕ ದೊಡ್ಡರಂಗೇಗೌಡ ಅವರು ಕಮ್ಮಟ ಉದ್ಘಾಟಿಸಿದರು. ಎಲ್.ಎನ್. ಮುಕುಂದರಾಜ್, ಎಂ. ಪ್ರಕಾಶಮೂರ್ತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದಾರೆ –ಪ್ರಜಾವಾಣಿ ಚಿತ್ರ

ದೊಡ್ಡರಂಗೇಗೌಡಗೆ ‘ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕೊ ಕನ್ನಡ ಬಳಗದ ವತಿಯಿಂದ ನೀಡಲಾಗುವ ‘ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ’ಗೆ ಸಾಹಿತಿ ದೊಡ್ಡರಂಗೇಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ. ಆ. 27ರಂದು ಆನಂದ ರಾವ್ ವೃತ್ತದಲ್ಲಿರುವ ಜಗದ್ಗುರು ರೇಣುಕಾಚಾರ್ಯ ಕಾಲೇಜಿನ ಎಸ್.ಜೆ.ಆರ್.ಸಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಾಷ್ ವಾಣಿಜ್ಯ ಅಧಿಕಾರಿಗಳಾದ ಎಚ್.ಬಿ. ತೋಂಟೇಶ್, ಕಾರ್ಮಿಕ ಸಂಘದ ಅಧ್ಯಕ್ಷ ವಿ.ಜೆ.ಕೆ. ನಾಯರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ರಂಗೋಲಿಯಲ್ಲಿ ತ್ರಿವರ್ಣ ಧ್ವಜ: ಆಯೋಜನೆ ಮತ್ತು ಸ್ಥಳ: ವಾಸವಿ ಜ್ಞಾನ ಪೀಠ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10.30ರಿಂದ

ಪ್ರತಿಭಾ ಪುರಸ್ಕಾರ–2023: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಸಿದ್ಧರಾಮಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಪ್ರತಿಭಾ ಪುರಸ್ಕಾರ ಪ್ರದಾನ: ಬೈರತಿ ಸುರೇಶ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಅತಿಥಿಗಳು: ಎಚ್. ವಿಶ್ವನಾಥ್, ಕೆ.ಎಸ್. ಈಶ್ವರಪ್ಪ, ಬಂಡೆಪ್ಪ ಕಾಶೆಂಪುರ, ಪ್ರಿಯಾಕೃಷ್ಣ, ಕೆ. ವಿರುಪಾಕ್ಷಪ್ಪ, ಬಿ.ಜಿ. ಗೋವಿಂದಪ್ಪ, ಆರ್. ಕೃಷ್ಣಪ್ಪ, ಆಯೋಜನೆ ಮತ್ತು ಸ್ಥಳ: ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ಶಾಖಾಮಠ, ಚಂದ್ರಾ ಲೇಔಟ್, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ

ಅಹೋರಾತ್ರಿ ಸ್ವಾತಂತ್ರ್ಯೋತ್ಸವ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಧ್ವಜಾರೋಹಣ: ಎಂ.ಎಸ್. ಮೀನಾಕ್ಷಿ ಸುಂದರಂ, ಆಯೋಜನೆ: ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಸ್ಥಳ: ಟೌನ್ ಹಾಲ್ ಎದುರು, ಸಂಜೆ 7ರಿಂದ

ಮಧ್ಯರಾತ್ರಿ ಧ್ವಜಾರೋಹಣ: ಸಂಗೀತ, ನೃತ್ಯ, ರಸಪ್ರಶ್ನೆ, ರಂಗ ಪ್ರದರ್ಶನ, ಸಾಕ್ಷ್ಯಚಿತ್ರಗಳ ಪ್ರದರ್ಶನ, ಆಯೋಜನೆ: ಸತ್ಯಮೇವ ಜಯತೆ, ಸ್ಥಳ: ಏರಲೈನ್ಸ್ ಹೋಟೆಲ್, ಲಾವೆಲ್ಲೆ ರಸ್ತೆ, ರಾತ್ರಿ 8ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

INDIA GARAGE BANGALORE: Lalbagh Road, Yeshwantpur, Kolar, Chikkaballapura, Peenya, Bidadi, Nelamangala: 8073158096
PPS MOTORS: Kengeri, Kanakapura Town, Devanahalli, Chintamani, HBR Layout, Kanakapura Road 630955517
ANANT CARS AUTO PVT LTD: Mysore Road, K R Puram, Ramnagar, Malur, H cross Hunasamaranahalli: 9900077177
SIDDHANTH MOTORS: Garve Bhavi Payla, Singsandra, Anekal, Attibele, Hoskote, Bangarpet, Yeshwanthpur, Dabbaspet: 8448481362
HONNASIRI MOTORS: Tumkur: 9513353925

ಕೋರ್ಸ್‌ಗಳ ಮಾಹಿತಿಗಾಗಿ...

- https://www.voguefashioninstitute.com/jewellery-designing-courses-bangalore-india/)
- https://www.iigsouth.com/
- http://www.igjinkel.org/

ಗುಣಮಟ್ಟದ ಹರಳುಗಳನ್ನು (ಜೆಮ್ಸ್) ಆಯ್ಕೆ ಮಾಡುವ, ಶ್ರೇಣೀಕರಿಸುವ, ಮೌಲ್ಯೀಕರಿಸುವ ಕೌಶಲ ಕಲಿಸುವ ಕೋರ್ಸ್ ಜೆಮೊಲಜಿ. ಕೋರ್ಸ್ ಕಲಿತವರಿಗೆ ಆಭರಣ ತಯಾರಿಕಾ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿವೆ.

ಜೆಮೊಲಜಿ

ವೃತ್ತಿ ಬದುಕಿಗೆ ಹೊಸ ಮಾರ್ಗ

ಆರ್.ಬಿ.ಗುರುಬಸವರಾಜ

ಫ್ಯಾಷನ್ ಜಗತ್ತಿನಲ್ಲಿ ಬೇರೆ ಬೇರೆ ವೇಷಭೂಷಣಗಳಲ್ಲಿ ಆಧುನಿಕತೆ ಹೆಚ್ಚುತ್ತಿದ್ದರೂ, ಆಭರಣದ ವಿಷಯದಲ್ಲಿ ಇನ್ನೂ ರೆಟ್ರೊ ಅಥವಾ ಸಾಂಪ್ರದಾಯಿಕ ಶೈಲಿ ಉಳಿದುಕೊಂಡಿದೆ. ಉಂಗುರ, ಕಿವಿಯೋಲೆ, ನತ್ತು, ನೆಕ್ಲೆಸ್, ಸರ, ಬಳೆ, ಡಾಬು, ವಂಕಿ, ವಡ್ಯಾಣ, ಕಾಲಂದುಗೆ ಇವೆಲ್ಲ ಆಭರಣಗಳಲ್ಲಿ ಚಂದದ ಹರಳುಗಳಿರಬೇಕೆಂದು ಬಯಸುವವರಿದ್ದಾರೆ. ಹೀಗಾಗಿ, ಬಹಳ ಹಿಂದಿನಿಂದಲೂ ವಜ್ರದ ಹರಳು, ನೀಲಮಣಿ, ಪಚ್ಚೆ, ಮಾಣಿಕ್ಯ ಮುಂತಾದ ಹರಳುಗಳು ಹಿಂದಿನಿಂದಲೂ ಭಾರತೀಯರ ಜೀವನದೊಂದಿಗೆ ಸಮ್ಮಿಳಿತಗೊಂಡು, ಕಾಲದಿಂದ ಕಾಲಕ್ಕೆ ಹೊಸ ಹೊಸ ರೂಪು ಪಡೆಯುತ್ತಾ ಬಂದಿವೆ.

ಹರಳು ಸಹಿತ ಆಭರಣದ ಟ್ರೆಂಡ್ ಹೆಚ್ಚುತ್ತಿರುವಂತೆಯೇ, ಅಂಥ ಗುಣಮಟ್ಟದ ಹರಳುಗಳನ್ನು ಆಯ್ಕೆ ಮಾಡುವ, ಅವುಗಳನ್ನು ಶ್ರೇಣೀಕರಿಸುವ, ಮೌಲ್ಯೀಕರಿಸುವ ಕೌಶಲವಿರುವವರಿಗೆ ಆಭರಣ ತಯಾರಿಕಾ ಕಂಪನಿಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತಿವೆ. ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ಕೌಶಲಯುಕ್ತ ಮಾನವ ಸಂಪನ್ಮೂಲ ಒದಗಿಸಲು ಆಯ್ದ ಶಿಕ್ಷಣ ಸಂಸ್ಥೆಗಳಲ್ಲಿ 'ಜೆಮೊಲಜಿ'(Gemology) ಎಂಬ ಕೋರ್ಸ್ ಚಾಲ್ತಿಯಲ್ಲಿದೆ.

ಏನಿದು ಜೆಮೊಲಜಿ

ರತ್ನಖಚಿತ ಹರಳುಗಳು ಮತ್ತು ಬೆಲೆಬಾಳುವ ಲೋಹಗಳ ಅಧ್ಯಯನದ ವಿಜ್ಞಾನವೇ ಜೆಮೊಲಜಿ. ಅಂದರೆ ರತ್ನದ ಹರಳುಗಳನ್ನು ಗುರುತಿಸುವ, ಶ್ರೇಣೀಕರಿಸುವ, ಆಕರ್ಷಕ ರೂಪು ನೀಡಿ ಆಭರಣವಾಗಿ ಪರಿವರ್ತಿಸುವ ಹಾಗೂ ಮೌಲ್ಯಮಾಪನ ಮಾಡುವ ಕಲೆ ಮತ್ತು ವಿಜ್ಞಾನಗಳ ಸಂಗಮವೇ ಜೆಮೊಲಜಿ.

ಜಿಯೋಸೈನ್ಸ್‌ನ ಭಾಗವಾಗಿರುವ ಈ ಕೋರ್ಸ್ ಉದ್ಯೋಗಾಕಾಂಕ್ಷಿಗಳ ಹೊಸ ವೃತ್ತಿ ಜೀವನದ ಮಾರ್ಗವಾಗಿದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಗುಣಮಟ್ಟದ ಹರಳುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಗ್ರಾಹಕರು ಪ್ರಮಾಣೀಕೃತ ರತ್ನಾಭರಣಗಳನ್ನು ಖರೀದಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಗ್ರಾಹಕರ ಹಿತಾಸಕ್ತಿಗೆ ಅನುಗುಣವಾಗಿ ಆಭರಣಗಳನ್ನು ಪೂರೈಸಲು ಜ್ಯೂವೆಲರಿ ಕಂಪನಿಗಳು ಜೆಮೊಲಜಿಸ್ಟ್‌ಗಳನ್ನು ನಿಯೋಜಿಸಿಕೊಳ್ಳುತ್ತಿದ್ದಾರೆ.

ಜೊತೆಗೆ, ಶೇ 95 ರಷ್ಟು ವಜ್ರದ ಹರಳುಗಳನ್ನು ಕತ್ತರಿಸುವ ಮತ್ತು ಹೊಳಪು ನೀಡುವ ಪ್ರಕ್ರಿಯೆ ಭಾರತದಲ್ಲಿಯೇ ನಡೆಯುತ್ತಿದೆ. ಭಾರತವು ವಿಶ್ವದ ಅತೀ ಹೆಚ್ಚು ವಜ್ರ ಕತ್ತರಿಸುವ ಹಾಗೂ ಹೊಳಪು ನೀಡುವ ದೇಶ ಎಂಬುದು ವಾಸ್ತವಾಗಿ ಪರಿಗಣಿತವಾಗಿದೆ. ಹಾಗಾಗಿ ಜೆಮೊಲಜಿಸ್ಟ್‌ಗಳಿಗೆ ಉದ್ಯೋಗಾವಕಾಶ ಹೆಚ್ಚುತ್ತಿವೆ ಎಂಬುದು ತಜ್ಞರ ಅಭಿಮತವಾಗಿದೆ.

ಎಲ್ಲೆಲ್ಲಿ ಉದ್ಯೋಗಗಳು ಲಭ್ಯ ?

- ಗಣಿಗಾರಿಕೆ ಕ್ಷೇತ್ರ,
- ಜ್ಯೂವೆಲ್ಲರಿ ಮೇಕಿಂಗ್ ಅಂಡ್ ಡಿಸೈನಿಂಗ್ ಯೂನಿಟ್
- ಜ್ಯೂವೆಲ್ಲರಿ ಅಂಗಡಿಗಳು ಮತ್ತು ಷೋರೂಮ್‌ಗಳು
- ಜೆಮ್ ಎಕ್ಸ್‌ಪೋರ್ಟಿಂಗ್ ಆರ್ಗನೈಜೇಷನ್
- ಜೆಮ್ ಸ್ಟೋನ್ ಕಟ್ಟಿಂಗ್ ಅಂಡ್ ಪಾಲಿಷಿಂಗ್ ಯೂನಿಟ್
- ಜೆಮ್ ಟೆಸಿಂಗ್ ಲ್ಯಾಬ್ಸ್
- ಜೆಮ್ ಅಂಡ್ ಮೆಟಲ್ ಗ್ರೇಡಿಂಗ್ ಅಂಡ್ ಕ್ವಾಲಿಟಿ ಸರ್ಟಿಫೈಯಿಂಗ್ ಏಜೆನ್ಸಿ
- ಆರ್ಟಿಫಿಷಿಯಲ್ ಜೆಮ್ ಇಂಡಸ್ಟ್ರಿ
- ಟಾಪ್ ಗ್ರೇಡ್ ಗೋಲ್ಡ್ ಸ್ಮಿತ್

ಕೋರ್ಸ್ ಪ್ರವೇಶ ಹೇಗೆ ?

ಜೆಮೊಲಜಿಸ್ಟ್ ಕೋರ್ಸ್ ಸೇರಲು ಪಿಯುಸಿಯ (10 + 2) ಯಾವುದೇ ವಿಭಾಗದಲ್ಲಿ ಶೇ 50ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕನಿಷ್ಠ 18 ವರ್ಷಗಳ ವಯೋಮಿತಿ ಹೊಂದಿರಬೇಕು. ವಿಜ್ಞಾನ ವಿಭಾಗದವರಿಗೆ ಪ್ರಥಮ ಆದ್ಯತೆ. ಇಂಗ್ಲಿಷ್ ಭಾಷಾ ಪರಿಣತಿ ಜೊತೆಗೆ ಸಂವಹನ ಕೌಶಲ ಅಗತ್ಯ.

ಜೆಮೊಲಜಿಸ್ಟ್ ಆಗಲು ಯಶಸ್ವಿಯಾಗಿ ಕೋರ್ಸ್ ಮುಗಿಸುವ ಜೊತೆಗೆ, ವಿಶ್ವಾಸಾರ್ಹ ಕೌಶಲದ ಅರಿವಿರಬೇಕು. ಸೂಕ್ಷ್ಮ ದೃಷ್ಟಿ, ಕಲೆಯನ್ನು ಮೆಚ್ಚುವ ಗುಣ, ಅತ್ಯುತ್ತಮವಾದ ವೀಕ್ಷಣಾ ಶಕ್ತಿ, ನಿಖರವಾದ ವಿವರ ಸಂಗ್ರಹಣಾ ಸಾಮರ್ಥ್ಯ, ವಸ್ತುನಿಷ್ಠ ಉಪಕ್ರಮ ವಿಧಾನ ಮತ್ತು ಜವಾಬ್ದಾರಿಯುತ ಅಧಿಕಾರ ಚಲಾಯಿಸುವ ಗುಣಗಳಿರಬೇಕು. ಇವು, ಕೋರ್ಸ್ ಕಲಿಕೆಗೂ ಅನುಕೂಲ, ಉದ್ಯೋಗದಲ್ಲಿ ಪ್ರಗತಿ ಸಾಧಿಸಲು ಸಹಾಯವಾಗುತ್ತವೆ.

ವಿವಿಧ ಕೋರ್ಸ್‌ಗಳು

ಜೆಮೊಲಜಿಗೆ ಸಂಬಂಧಿಸಿದಂತೆ ಮೂರು ತಿಂಗಳಿನಿಂದ ಹಿಡಿದು ಮೂರು ವರ್ಷಗಳವರೆಗಿನ ವಿವಿಧ ರೀತಿಯ ಸರ್ಟಿಫಿಕೆಟ್ ಮತ್ತು ಡಿಪ್ಲೊಮೊ ಕೋರ್ಸ್‌ಗಳಿವೆ. ಎಲ್ಲಾ ಕೋರ್ಸ್‌ಗಳನ್ನು ಪ್ರಾಯೋಗಿಕ ಅನುಭವದ ಮೂಲಕವೇ ನಡೆಯುತ್ತವೆ. ಹರಳುಗಳನ್ನು ಕತ್ತರಿಸುವ, ಬಣ್ಣಲೇಪಿಸುವ ಹಾಗೂ ಇನ್ನಿತರೇ ಕಾರ್ಯಗಳಿಗೆ ₹25 ಸಾವಿರದಿಂದ ₹1.5 ಲಕ್ಷಗಳವರೆಗೆ ವೆಚ್ಚ ತಗುಲಬಹುದು.

ಕೋರ್ಸ್‌ಗಳು ಹೀಗಿವೆ

- ಜೆಮ್ಸ್ ಐಡೆಂಟಿಫಿಕೇಷನ್ ಸರ್ಟಿಫಿಕೆಟ್ ಕೋರ್ಸ್
- ಡೈಮಂಡ್ ಗ್ರೇಡಿಂಗ್ ಸರ್ಟಿಫಿಕೇಷನ್ ಕೋರ್ಸ್
- ಸರ್ಟಿಫಿಕೇಷನ್ ಕೋರ್ಸ್ ಇನ್ ಕಟ್ ಅಂಡ್ ಡಿಸೈನ್ ಅನಲಿಸಿಸ್
- ಪರ್ಲ್ ಗ್ರೇಡಿಂಗ್
- ಪಾಲಿಷ್ಡ್ ಡೈಮಂಡ್ ಗ್ರೇಡಿಂಗ್ ಕೋರ್ಸ್
- ಡಿಪ್ಲೊಮೊ ಕೋರ್ಸ್‌ಗಳು
- ಬಿ.ಎಸ್ಸಿ ಇನ್ ಜೆಮೊಲಾಜಿ

ಕೋರ್ಸ್‌ನಲ್ಲಿ ಕಲಿಯುವುದೇನು?

ಜೆಮೊಲಜಿಯಲ್ಲಿ ಹರಳುಗಳ ಭೌತಿಕ ಗುಣಲಕ್ಷಣಗಳು, ಆಪ್ಟಿಕಲ್ ಗುಣಗಳು, ಫ್ಯಾಷನ್ ಡಿಸೈನ್, ಕಂಪ್ಯೂಟರ್ ಆಧಾರಿತ ಆಭರಣ ವಿನ್ಯಾಸ, ಲೋಹ ವಿಜ್ಞಾನದ ಪರಿಕಲ್ಪನೆ, ಸಾಂಪ್ರದಾಯಿಕ ಮತ್ತು ಆಧುನಿಕ ರೇಖಾಚಿತ್ರ ಪ್ರಕ್ರಿಯೆಗಳು, ಆಭರಣ ತಯಾರಿಕಾ ತಂತ್ರಗಳನ್ನು ಕಲಿಸಲಾಗುತ್ತದೆ.

ಮುಖ್ಯವಾಗಿ ಹರಳುಗಳನ್ನು ಕತ್ತರಿಸುವ, ವರ್ಣಮಯಗೊಳಿಸುವ, ಮೆರಗುಗೊಳಿಸುವ, ಹೊಳಪು ನೀಡುವ ಅಂತಿಮವಾಗಿ ಆಕರ್ಷಕ ಆಭರಣವಾಗಿ ಮಾರ್ಪಡಿಸುವ ತಾಂತ್ರಿಕ ಕೌಶಲಗಳನ್ನು ಕಲಿಸಲಾಗುತ್ತದೆ.

'ನಾನು ಜೆಮೊಲಜಿಯಲ್ಲಿ ಡಿಪ್ಲೊಮಾ ಕೋರ್ಸ್ ಕಲಿಯುತ್ತಿದ್ದೇನೆ. ಕಲಿಯುತ್ತಾ ಜ್ಯೂವೆಲರಿ ಕಂಪನಿಯೊಂದರಲ್ಲಿ ವೃತ್ತಿಯ ಅನುಭವ, ಪ್ರಾವೀಣ್ಯ ಪಡೆಯುತ್ತಿದ್ದೇನೆ. ಆಭರಣಗಳಲ್ಲಿ ಹರಳುಗಳನ್ನು ಧರಿಸುವ ಟ್ರೆಂಡ್ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಈ ಕೋರ್ಸ್‌ಗೆ ಉತ್ತಮ ಉದ್ಯೋಗಕ್ಕೆ ದಾರಿಯಾಗಬಹುದು' ಎನ್ನುತ್ತಾರೆ ವೋಗ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್ ಆ್ಯಂಡ್ ಡಿಸೈನ್‌ನಲ್ಲಿ ಕೋರ್ಸ್ ಕಲಿಯುತ್ತಿರುವ ಬೆಂಗಳೂರಿನ ವಿದ್ಯಾರ್ಥಿನಿ ಯಶಸ್ವಿನಿ.

ವಿವಿಧ ಹುದ್ದೆಗಳು

ಕೋರ್ಸ್ ಯಶಸ್ವಿಯಾಗಿ ಪೂರೈಸಿದವರಿಗೆ ಜ್ಯೂವೆಲರಿ ಡಿಸೈನ್, ಜ್ಯೂವೆಲರಿ ರಿಟೇಲ್ ಬ್ಯುಸಿನೆಸ್, ಹರಳುಗಳನ್ನು ಕತ್ತರಿಸುವ, ಪಾಲಿಷ್ ಮಾಡುವ ಸಂಸ್ಥೆಗಳಲ್ಲಿ, ಪ್ರಯೋಗಶಾಲೆಗಳಲ್ಲಿ, ರತ್ನ ಹಾಗೂ ಅಮೂಲ್ಯ ಲೋಹಗಳನ್ನು ಪ್ರಾಮಾಣೀಕರಿಸುವ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳಿವೆ. ಅಷ್ಟೇ ಅಲ್ಲ, ಸ್ವಂತ ಜ್ಯೂವೆಲರಿ ಉದ್ಯಮ ಮತ್ತು ವ್ಯವಹಾರ ನಡೆಸಲು ಕೋರ್ಸ್‌ಗಳು ನೆರವಾಗುತ್ತವೆ.

'ಜೆಮೊಲಜಿ ಒಂದು ಉತ್ತಮ ಕೋರ್ಸ್. ಇದು ಹರಳುಗಳ ಬಗೆಗಿನ ಸಂಪೂರ್ಣ ವೈಜ್ಞಾನಿಕ ಮಾಹಿತಿ ತಿಳಿಸಿಕೊಡುತ್ತದೆ. ಇದು ಸ್ವಾವಲಂಬಿ ವೃತ್ತಿಯನ್ನು ಕಟ್ಟಿಕೊಳ್ಳಲು ಸಹಾಯಕವಾಗಿದೆ. ಈ ಕೋರ್ಸ್ ಕಲಿತ ನಂತರ ನಾನು ಸ್ವಂತ ವ್ಯಾಪಾರ ಮಾಡಿಕೊಂಡಿದ್ದೇನೆ. ಇದರಿಂದ ಉತ್ತಮ ವೃತ್ತಿಯ ಅವಕಾಶಗಳು ದೊರೆತಿವೆ' ಎನ್ನುತ್ತಾರೆ ಬೆಂಗಳೂರಿನ ವಿನ್ಯಾಸ ಟ್ರಾನ್ಸ್‌ಫಾರ್ಮಿಕಂಗ್ ಟ್ರೆಡರ್ಸ್‌ನ ಆಭರಣ ವಿನ್ಯಾಸಕಿ ಚಿತ್ರಾ ಅಶೋಕ.

ಕೋರ್ಸ್ ಮುಗಿಸಿದವರು ನಿರ್ವಹಿಸಬಹುದಾದ ಹುದ್ದೆಗಳು ಹೀಗಿವೆ;

- ಜೆಮೊಲಾಜಿಸ್ಟ್
- ಡೈಮಂಡ್ ಗ್ರೇಡರ್
- ಜ್ಯೂವೆಲರಿ ಡಿಸೈನರ್
- ಸೇಲ್ಸ್ ಪರ್ಸನ್
- ಜ್ಯೂವೆಲರಿ ಆಕ್ಷನ್ ಮೇನೇಜರ್



ಸಾಂದರ್ಭಿಕ ಚಿತ್ರಗಳು

ವೈಜ್ಞಾನಿಕ ವಿಧಾನಗಳ ಮೂಲಕ ಹರಳುಗಳ ಗುಣಮಟ್ಟ ಹಾಗೂ ಡೈಮಂಡ್ ಗ್ರೇಡಿಂಗ್ ಬಗ್ಗೆ ಈ ಕೋರ್ಸ್‌ನಲ್ಲಿ ಕಲಿಸಲಾಗುತ್ತದೆ. ಹರಳುಗಳ ಸ್ವಾಭಾವಿಕ ಹಾಗೂ ಕೃತಕತೆ ಪರಿಶೀಲನೆ ಕುರಿತು ಅಭ್ಯಾಸ ಮಾಡಿಸಲಾಗುತ್ತದೆ. ಇದರಿಂದ ಮುಂದೆ ಉದ್ಯೋಗದಲ್ಲಿ ಹರಳುಗಳ ಗುಣಮಟ್ಟದಲ್ಲಿನ ವ್ಯತ್ಯಾಸಗಳನ್ನು ತಿಳಿಯಲು ಅನುಕೂಲ.

ಚೈತ್ರಾ ಚಂದರ್
ಜೆಮ್ಸ್ ಅಂಡ್ ಜ್ಯೂವೆಲರಿ ವಿಭಾಗದ ಮುಖ್ಯಸ್ಥರು, ವೋಗ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್ ಆ್ಯಂಡ್ ಡಿಸೈನ್. ಬೆಂಗಳೂರು

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್‌ಕುಮಾರ್ ವಿ.

ಮೀನುಗಾರಿಕೆ, ಹೈನುಗಾರಿಕೆ ವೃತ್ತಿ ಅವಕಾಶಗಳು ಹೇಗಿವೆ?

1. ನಾನು ಬಿ.ಎಸ್ಸಿ ಮುಗಿಸಿದ್ದು, ಎಂಬಿಎ ಕೋರ್ಸ್‌ಗೆ ಸೇರುವ ಯೋಚನೆಯಿದೆ. ಈ ಕೋರ್ಸ್ ಪ್ರವೇಶ ಪ್ರಕ್ರಿಯೆ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಬಿ.ಎಸ್ಸಿ ನಂತರ ಎಂಬಿಎ ಕೋರ್ಸ್ ಮಾಡಲು ಸಾಮಾನ್ಯವಾಗಿ ಈ ಪ್ರಕ್ರಿಯೆಗಳಿರುತ್ತವೆ.

- ಪ್ರವೇಶ ಪರೀಕ್ಷೆ
- ಸಮೂಹ ಚರ್ಚೆ ಮತ್ತು
- ವೈಯಕ್ತಿಕ ಸಂದರ್ಶನ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಎಂಬಿಎ ಮಾಡಲು 'ಕ್ಯಾಟ್'(Common Admission Test) ಪರೀಕ್ಷೆಯನ್ನು ಬರೆಯಬೇಕು. ಇನ್ನಿತರ ವಿಶ್ವವಿದ್ಯಾಲಯ/ಕಾಲೇಜುಗಳಿಗೆ ಜಿಮ್ಯಾಟ್, ಪಿಜಿ-ಸಿಇಟಿ, ಮ್ಯಾಟ್(Management Aptitude Test) ಇತ್ಯಾದಿ ಪ್ರವೇಶ ಪರೀಕ್ಷೆಗಳಲ್ಲಿ ಭಾಗವಹಿಸಬೇಕು. ನೀವು ಯಾವ ವಿವಿ/ಕಾಲೇಜಿ ನಲ್ಲಿ ಎಂಬಿಎ ಮಾಡಲು ಬಯಸುತ್ತೀರೋ, ಅದಕ್ಕೆ ಅನ್ವಯವಾಗುವ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಬೇಕು. ಕಾಲೇಜು ಆಯ್ಕೆ ಪ್ರಕ್ರಿಯೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: www.youtube.com/watch?v=DmaXk-MuoOI

2. ನಾನು ಬಿ.ಎಸ್ಸಿ (ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿಶಾಸ್ತ್ರ) ಮುಗಿಸಿದ್ದು, ಎಂ.ಎಸ್ಸಿ ಕೋರ್ಸನ್ನು ಯಾವ ವಿಷಯದಲ್ಲಿ ಮಾಡಿದರೆ ಉತ್ತಮ ವೃತ್ತಿಯ ಅವಕಾಶಗಳಿವೆ? ಹಾಗೂ ನನಗೆ ಮೀನುಗಾರಿಕೆ ಮತ್ತು ಹೈನುಗಾರಿಕೆ ವಿಷಯದಲ್ಲಿ ಉನ್ನತ ಶಿಕ್ಷಣ ಮಾಡುವ ಅವಕಾಶಗಳಿವೆಯೇ?

ಪ್ರೇರಣ ಎಂ.ಎಸ್, ಹಡಗಲಿ

ನಮ್ಮ ಅಭಿಪ್ರಾಯದಂತೆ ರಸಾಯನ ವಿಜ್ಞಾನದಲ್ಲಿ, ಎಂ.ಎಸ್ಸಿ ಮಾಡಿದರೆ ಹೆಚ್ಚಿನ ಉದ್ಯೋಗಾವಕಾಶಗಳಿವೆ. ಹಾಗೆಯ ಬಿ.ಎಸ್ಸಿ ನಂತರ ಎಂ.ಎಸ್ಸಿ (ಮೀನುಗಾರಿಕೆ/ಹೈನುಗಾರಿಕೆ) ಕೋರ್ಸನ್ನು ಮಾಡುವ ಅವಕಾಶಗಳಿವೆ. ಸರ್ಕಾರಿ ವಲಯದ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ICAR) ಸಂಸ್ಥೆ ಮತ್ತು 74 ಸರ್ಕಾರಿ ಕೃಷಿ ಸಂಬಂಧಿತ ವಿವಿಗಳಲ್ಲಿ ಕೃಷಿ ವಿಜ್ಞಾನ, ಮೀನುಗಾರಿಕೆ, ಹೈನುಗಾರಿಕೆ, ಪಶುವಿಜ್ಞಾನ, ತೋಟಗಾರಿಕೆ ಮುಂತಾದ ವಿಷಯಗಳಲ್ಲಿ ಎಂ.ಎಸ್ಸಿ, ಪಿಎಚ್.ಡಿ ಕೋರ್ಸ್‌ಗಳ ಮೂಲಕ ಉನ್ನತ ಶಿಕ್ಷಣವನ್ನು ಮಾಡಬಹುದು. ಆಸಕ್ತ ಅಭ್ಯರ್ಥಿಗಳು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (NTA) ಆಯೋಜಿಸುವ ಎಐಇಇಎ (AIEEA) ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಬೇಕು. ಅರ್ಹತೆಯ ನಿಯಮಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಜಾಲತಾಣಗಳನ್ನು ಗಮನಿಸಿ:

https://icar.nta.nic.in/
http://ndri.res.in/education/admission-2021-22/
https://kvafsu.edu.in

3. ನಾನು ಎಂ.ಎಸ್ಸಿ (ಭೌತವಿಜ್ಞಾನ) ಮಾಡಿ ಸರ್ಕಾರಿ ಕೆಲಸದಲ್ಲಿದ್ದೇನೆ. ಈ ಕೆಲಸದಲ್ಲಿದ್ದುಕೊಂಡು ಬಿ.ಇಡಿ ಮಾಡಬಹುದೇ?

ಲತಾ, ಉತ್ತರ ಕನ್ನಡ

ನಮ್ಮ ಅಭಿಪ್ರಾಯದಂತೆ, ನೀವು ಬಿ.ಇಡಿ ಕೋರ್ಸನ್ನು ದೂರ ಶಿಕ್ಷಣದ ಮೂಲಕ ಮಾಡಬಹುದು. ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಮಾನ್ಯತೆ ಪಡೆದ ದೂರ ಶಿಕ್ಷಣದ ಕೋರ್ಸ್ ಮಾಹಿತಿಗಾಗಿ ಗಮನಿಸಿ: https://deb.ugc.ac.in/

4. ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಮುಗಿಸಿದ್ದು, ಮುಂದೆ ಬಿ.ಎಸ್ಸಿ (ನರ್ಸಿಂಗ್) ಮಾಡಬಹುದೇ?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ (ವಿಜ್ಞಾನ) ನಂತರ ಬಿ.ಎಸ್ಸಿ (ನರ್ಸಿಂಗ್) ಮಾಡಬಹುದು. ಕರ್ನಾಟಕದಲ್ಲಿ ಪ್ರವೇಶ ಪ್ರಕ್ರಿಯೆ ಸಿಇಟಿ ಮೂಲಕ ನಡೆಯುತ್ತದೆ.

5. ನಾನು 2017ರ ಪಿಯುಸಿ ಪರೀಕ್ಷೆಯಲ್ಲಿ ಒಂದು ವಿಷಯದಲ್ಲಿ ಫೇಲ್‌ಆಗಿದ್ದೇನೆ. ಈಗ ಪೂರಕ ಪರೀಕ್ಷೆಯಲ್ಲಿ ಒಂದು ವಿಷಯದ ಪರೀಕ್ಷೆ ಬರೆಯಬಹುದೇ ಅಥವಾ ಎಲ್ಲಾ ವಿಷಯಗಳಲ್ಲಿ ಬರೆಯಬೇಕೆ?

ದರ್ಶನ್ ಎಂ.ಜಿ, ಕಡೂರು

ನಮಗಿರುವ ಮಾಹಿತಿಯಂತೆ, ಮೂಲ ಅನುತ್ತೀರ್ಣ ಅಂಕಪಟ್ಟಿ, ಅರ್ಜಿ ಆಧಾರದ ಮೇಲೆ ಪರೀಕ್ಷಾ ಶುಲ್ಕಗಳನ್ನು ಸಲ್ಲಿಸಿ, ಸಂಬಂಧಿಸಿದ ದಾಖಲೆಗಳನ್ನು ಪ್ರಾಂಶುಪಾಲರ ಮೂಲಕ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಗೆ ಸಲ್ಲಿಸಿ, ಪರೀಕ್ಷೆಗೆ ಹಾಜರಾಗಿ. ಹೆಚ್ಚಿನ ಮಾಹಿತಿಗಾಗಿ, ಈ ಸುತ್ತೋಲೆ ಗಮ ನಿಸಿ: https://kseab.karnataka.gov.in/storage/pdf-files/2022-23_IIPUC_SUPP_2_CIRCULAR.pdf

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಆಲ್‌ಸ್ಟೋಮ್ ಇಂಡಿಯಾ ಸ್ಕಾಲರ್‌ಶಿಪ್ ಪ್ರೋಗ್ರಾಂ 2023-24

ಭಾರತದಾದ್ಯಂತ ವಿದ್ಯಾರ್ಥಿಗಳಿಗೆ ತಮ್ಮ ಉನ್ನತ ಶಿಕ್ಷಣವನ್ನು ಮುಂದುವರಿಸಲು ಹಣಕಾಸಿನ ನೆರವು ನೀಡುವ ಉದ್ದೇಶದಿಂದ ಆಲ್‌ಸ್ಟೋಮ್ ಇಂಡಿಯಾ ಈ ವಿದ್ಯಾರ್ಥಿವೇತನವನ್ನು ನೀಡುತ್ತಿದೆ.

ಅರ್ಹತೆ: 2023-24ರ ಆರ್ಥಿಕ ವರ್ಷದಲ್ಲಿ ಯಾವುದೇ ವರ್ಷದಲ್ಲಿ ಐಟಿಐ/ಡಿಪ್ಲೊಮಾ, ಸಾಮಾನ್ಯ ಪದವಿ ಅಥವಾ ಪದವಿ (ಎಂಜಿನಿಯರಿಂಗ್) ಸ್ಟೆಮ್ ಕೋರ್ಸ್‌ಗಳಲ್ಲಿ(STEM) ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ತಮ್ಮ ಹಿಂದಿನ ಶೈಕ್ಷಣಿಕ ವರ್ಷ/ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 6 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆಲ್‌ಸ್ಟೋಮ್ ಇಂಡಿಯಾ ನಿರ್ದಿಷ್ಟಪಡಿಸಿದ ಯಾವುದೇ ಸಂಸ್ಥೆಗಳಲ್ಲಿ ಸ್ಟೆಮ್‌ನಲ್ಲಿ (ಯಾವುದೇ ವರ್ಷ) ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ಸಹ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆರ್ಥಿಕ ಸಹಾಯ: ₹ 75,000ದ ವರೆಗೆ (ಒಂದು ಬಾರಿ)

ಅರ್ಜಿ ಸಲ್ಲಿಸಲು ಕೊನೆಯ ದಿನ: 15-09-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/AISDG4

ಆಸ್ಪೈರ್ ಸ್ಕಾಲರ್‌ಶಿಪ್

ಅಜಯ್ ಚೌಧರಿ ಮತ್ತು ಕುಟುಂಬದವರು ಸ್ಥಾಪಿಸಿರುವ ಲಾಭರಹಿತ ಸ್ವಯಂ ಚಾರಿಟಬಲ್ ಟ್ರಸ್ಟ್‌ನ ಸಿಎಸ್‌ಆರ್ ಉಪಕ್ರಮ 'ಆಸ್ಪೈರ್ ಸ್ಕಾಲರ್‌ಶಿಪ್ ಪ್ರೋಗ್ರಾಂ'.

ಈ ವಿದ್ಯಾರ್ಥಿ ವೇತನವು ಪ್ರತಿಷ್ಠಿತ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಬಿ.ಟೆಕ್ ಕೋರ್ಸ್‌ಗಳನ್ನು ಓದುತ್ತಿರುವ ಹಿಂದುಳಿದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡುವ ಗುರಿಯನ್ನು ಹೊಂದಿದೆ.

ಅರ್ಹತೆ: ಬಿ.ಟೆಕ್ ಕೋರ್ಸ್‌ಗಳ ಮೊದಲ ವರ್ಷಕ್ಕೆ ಸೇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷ ಮೀರಬಾರದು.

ಆರ್ಥಿಕ ಸಹಾಯ: ಬೋಧನಾ ಶುಲ್ಕ, ಹಾಸ್ಟೆಲ್ ಶುಲ್ಕಗಳು, ಆಹಾರ ಮತ್ತು ಸಂಬಂಧಿತ ವೆಚ್ಚಗಳಂತಹ ಶೈಕ್ಷಣಿಕ ವೆಚ್ಚಗಳನ್ನು ಸರಿದೂಗಿಸಲು ವಾಸ್ತವಿಕ ಶುಲ್ಕ ರಚನೆಯ ಆಧಾರದ ಮೇಲೆ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆಯ ದಿನ: 10-09-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/ASPI1

ಕೀಟ ಭಕ್ಷಕ ಸಸ್ಯಗಳು

ಸಸ್ಯ ವೈವಿಧ್ಯ

ನೂರ್ ಸಮದ್ ಅಬ್ಬಲಗೆರೆ

ಅಮೆರಿನ್ ಪಿಚ್ಚರ್ ಪ್ಲಾ್ಯಂಟ್/ಪರ್ಪಲ್ ಪಿಚ್ಚರ್ ಪ್ಲಾ್ಯಂಟ್ -ಸರಸೇನಿಯ ಪರ್ಪುರಿಯ



ವೀನಸ್ ಫ್ಲೈಟ್ರ್ಯಾಪ್ ಸಸ್ಯ– ಡಯೋನಿಯ ಮುಸಿಪುಲ

(ಚಿತ್ರಗಳು ಲೇಖಕರವು)

ಮೊನ್ನೆ ನಾನು ಕುಟುಂಬದೊಂದಿಗೆ ಸಿಂಗಪುರಕ್ಕೆ ಭೇಟಿ ನೀಡಿದ್ದೆ. ಅಲ್ಲಿನ 'ಗಾರ್ಡನ್ಸ್ ಬೈ ದಿ ಬೇ' ಬಳಿ ಕ್ಲೌಡ್ ಫಾರೆಸ್ಟ್‌ನಲ್ಲಿನ ಲಕ್ಷಗಟ್ಟಲೆ ಇರುವ ಸುಂದರ ಸಸ್ಯಗಳಲ್ಲಿ ಕೀಟಗಳನ್ನೇ ಭಕ್ಷಿಸುವ ಸಸ್ಯಗಳನ್ನು ನೋಡುವ ಸೌಭಾಗ್ಯ ಸಿಕ್ಕಿತು.

ಈ ಕ್ಲೌಡ್ ಫಾರೆಸ್ಟ್ ಸಾಮಾನ್ಯ ಜನರಿಗೇ ಇಷ್ಟೊಂದು ಸುಂದರವೆನಿಸಿದರೇ.. ಇನ್ನು ಸಸ್ಯಶಾಸ್ತ್ರ ಓದಿದವರಿಗಂತೂ ಅದು ಸ್ವರ್ಗಲೋಕದ ಐಸಿರಿಯೇ ಸರಿ. ನಾನು ಈ ಸಸ್ಯಗಳ ಬಗ್ಗೆ ಮೊಟ್ಟ ಮೊದಲು ಓದಿದ್ದು 11ನೇ ತರಗತಿಯಲ್ಲಿದ್ದಾಗ. ಮುಂದೆ ಬಿ. ಎಸ್ಸಿ ಕೃಷಿ ಓದುತ್ತಿದ್ದಾಗ ನೆಚ್ಚಿನ ಸಿಮಾರೂಬ ವಿಜ್ಞಾನಿ ಡಾ. ಶ್ಯಾಮಸುಂದರ್ ಜೋಷಿ ಸರ್ ಅವರ ಅರ್ಥವತ್ತಾದ ಪಾಠದ ಮೂಲಕ. 24 ವರ್ಷಗಳ ಹಿಂದೆ ಸಸ್ಯಶಾಸ್ತ್ರ ಪ್ರಯೋಗಾಲಯದಲ್ಲೂ ಗಾಜಿನ ಬಾಟಲಿಯಲ್ಲಿ ಈ ಸಸ್ಯಗಳನ್ನು ನೋಡಿದ್ದಷ್ಟೇ ನೆನಪು. ಇಂದಿನ ವಿದ್ಯಾರ್ಥಿಗಳೂ ಇದರಿಂದ ಹೊರತಾಗಿಲ್ಲ ಎಂಬುದನ್ನು ನಾನು ಬಲ್ಲೆ. ಈ ಸಸ್ಯಗಳನ್ನು ಆಂಗ್ಲ ಭಾಷೆಯಲ್ಲಿ Insectivorous plants ಅಥವ Carnivorous plants. ಅಂದರೆ, ಕೀಟಗಳನ್ನು ಭಕ್ಷಿಸುವ ಸಸ್ಯಗಳು ಅಥವ ಮಾಂಸಹಾರಿ ಸಸ್ಯಗಳು ಎಂದರ್ಥ.

ಇಂತಹ ಸಸ್ಯಗಳಲ್ಲೊಂದು ಪಿಚ್ಚರ್ ಪ್ಲಾ್ಯಂಟ್ (Pitcher Plant). ನೆಪೆನ್‌ಥೆಸ್ ಖಾಸಿಯಾನ(***Nepenthes khasiana***) ಇದರ ವೈಜ್ಞಾನಿಕ ಹೆಸರು. ಇದು ಗಿಡದ ಕಾಂಡದಿಂದ ಉದ್ಭವವಾದ ಎಲೆಯ ತೊಟ್ಟು, ಅಗಲವಾದ ಮಧ್ಯಭಾಗ ಹೊರತುಪಡಿಸಿ ಉಳಿದ ಎಲೆಯ ತುದಿಭಾಗವೇ ಹೂಜಿಯಾಕಾರ ಮತ್ತು ಅದಕ್ಕೆ ಒಂದು ಮುಚ್ಚಳವಿರುವಂತೆ ಮಾರ್ಪಾಟುಗೊಂಡಿರುವುದು ಪ್ರಕೃತಿಯ ಸೃಷ್ಟಿ. ಆಂಗ್ಲ ಭಾಷೆಯಲ್ಲಿ ಹೂಜಿಗೆ ಪಿಚ್ಚರ್(Pitcher) ಎಂದು ಕರೆಯುವುದುಂಟು. ಹಾಗಾಗಿ ಇದಕ್ಕೆ ಈ ಹೆಸರು ಬರಲು ಕಾರಣ. ಇಲ್ಲಿರುವ ಮುಚ್ಚಳಕ್ಕೆ ಒಪರ್ಕ್ಯಲಮ್(Operculum) ಮತ್ತು ಹೂಜಿಯ ಸುತ್ತಲ ಪ್ರವೇಶದ್ವಾರಕ್ಕೆ ಪೆರಿಸ್ಟೋಮ್(Peristome) ಎಂದು ಹೆಸರಿಸಿದ್ದಾರೆ.

ಅದೆಲ್ಲ ಸರಿ ಈ ಸಸ್ಯಗಳಿಗೆ ಕೀಟಗಳನ್ನು ಭಕ್ಷಿಸುವ ಅಥವ ಮಾಂಸಹಾರಿ ಸಸ್ಯಗಳು ಎಂದು ಏಕೆ ಕರೆಯುತ್ತಾರೆ? ಏಕೆ ಈ ಸಸ್ಯಗಳು ಕೀಟಗಳು ಮತ್ತು ಇತರೆ ಜೀವಿಗಳನ್ನು ತಿನ್ನುತ್ತವೆ. ಈ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯೋಣ ಬನ್ನಿ...

ಕೀಟಗಳು ಮತ್ತ ಇತರೆ ಜೀವಿಗಳನ್ನು ಭಕ್ಷಿಸುವುದರಿಂದ ಇವುಗಳಿಗೆ ಮಾಂಸಾಹಾರಿ ಸಸ್ಯಗಳು ಅಥವಾ ಕೀಟಗಳನ್ನು ಭಕ್ಷಿಸುವ ಸಸ್ಯಗಳು ಎನ್ನುತ್ತಾರೆ. ಈ ಸಸ್ಯಗಳ ಪ್ರವೇಶದ್ವಾರ ಪೆರಿಸ್ಟೋಮ್ ಮೇಣದಂತಹ ಅಂಟಿನ ಸುವಾಸನೆಯುಕ್ತ ಮಕರಂದ ಸ್ರವಿಸುತ್ತದೆ. ಬಗೆಬಗೆಯ ಕೀಟಗಳು ಇದರ ಆಕರ್ಷಣೆಗೊಳಗಾಗಿ ಬಂದು ಕೂರುತ್ತವೆ. ಹಾಗೆ ಮೆಲ್ಲನೆ ಚಲಿಸುವಾಗ ಕೀಟಗಳು ಜಾರಿ ಹೂಜಿಯೊಳಕ್ಕೆ ಉರುಳುತ್ತವೆ. ಎಷ್ಟೇ ಬಾರಿ ಮೇಲೆ ಬರಲು ಹರಸಾಹಸ ಮಾಡಿದರೂ ಪ್ರಯತ್ನ ವಿಫಲವಾಗಿ ಕೆಲವೇ ಕ್ಷಣಗಳಲ್ಲಿ ಸಾವನ್ನಪ್ಪುತ್ತವೆ. ಈ ಹೂಜಿಯಲ್ಲಿ ಅರ್ಧದಷ್ಟು ಈ ಸಸ್ಯ ಸ್ರವಿಸುವ ಜೀರ್ಣದ್ರವ್ಯ ತುಂಬಿರುತ್ತದೆ. ಜೀರ್ಣಕ್ರಿಯೆಗೆ ಸಹಕಾರಿಯಾದ ಕಿಣ್ವಗಳು ಮತ್ತು ಬ್ಯಾಕ್ಟೀರಿಯಾ ಇದರಲ್ಲಿರುತ್ತವೆ.



ಪಿಚ್ಚರ್ ಪ್ಲಾ್ಯಂಟ್ -ನೆಪೆಂತಸ್ ಖಾಸಿಯಾನ

ನಾಲ್ಕೈದು ದಿನಗಳಲ್ಲಿ ಕೀಟಗಳು ಜೀರ್ಣಕ್ರಿಯೆಗೊಳಗಾಗಿ ತನ್ನ ದೇಹದಲ್ಲಿರುವ ಪೋಷಕಾಂಶಗಳು ಬಿಡುಗಡೆಯಾಗಿ ದ್ರವ್ಯದಲ್ಲಿ ವಿಲೀನಗೊಳ್ಳುತ್ತವೆ. ಅದರಲ್ಲೂ ಕೀಟ ದೇಹದ ಸಾರಜನಕ ಮತ್ತು ರಂಜಕವನ್ನು ಈ ಸಸ್ಯಗಳು ಹೀರಿಕೊಂಡು ತಮ್ಮ ಬೆಳವಣಿಗೆಗೆ ಬಳಸಿಕೊಳ್ಳುತ್ತವೆ.

ಸಾರಜನಕ, ರಂಜಕದ ಕೊರತೆಯಿರುವ ಮಣ್ಣಲ್ಲಿ ಈ ಸಸ್ಯಗಳು ಬೆಳೆಯುತ್ತವೆ. ಹಾಗಾಗಿ ಈ ಸಸ್ಯಗಳು ಕೀಟಗಳನ್ನು ಆಹ್ವಾನಿಸಿ, ಸಂಹರಿಸಿ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತವೆಂದರೆ ಎಂತಹ ವಿಸ್ಮಯಕಾರಿ ಪ್ರಕೃತಿಯ ಕೊಡುಗೆ ಅಲ್ಲವೇ ?. ನಮ್ಮ ದೇಶದಲ್ಲಿ ಮೇಘಾಲಯದ ಬಾಗ್‌ಮಾರ್ ಬೆಟ್ಟ, ಗಾರೊ ಬೆಟ್ಟ, ಖಾಸಿ ಬೆಟ್ಟ ಹಾಗೂ ಅಸ್ಸಾಂ, ನಾಗಾಲ್ಯಾಂಡ್‌ಗಳ ಬೆಟ್ಟಗುಡ್ಡಗಳಲ್ಲಿ ಇಂತಹ ಪಿಚ್ಚರ್ ಪ್ಲಾ್ಯಂಟ್ ಸಸ್ಯಗಳು ಹೆಚ್ಚಾಗಿ ಕಾಣಸಿಗುತ್ತವೆ.

ಈ ಕ್ಲೌಡ್ ಫಾರೆಸ್ಟ್‌ನಲ್ಲಿ ಮತ್ತೊಂದು ಅಮೆರಿಕನ್ ಪಿಚರ್ ಪ್ಲಾ್ಯಂಟ್ ಅಥವಾ ಪರ್ಪಲ್ ಪಿಚ್ಚರ್ ಪ್ಲಾ್ಯಂಟ್(Purple pitcher plant) ಕಂಡವು. ಇವು ತುತ್ತೂರಿಯ ಆಕಾರವಿರುವುದರಿಂದ ಇವಕ್ಕೆ ಟ್ರಂಪೆಟ್ ಪಿಚ್ಚರ್‌ಪ್ಲಾಂಟ್ಸ್ (Trumpet pitcher plants) ಎಂದು ಸಸ್ಯಶಾಸ್ತ್ರಜ್ಞರು ಹೆಸರು ನೀಡಿದ್ದಾರೆ. ಸರಸೆನಿಯಾ ಪರ್ಪುರಿಯಾ(***Sarracenia purpuria***)ಇದರ ವೈಜ್ಞಾನಿಕ ಹೆಸರು. ಈ ಸಸ್ಯಗಳು ನೇರವಾಗಿ ಭೂಮಿಯಿಂದಲೇ ಉದ್ಭವವಾಗಿದ್ದವು. ಅವು ಅಂಗಡಿಯಲ್ಲಿ ಬಣ್ಣಬಣ್ಣದ ಗಾಜಿನ ಲೋಟಗಳು ಜೋಡಿಸಿ ಇಟ್ಟಂತೆ ಸುಂದರವಾಗಿ ಕಾಣುತ್ತಿದ್ದವು. ಮಹಿಳೆಯರು ಅಲಂಕೃತಗೊಂಡು ಯಾವುದೋ ಸಮಾರಂಭಕ್ಕೆ ಸಿದ್ಧವಾಗಿ ನಿಂತಿರುವಂತೆ ಕಾಣುತ್ತಿದ್ದವು. ಹಾಗಾಗಿಯೇ ಈ ಸಸ್ಯಗಳಿಗೆ ಲೇಡಿಸ್ ಇನ್ ವೇಟಿಂಗ್(Ladies in waiting) ಎಂದು ಅರ್ಥಪೂರ್ಣ ನಾಮಕರಣ ಮಾಡಿದ್ದಾರೆ. ಈ ಸಸ್ಯಗಳು ಕೂಡ ಮೇಲೆ ತಿಳಿಸಿದ ಚಾಕಚಕ್ಯತೆ ಬಳಸಿ ಕೀಟಗಳನ್ನು ಹಿಡಿದು ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಮಾಂಸಾಹಾರಿ ಸಸ್ಯಗಳು ಬರೀ ಕೀಟಗಳನ್ನಷ್ಟೇ ಅಲ್ಲದೇ ಚಿಕ್ಕ ಪುಟ್ಟ ಜೀವಿಗಳಾದ ಹಲ್ಲಿಗಳು, ಓತಿಕ್ಯಾತ, ಕಪ್ಪೆ, ಇಲಿ, ಹಾವುಗಳನ್ನು ಸೆರೆ ಹಿಡಿದು ತಿಂದಿರುವುದು ಕೆಲವು ವರದಿಗಳು ಉಲ್ಲೇಖಿಸುತ್ತವೆ. ಇನ್ನೊಂದು ವಿಭಿನ್ನವಾದ ವೀನಸ್ ಫ್ಲೈಟ್ರ್ಯಾಪ್ ಸಸ್ಯ(Venus fly trap-***Dionaea muscipula***). ಇದಕ್ಕೆ ಸ್ನ್ಯಾಪ್ ಟ್ರಾಪ್ (Snap trap) ಎಂದೂ ಕರೆಯುತ್ತಾರೆ. ಈ ಸಸ್ಯದ ಎಲೆಗಳು ತೆರೆದಿಟ್ಟ ಪುಸ್ತಕದಂತೆ ಕಾಣುತ್ತವೆ. ಆ ಎಲೆಗಳ ಮಧ್ಯಭಾಗದಲ್ಲಿ ಕೆಲವು ಸ್ಪರ್ಶಕಗಳಿರುತ್ತವೆ. ಯಾವುದೇ ನೊಣ ಅಥವ ಕೀಟ ಆ ಸ್ಪರ್ಶಕಗಳನ್ನು ಒಂದೆರಡು ಬಾರಿ ಸ್ಪರ್ಶಿಸಿದರೆ ಸಾಕು ಸೆರೆಯಾದ ಕೀಟದ ಜೊತಗೆ ಎಲೆಗಳು ತಕ್ಷಣ ಮುಚ್ಚಿಕೊಳ್ಳುತ್ತವೆ. ತೆರೆದ ಪುಸ್ತಕ ಮುಚ್ಚಿದಂತೆ. ಕೆಲವೇ ದಿನಗಳಲ್ಲಿ ಇಡೀ ಕೀಟವನ್ನೇ ದ್ರವ್ಯವಾಗಿ ಪರಿವರ್ತಿಸುತ್ತದೆ. ಎಲೆಗಳ ಅಂಚಿನಲ್ಲಿ ಮುಳ್ಳುಗಳೂ ಇರುತ್ತವೆ. ಪುನಃ ಕೆಲಕಾಲದ ನಂತರ ಎಲೆಗಳು ಬೇರೆ ಕೀಟಗಳಿಗಾಗಿ ತೆರೆದುಕೊಳ್ಳುತ್ತವೆ. ನಮ್ಮ ಬೆರಳು ಮಧ್ಯೆ ಇಟ್ಟರೂ ಹರಿತವಾದ ಮುಳ್ಳುಗಳ ಸ್ಪರ್ಶಕ್ಕೆ ರಕ್ತ ಸ್ರವಿಸುವುದಂತೂ ಗ್ಯಾರಂಟಿ. ಈ ರೀತಿಯ ಇನ್ನಿತರೆ ಸಸ್ಯಗಳಾದ ಸನ್‌ಡೀವ್(Sundew plants)ಸಸ್ಯಗಳು, ಬ್ಲಾಡ್ಡೆರ್ವರ್ಟ್(Bladderwort plants), ಬಟ್ಟರ್‌ವರ್ಟ್(Butterwort plants), ಲೊಬ್ಸ್ಟರ್ ಪಾಟ್ ಟ್ರಾಪ್(Lobster pot trap), ಆಕ್ಟೀವ್ ಗ್ಲೂ ಟ್ರಾಪ್ ಪ್ಯಾಸಿವ್ ಗ್ಲೂ ಟ್ರ್ಯಾಪ್ಸ್(Active glue trap Passive glue traps) ಮತ್ತು ಸಕ್ಷನ್ ಟ್ರ್ಯಾಪ್(Suction trap) ಹೆಸರಿನ ಅನೇಕ ಸಸ್ಯಗಳು ಕೀಟಗಳನ್ನು ಇತರೆ ಚಿಕ್ಕ ಪುಟ್ಟ ಜೀವಿಗಳನ್ನು ವಿವಿಧ ವರ್ಚಸ್ಸುಗಳಿಂದ ಹಿಡಿದು ತಿನ್ನುತ್ತವೆ. ಪೋಷಕಾಂಶಗಳ ಕೊರತೆಯಿರುವ ಮಣ್ಣಿನಲ್ಲಿ ಇಂಥ ಸಸ್ಯಗಳು ಕಂಡುಬರುತ್ತವೆ. ಆದರೂ ಇವು ನಮಗೆ ಸಿಗುವುದು ಅಪರೂಪ. ಇವುಗಳ ಸಂಖ್ಯೆ ಕ್ಷೀಣಿಸಿರುವುದೇ ಇದಕ್ಕೆ ಕಾರಣ.

ಇಂತಹ ಹಲವಾರು ಸಸ್ಯಗಳು ಅಳಿವಿನಂಚಿನಲ್ಲಿರುವುದೂ ಒಂದೆಡೆ ವಿಪರ್ಯಾಸವೆನಿಸಿದರೇ.... ಕೆಲವರು ಇವುಗಳನ್ನು ಕಿತ್ತು ತಂದು ಮನೆಗಳಲ್ಲಿ, ಹೂದೋಟಗಳಲ್ಲಿ ಬೆಳೆಸಲು ಪ್ರಯತ್ನಿಸಿ ನಾಶ ಪಡಿಸುತ್ತಿರುವುದು ಅಷ್ಟೇ ಸತ್ಯ. ಇಂತಹ ಸುಂದರ ಪ್ರಕೃತಿ ಕೊಡುಗೆಯ ವಿಸ್ಮಯಕಾರಿ ಸಸ್ಯಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ.

(ಲೇಖಕರು: ಕೀಟಶಾಸ್ತ್ರಜ್ಞರು ಹಾಗೂ ಕೃಷಿ ಅಧಿಕಾರಿ)

ಆವಲಹಳ್ಳಿ: ಅವೈಜ್ಞಾನಿಕ ನಿರ್ಮಾಣ– ನಾಗರಿಕರ ದೂರು

ಮೇಲ್ಸೇತುವೆಯಿಂದ ಸಂಚಾರ ದಟ್ಟಣೆ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಹಳೇ ಮದ್ರಾಸ್ ರಸ್ತೆಯ ಆವಲಹಳ್ಳಿ ಬಳಿ ನಿರ್ಮಿಸಿರುವ ಮೇಲ್ಸೇತುವೆಯಿಂದ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗಿ ದಿನ ನಿತ್ಯ ವಾಹನ ಸವಾರರು ನರಕಯಾತನೆ ಅನುಭವಿಸುವಂತಾಗಿದೆ.

ನಗರದಿಂದ ಹೊಸಕೋಟೆ, ಕೋಲಾರ ಮೂಲಕ ಚೆನ್ನೈಗೆ ಸಂಪರ್ಕ ಕಲ್ಪಿಸುವ ಹಳೇ ಮದ್ರಾಸ್ ರಸ್ತೆಯ ಆವಲಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 12 ವರ್ಷಗಳ ಹಿಂದೆ ಮೇಲ್ಸೇತುವೆ ನಿರ್ಮಾಣ ಮಾಡಿತ್ತು. ಅವೈಜ್ಞಾನಿಕವಾಗಿ ನಿರ್ಮಿಸಿರುವುದರಿಂದ ಎಂಟು ಹಳ್ಳಿಗಳಿಗೆ ಸಂಪರ್ಕಿಸಲು ಇರುವ ಅಂಡರ್‌ಪಾಸ್ ಕಿರಿದಾಗಿ ವಾಹನ ಸಂಚರಿಸುವುದೇ ಹರಸಾಹಸವಾಗಿದೆ ಎಂದು ನಾಗರಿಕರು ದೂರಿದ್ದಾರೆ.

ಪ್ರಜಾವಾಣಿ ವಿಶೇಷ

ಆವಲಹಳ್ಳಿ ಸುತ್ತಮುತ್ತಲೂ 10ಕ್ಕೂ ಹೆಚ್ಚು ಶಾಲೆಗಳಿವೆ. ಅಲ್ಲದೆ, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು, ಗ್ರಾಮ ಪಂಚಾಯಿತಿ ಕಚೇರಿ, ನಾಲ್ಕು ಬ್ಯಾಂಕ್‌ಗಳು, ಅಂಚೆ ಕಚೇರಿ ಮತ್ತು ಪುರಾತನ ಪ್ರಸಿದ್ಧ ಮುನೇಶ್ವರಸ್ವಾಮಿ ದೇವಸ್ಥಾನ ಇರುವುದರಿಂದ ನಿತ್ಯ ಸಾವಿರಾರು ಮಂದಿ ಇಲ್ಲಿ ಸಂಚರಿಸುತ್ತಾರೆ. ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ಸೇತುವೆಯ ಎರಡೂ ಭಾಗಗಳಲ್ಲಿ ಒಂದು ಕಿಲೋ ಮೀಟರ್‌ಗಿಂತಲೂ ಹೆಚ್ಚು ಉದ್ದ ವಾಹನಗಳ ಸಾಲು ಇರುತ್ತದೆ ಎಂದು ಮಾನವ ಹಕ್ಕುಗಳ ಜಾಗೃತಿ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಲಕ್ಷ್ಮಣ್ ಸಿಂಗ್ ದೂರಿದರು.

ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್ ಸಂಚಾರಕ್ಕೂ ತೊಂದರೆಯಾಗುತ್ತಿದೆ. ಮಳೆ ಬಂದರೆ ಅಂಡರ್ ಪಾಸ್‌ನಲ್ಲಿ ಎರಡು ಅಡಿಯಷ್ಟು ಎತ್ತರ ನೀರು ನಿಲ್ಲುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಹಲವಾರು ಬಾರಿ ಸ್ಥಳೀಯ ಜನ ಪ್ರತಿನಿಧಿಗಳ ಗಮನಕ್ಕೆ ತಂದರೂ ಸಮಸ್ಯೆ ಪರಿಹಾರವಾಗಿಲ್ಲ. ಸಮಸ್ಯೆಯನ್ನು ಬಗೆಹರಿಸದಿದ್ದರೆ ಮುಂದಿನ ಲೋಕಸಭಾ ಚುನಾವಣೆಯನ್ನು ಬಹಿಷ್ಕಾರ ಮಾಡಲಾಗುವುದು ಎಂದು ಸ್ಥಳೀಯ ಆನಂದ್ ಬಾಬು ಅವರು ಎಚ್ಚರಿಸಿದರು.

ಆವಲಹಳ್ಳಿ ಬಳಿಯ ಮೇಲ್ಸೇತುವೆಯಿಂದ ಸಂಚಾರ ದಟ್ಟಣೆ ಹೆಚ್ಚಿರುವುದು

ಬಿಬಿಎಂಪಿ ಶೌಚಾಲಯಗಳ ನಿರ್ವಹಣೆ ಹೊರಗುತ್ತಿಗೆಗೆ!

ಪ್ರಜಾವಾಣಿ ವಾಣಿ

ಬೆಂಗಳೂರು: ಹೈಕೋರ್ಟ್ ತರಾಟೆಗೆ ತೆಗೆದುಕೊಂಡ ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ ಶೌಚಾಲಯ ನಿರ್ವಹಣೆಯನ್ನು ಹೊರಗುತ್ತಿಗೆಗೆ ನೀಡಲು ಯೋಜನೆ ರೂಪಿಸಿದೆ.

ಸಾರ್ವಜನಿಕ ಶೌಚಾಲಯಗಳ ಬಗ್ಗೆ ನಿಗಾ ವಹಿಸದಿರುವ ಕುರಿತು ಕೆಲವು ದಿನಗಳ ಹಿಂದೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಸಾರ್ವಜನಿಕ ನೈರ್ಮಲ್ಯ ಮತ್ತು ಮೂಲ ಸೌಕರ್ಯಗಳನ್ನು ಬೆಂಗಳೂರು ನಗರದ ನಿವಾಸಿಗಳಿಗೆ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಮೂರು ವಾರಗಳ ಒಳಗೆ ಬಿಬಿಎಂಪಿ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಹೇಳಿತ್ತು.

169 ಇ-ಶೌಚಾಲಯಗಳ ನಿರ್ವಹಣೆಯನ್ನು ಮೂರು ವರ್ಗಗಳವರೆಗೆ, 34 ಶೌಚಾಲಯಗಳ ನಿರ್ವಹಣೆಯನ್ನು ಎರಡು ವರ್ಷಗಳ ವರೆಗೆ ಹೊರಗುತ್ತಿಗೆ ನೀಡಲು ಬಿಬಿಪಿಎಂಪಿ ಯೋಜನೆ ರೂಪಿಸಿದೆ. ಖಾಸಗಿ ಏಜೆನ್ಸಿಗೆ ಬಿಬಿಎಂಪಿಯಿಂದಲೇ ನಿರ್ವಹಣಾ ವೆಚ್ಚವನ್ನು ನೀಡಲು ನಿರ್ಧರಿಸಿದೆ. ಶೌಚಾಲಯಗಳ ಮೇಲೆ ಯಾವುದೇ ಜಾಹೀರಾತು ಪ್ರಕಟಿಸುವ ಹಕ್ಕುಗಳನ್ನು ನೀಡಲಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೇ 90ರಷ್ಟು ಕೊರತೆ: ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಪ್ರಕಾರ ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಬೆಂಗಳೂರಿನಲ್ಲಿ ಕನಿಷ್ಠ 20,000 ಮೂತ್ರಾಲಯಗಳು ಮತ್ತು 15,000 ಸಾರ್ವಜನಿಕ ಶೌಚಾಲಯಗಳು ಇರಬೇಕು.

ನಗರದಲ್ಲಿ ಶೇ 10ರಷ್ಟು ಮಾತ್ರ ಶೌಚಾಲಯ, ಮೂತ್ರಾಲಯಗಳಿದ್ದು, ಶೇ 90ರಷ್ಟು ಕೊರತೆ ಇದೆ.

ಹಲವು ಕಡೆಗಳಲ್ಲಿ ಉತ್ತಮ ಶೌಚಾಲಯವನ್ನು ನಿರ್ಮಿಸಲಾಗಿದ್ದರೂ ಅವು ನಿರ್ವಹಣೆ ಇಲ್ಲದ ಕಾರಣ ಸಾರ್ವಜನಿಕರು ಬಳಸುವ ಸ್ಥಿತಿಯಲ್ಲಿಲ್ಲ. ಸ್ವಚ್ಛತೆಗೆ ಬಿಬಿಎಂಪಿ ಆದ್ಯತೆ ನೀಡುತ್ತಿಲ್ಲ ಎಂದು ಬಳಕೆದಾರರು ದೂರಿದ್ದಾರೆ.

ವಾಗ್ದೇವಿ ಕಲಾ ಉತ್ಸವ 18ರಿಂದ

ಬೆಂಗಳೂರು: ಜೀವ-ಜಂತುಗಳ ಉಗಮ, ಬ್ರಹ್ಮಾಂಡ ರಹಸ್ಯ ಸೇರಿ ಸೃಷ್ಟಿಯ ಕುತೂಹಲವನ್ನು ವಿದ್ಯಾರ್ಥಿಗಳಲ್ಲಿ ತಣಿಸುವ ಉದ್ದೇಶದಿಂದ ಆ. 18 ಮತ್ತು 19ರಂದು ಬ್ರಹ್ಮಾಂಡ ಪರಿಕಲ್ಪನೆಯಲ್ಲಿ ‘ವಾಗ್ದೇವಿ ಕಲಾ ಉತ್ಸವ–2023 ಎಂಬ ಕಾರ್ಯಕ್ರಮವನ್ನು ಮಾರತ್ತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಆಯೋಜಿಸಲಾಗಿದೆ.

ಕಲಾ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವೇದ ವಿದ್ವಾಂಸ ಚಳ್ಳಕೆರೆ ಎಂ.ಎಸ್. ರಾಮಸ್ವಾಮಿ ಹಾಗೂ ಎಂ.ಎಸ್. ಶ್ರೀನಿವಾಸನ್ ಸಹೋದರರಿಗೆ ‘ವಾಗ್ದೇವಿ ವೇದರತ್ನ’ ಪ್ರಶಸ್ತಿಯನ್ನು ವಿಜ್ಞಾನಿ ಬಿ.ಎನ್. ಸುರೇಶ್ ಪ್ರದಾನ ಮಾಡಲಿದ್ದಾರೆ.

ಉತ್ಸವದಲ್ಲಿ ಬ್ರಹ್ಮಾಂಡ ವಿಷಯದ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಲು ನೃತ್ಯ, ಗಾಯನ, ಚಿತ್ರಕಲೆ, ಭಾಷಣ ಸೇರಿ 30ಕ್ಕೂ ಹೆಚ್ಚು ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. 1ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳು ಭಾಗವಹಿಸಬಹುದು. ಉತ್ಸವವನ್ನು ಶತವಧಾನಿ ಆರ್. ಗಣೇಶ್ ಉದ್ಘಾಟಿಸಲಿದ್ದಾರೆ.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವ ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗೆ 7899772466 ಅಥವಾ 9686577169 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು.

ಇಂದಿನಿಂದ ‘ಭವಿಷ್ಯಕ್ಕಾಗಿ ಬರಿಹೊಟ್ಟೆ ಸತ್ಯಾಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರಿಗೆ ಜಮೀನು, ಮನೆ, ನಿವೇಶನಗಳು ಹಾಗೂ ಅರಣ್ಯ ಹಕ್ಕುಗಳನ್ನು ನೀಡುವಂತೆ ಆಗ್ರಹಿಸಿ ಆ.14ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಭವಿಷ್ಯಕ್ಕಾಗಿ ಬರಿಹೊಟ್ಟೆ ಸತ್ಯಾಗ್ರಹ’ ಹಮ್ಮಿಕೊಳ್ಳಲಾಗಿದೆ ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಮುಖಂಡ ಕೆ. ವೀರಸಂಗಯ್ಯ, ‘ಮುಖ್ಯಮಂತ್ರಿ ಅವರ ನೇತೃತ್ವದಲ್ಲಿ ಕಂದಾಯ, ಅರಣ್ಯ, ವಸತಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಸಮಿತಿಯ ಮುಖಂಡರೊಂದಿಗೆ ಕೂಡಲೇ ಉನ್ನತ ಮಟ್ಟದ ಸಭೆ ನಡೆಸಬೇಕು. ಭೂಮಿ, ನಿವೇಶನ ಮತ್ತು ಮನೆಗಳ ಮಂಜೂರಾತಿಗೆ ಮೊದಲ ಆದ್ಯತೆ ನೀಡಬೇಕು. ಕಾಲಮಿತಿಯೊಳಗೆ ಇದನ್ನು ಜಾರಿಗೊಳಿಸಲು ಹೋರಾಟದ ಪ್ರತಿನಿಧಿಗಳೊಂದಿಗೆ ಉನ್ನತ ಮಟ್ಟದ ಸಮಿತಿ ರಚಿಸಬೇಕು. ಇದಕ್ಕೆ ಸಂಪುಟ ದರ್ಜೆಯ ಸಚಿವರೊಬ್ಬರನ್ನು ಉಸ್ತುವಾರಿಯಾಗಿ ನೇಮಿಸಬೇಕು’ ಎಂದು ಆಗ್ರಹಿಸಿದರು.

ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ‘ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿ ಭೂ ಮಂಜೂರಾತಿ ಸಮಿತಿಗಳನ್ನು ರಚಿಸಬೇಕು. ಭೂ ಮಂಜೂರಾತಿ ಪ್ರಕ್ರಿಯೆಯನ್ನು ಸರಳ ಹಾಗೂ ತ್ವರಿತಗೊಳಿಸಬೇಕು. ರೈತರು ಹೋರಾಟಗಾರರ ಮೇಲೆ ಅರಣ್ಯ ಮತ್ತು ಪೊಲೀಸ್ ಇಲಾಖೆ ದಾಖಲಿಸಿರುವ ಪ್ರಕರಣಗಳನ್ನು ರದ್ದುಪಡಿಸಬೇಕು’ ಎಂದು ಒತ್ತಾಯಿಸಿದರು.

ಸಮಿತಿಯ ಮುಖಂಡ ಸಿರಿಮನೆ ನಾಗರಾಜ್, ‘5 ಎಕರೆಗಿಂತ ಕಡಿಮೆ ಒತ್ತುವರಿ ಮಾಡಿಕೊಂಡಿರುವ ಸರ್ಕಾರ, ಅರಣ್ಯ ಭೂಮಿಯಲ್ಲಿರುವ ಅರ್ಜಿದಾರರನ್ನು ಒತ್ತುವರಿ ಹೆಸರಿನಲ್ಲಿ ತೆರವುಗೊಳಿಸಬಾರದು’ ಎಂದು ಆಗ್ರಹಿಸಿದರು.

ಕೆ. ನಾಗೇಶ್ವರರಾವ್, ಎಂ. ವೆಂಕಟೇಶ್, ಸಮಿತಿಯ ಕಾರ್ಯದರ್ಶಿ ಕುಮಾರ್ ಸಮತಳ ಇದ್ದರು.

‘ಆರೋಪಗಳಿಗೆ ಸಾಕ್ಷ್ಯ ಬೇಕು’

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ‘ಆರೋಪಗಳನ್ನು ಯಾರೇ ಮಾಡಿದರೂ ಸಾಕ್ಷ್ಯಾಧಾರಗಳಿರಬೇಕು. ಹಿಂದೆ ಬಿಜೆಪಿ ಅವಧಿಯಲ್ಲಿ ಬಿಬಿಎಂಪಿ ಕಚೇರಿಯಲ್ಲಿ ಬೆಂಕಿ ಬಿದ್ದಿದ್ದನ್ನು ಮರೆತುಬಿಟ್ಟಿದ್ದಾರೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ತಿಳಿಸಿದರು.

ಡಾ.ಎಂ.ಸಿ. ಸುಧಾಕರ್

ಈ ಮೂಲಕ ಬಿಬಿಎಂಪಿ ಕೇಂದ್ರ ಕಚೇರಿಯ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪ ಮಾಡಿದ ಬಿಜೆಪಿ ನಾಯಕರಿಗೆ ಅವರು ಹೀಗೆ ತಿರುಗೇಟು ನೀಡಿದರು.

ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳಾಗಿದೆ. ಬಿಜೆಪಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕಾಂಗ್ರೆಸ್ ಮೇಲೆ ಆರೋಪಗಳ ಸುರಿಮಳೆ ಗೈಯ್ಯುತ್ತಿದೆ. ಗ್ಯಾರಂಟಿ ಯೋಜನೆಗಳಿಂದ ಕಾಂಗ್ರೆಸ್‌ಗೆ ದಕ್ಕಿರುವ ಜನಪ್ರಿಯತೆ ಹಾಳು ಮಾಡುವುದು ಅವರ ಉದ್ದೇಶವಾಗಿದೆ ಎಂದರು.

‘ಮನೆ, ಮನೆಯಲ್ಲೂ ಧ್ವಜಾರೋಹಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನದ ಅಂಗವಾಗಿ ಮಂಗಳವಾರ ರಾಜ್ಯದ ಮನೆ, ಮನೆಯ ಮೇಲೂ ರಾಷ್ಟ್ರ ಧ್ವಜ ಹಾರಿಸುವ ಕೆಲಸವನ್ನು ಪಕ್ಷದ ಕಾರ್ಯಕರ್ತರು ಮಾಡಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಪಕ್ಷದ ರಾಜ್ಯ ಘಟಕದ ಕಚೇರಿಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಧ್ವಜಾರೋಹಣ ಮಾಡುವರು. ಜಿಲ್ಲೆ ಹಾಗೂ ಕೆಳಹಂತದ ಸಮಿತಿಗಳ ಕಚೇರಿಗಳಲ್ಲೂ ಕಾರ್ಯಕ್ರಮ ನಡೆಯಲಿದೆ. ಪಕ್ಷದ ಕಾರ್ಯಕರ್ತರು ಮನೆ, ಮನೆಯಲ್ಲೂ ರಾಷ್ಟ್ರ ಧ್ವಜ ಹಾರಿಸುವ ಮೂಲಕ ಸ್ವಾತಂತ್ರ್ಯದ ಸಂಭ್ರಮ ಆಚರಿಸುವರು’ ಎಂದರು.

ಸ್ವಾತಂತ್ರ್ಯ ಬಂದ ಖುಷಿಯ ಜತೆಯಲ್ಲೇ ದೇಶ ವಿಭಜನೆಯಾದ ಕರಾಳ ಘಟನೆಯೂ ನಡೆಯಿತು. ಅದನ್ನು ನೆನಪಿಸುವುದಕ್ಕಾಗಿ ಸೋಮವಾರ ರಾತ್ರಿ ರಾಜ್ಯದಾದ್ಯಂತ ದೇಶ ವಿಭಜನೆಯ ಕತೆಯನ್ನು ತಿಳಿಸುವ ಪ್ರದರ್ಶನದ ವ್ಯವಸ್ಥೆ ಮಾಡಲಾಗಿದೆ. ರಾಜ್ಯ ಘಟಕದ ಕಚೇರಿಯಲ್ಲಿ ನಡೆಯುವ ಪ್ರದರ್ಶನವನ್ನು ಶಾಸಕ ಆರ್. ಅಶೋಕ ಉದ್ಘಾಟಿಸುವರು. ಸಂಸದ ಪಿ.ಸಿ. ಮೋಹನ್ ಮತ್ತು ಹರೇಕಳ ಹಾಜಬ್ಬ ಭಾಗವಹಿಸುವರು ಎಂದು ತಿಳಿಸಿದರು.

ಸೋಮವಾರ ಸಂಜೆ ರಾಜ್ಯದ ವಿವಿಧೆಡೆ ಪಂಜಿನ ಮೆರವಣಿಗೆ ನಡೆಸಲಾಗುವುದು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆರು ಲಕ್ಷ ಗ್ರಾಮ ಪಂಚಾಯಿತಿಗಳಿಂದ ಮಣ್ಣು ಸಂಗ್ರಹಿಸಿ, ಅದನ್ನು ದೆಹಲಿಯ ಕರ್ತವ್ಯ ಪಥದಲ್ಲಿನ ವಾಟಿಕಾ ಉದ್ಯಾನಕ್ಕೆ ಬಳಸುವ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ರಾಜ್ಯದಲ್ಲಿ 7,500 ಐತಿಹಾಸಿಕ ಸ್ಥಳಗಳಿಂದ ಮಣ್ಣು ಸಂಗ್ರಹಿಸುವ ಕೆಲಸವೂ ಸೋಮವಾರ ನಡೆಯಲಿದೆ ಎಂದರು.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಬೇಸರ

‘ಸತ್ಯಕ್ಕೆ ಸಾಕ್ಷಿ ಕೇಳುವ ಕಾಲಘಟ್ಟದಲ್ಲಿದ್ದೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಜಾಲತಾಣಗಳು ಸಮಾಜದ ಆರೋಗ್ಯ ಹಾಗೂ ಶಾಂತಿಯನ್ನು ಕೆಡಿಸುತ್ತಿದ್ದು, ಇವುಗಳಿಂದ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ಬೇಸರ ವ್ಯಕ್ತಪಡಿಸಿದರು.

ಲಯನ್ಸ್ ಇಂಟರ್ ನ್ಯಾಷನಲ್ ಮತ್ತು ರಂಗಚಂದಿರ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಮೈಕೊ ಶಿವಣ್ಣ ನೆನಪು’ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ‘ಇತ್ತೀಚೆಗೆ ಗಾಳಿ ಸುದ್ದಿಗಳು ಗಾಳಿಗಿಂತ ವೇಗವಾಗಿ ಹರಡುತ್ತಿವೆ. ಇದಕ್ಕೆ ಸಾಮಾಜಿಕ ಜಾಲತಾಣಗಳೇ ಮುಖ್ಯ ಕಾರಣವಾಗಿದ್ದು, ಸತ್ಯಕ್ಕೆ ಸಾಕ್ಷಿ ಕೇಳುವ ಕಾಲಘಟ್ಟದಲ್ಲಿ ನಾವು ಇದ್ದೇವೆ. ಆದ್ದರಿಂದ ಸಾಮಾಜಿಕ ಜಾಲತಾಣದ ಬಗ್ಗೆ ಎಚ್ಚರದಿಂದ ಇರಬೇಕು. ನಾವು ನಮ್ಮ ವೃತ್ತಿಯಲ್ಲಿ ತೆಗೆದುಕೊಳ್ಳುವಂತಹ ಪ್ರಮಾಣ ವಚನಕ್ಕೆ ಅನುಗುಣವಾಗಿ ನಡೆದರೆ ಅದೇ ದೊಡ್ಡ ಸಾಧನೆ’ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಸುಬ್ಬು ಹೊಲೆಯಾರ್ ಹಾಗೂ ಅವರ ಪತ್ನಿ ಕವಿತಾ ಅವರಿಗೆ ರಂಗಾಭಿನಂದನೆ ಸಲ್ಲಿಸಲಾಯಿತು. ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ, ಡಾ.ಸಿ.ಎನ್. ಮಂಜುನಾಥ್, ಕುವೆಂಪು ಕಲಾನಿಕೇತನದ ಅಧ್ಯಕ್ಷ ಕುವೆಂಪು ಪ್ರಕಾಶ್, ಬೈಯ್ಯಪ್ಪನಹಳ್ಳಿ ನಾಗರಾಜು, ರಂಗಚಂದಿರ ಟ್ರಸ್ಟ್‌ನ ಗೌರವಾಧ್ಯಕ್ಷ ಆರ್.ಕೆ. ಹೆಗಡೆ, ಕಾರ್ಯದರ್ಶಿ ಜಿ.ಪಿ.ಒ. ಚಂದ್ರು, ಬೆಂಗಳೂರು ಏಷಿಯನ್ ಥಿಯೇಟರ್ ಅಧ್ಯಕ್ಷ ಆರ್. ನರೇಂದ್ರ ಬಾಬು, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಲಯನ್ಸ್ 317 ಎಫ್ ಜಿಲ್ಲಾ ರಾಜ್ಯಪಾಲ ಬಿ.ಎಸ್. ನಾಗರಾಜ್ ಹಾಗೂ ಎನ್.ಆರ್. ಹೆಗಡೆ ಇದ್ದಾರೆ
—ಪ್ರಜಾವಾಣಿ ಚಿತ್ರ

‘ಔಷಧ, ಇಂಜೆಕ್ಷನ್‌ನಿಂದ ಮಾತ್ರ ಕಾಯಿಲೆಗಳನ್ನು ವಾಸಿ ಮಾಡಬಹುದು ಅಂದುಕೊಂಡಿದ್ದೇವೆ. ಔಷಧವಲ್ಲದ ಔಷಧಗಳಿಂದಲೂ ಕಾಯಿಲೆಗಳನ್ನು ವಾಸಿ ಮಾಡಬಹುದು. ವ್ಯಾಯಾಮ, ನಡಿಗೆ, ನಿದ್ದೆ, ಮಾತು, ಉಪವಾಸ, ಸೂರ್ಯನ ಕಿರಣ, ನಗು ಸೇರಿ ನಮ್ಮ ಸುತ್ತಮುತ್ತಲು ಹಲವು ಔಷಧವಲ್ಲದ ಔಷಧಗಳಿವೆ. ಬದಲಾದ ಕಾಲಘಟ್ಟದಲ್ಲಿ ಎಲ್ಲರೂ ಯಂತ್ರಗಳ ರೀತಿ ಕೆಲಸ ಮಾಡುತ್ತಿದ್ದಾರೆ. ಸಂಬಂಧಗಳಿಗೆ ಬೆಲೆಯಿಲ್ಲದಂತಾಗಿದೆ. ಈ ಅವಧಿಯಲ್ಲಿ ಸಂಬಂಧಗಳನ್ನು ಗಟ್ಟಿ ಮಾಡುವ ಕೆಲಸಗಳು ನಡೆಯಬೇಕು’ ಎಂದು ತಿಳಿಸಿದರು.

ಇದೇ ವೇಳೆ ಕವಿ ಸುಬ್ಬು ಹೊಲೆಯಾರ್ ಅವರಿಗೆ ರಂಗಾಭಿನಂದನೆ ಸಲ್ಲಿಸಲಾಯಿತು. ಪದ ದೇವರಾಜು ಮತ್ತು ತಂಡದಿಂದ ತತ್ವಪದಗಳ ಗಾಯನ ನಡೆಯಿತು. ಕಾಜಾಣ ತಂಡವು ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಅವರ ಜೀವನಾಧಾರಿತ ‘ಮಾತಾ’ ನಾಟಕವನ್ನು ಪ್ರದರ್ಶಿಸಿತು.

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಬಂದ ಜನ ಸಾಗರ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

ಫಲಪುಷ್ಪ ಪ್ರದರ್ಶನ 1.25 ಲಕ್ಷ ಮಂದಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ‘ಸ್ವಾತಂತ್ರೋತ್ಸವ ಫಲಪುಷ್ಪ ಪ್ರದರ್ಶನ’ಕ್ಕೆ ಭಾನುವಾರ 1.25 ಲಕ್ಷ ಮಂದಿ ಭೇಟಿ ನೀಡಿದ್ದು, ₹ 80.5 ಲಕ್ಷ ಸಂಗ್ರಹವಾಗಿದೆ. ಶನಿವಾರಕ್ಕೆ ಹೋಲಿಸಿದರೆ ಉದ್ಯಾನಕ್ಕೆ ಭೇಟಿ ನೀಡಿದವರ ಸಂಖ್ಯೆ ಹೆಚ್ಚಿತ್ತು.

ಶಾಲೆ-ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ಲಾಲ್‌ಬಾಗ್‌ಗೆ ಗುಂಪು–ಗುಂಪಾಗಿ ಆಗಮಿಸಿದರು.

ಬಂಡೆ, ಕೆರೆ ಏರಿ, ಬೋನ್ಸಾಯ್, ತರಕಾರಿ ಉದ್ಯಾನ, ಮಾರಾಟ ಮಳಿಗೆಗಳ ಬಳಿ ಕಿಕ್ಕಿರಿದ ಜನಸಂದಣಿ ಇತ್ತು. ಗಾಜಿನ ಮನೆಯಲ್ಲಿ ಜನದಟ್ಟಣೆ ಉಂಟಾಗಿ, ಸಾಲುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ಹರಸಾಹಸಪಟ್ಟರು.

ಟಿಕೆಟ್ ಪಡೆಯಲು ಸಹ ಜನತೆ ಸಾಲಿನಲ್ಲಿ ಕೆಲಹೊತ್ತು ನಿಲ್ಲಬೇಕಾಯಿತು. ಇದರಿಂದ ಮಕ್ಕಳು ಹಾಗೂ ವೃದ್ಧರು ಸಮಸ್ಯೆ ಎದುರಿಸಿದರು.

ಇದಕ್ಕೂ ಮುನ್ನ ಗುಂಪು–ಗುಂಪಾಗಿ ಬಂದ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಿ ರೈಲು ಹತ್ತಿಸಲು ಮೆಟ್ರೊ ನಿಲ್ದಾಣದ ಸಿಬ್ಬಂದಿ ಹರಸಾಹಸಪಟ್ಟರು.

ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗದಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿಯಾಗಿದ್ದವು.

ಭಾನುವಾರ ಭೇಟಿ ನೀಡಿದವರು	
ವಯಸ್ಕರು	1,05,000
ಪಾಸ್ ಪಡೆದವರು ಮತ್ತು ಶಾಲಾ ಮಕ್ಕಳು	20,000
ಒಟ್ಟು	1,25,000
ಸಂಗ್ರಹವಾದ ಹಣ	₹80.5 ಲಕ್ಷ

ಕಾರು ಡಿಕ್ಕಿ: ಇಬ್ಬರು ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಕಾರು ಉರುಳಿಬಿದ್ದು, ಶನಿವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

‘ಮತ್ತಿಕೆರೆಯ ಕಾರ್ತಿಕ್ ಜೈನ್ (23) ಹಾಗೂ ಆದರ್ಶ್ ಕುಮಾರ್ (23) ಮೃತರು. ಇವರಿಬ್ಬರು, ಸ್ನೇಹಿತರ ಜೊತೆ ನಂದಿಬೆಟ್ಟಕ್ಕೆ ಹೋಗಿ ವಾಪಸು ನಗರಕ್ಕೆ ಬರುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಾಗಿದ್ದ ಕಾರ್ತಿಕ್ ಹಾಗೂ ಆದರ್ಶ್, ಮೂವರು ಸ್ನೇಹಿತರ ಜೊತೆ ಶನಿವಾರ ರಾತ್ರಿ ಕಾರಿನಲ್ಲಿ ನಂದಿಬೆಟ್ಟಕ್ಕೆ ಹೋಗಿದ್ದರು. ಅಲ್ಲಿಂದ ತಡರಾತ್ರಿ ನಗರಕ್ಕೆ ವಾಪಸು ಬರುತ್ತಿದ್ದರು.’

‘ಚಾಲಕ ನಿದ್ರೆ ಮಂಪರಿನಲ್ಲಿದ್ದರು. ನಿರ್ಲಕ್ಷ್ಯ ಹಾಗೂ ಅತೀ ವೇಗವಾಗಿ ಕಾರು ಚಲಾಯಿಸಿದ್ದರು. ಪಾಲನಹಳ್ಳಿ ಗೇಟ್ ಬಳಿ ನಿಯಂತ್ರಣ ತಪ್ಪಿದ್ದ ಕಾರು, ರಸ್ತೆ ವಿಭಜಕಕ್ಕೆ ಗುದ್ದಿ ಉರುಳಿಬಿದ್ದಿತ್ತು’ ಎಂದು ಪೊಲೀಸರು ತಿಳಿಸಿದರು.

‘ಅಪಘಾತದಲ್ಲಿ ತೀವ್ರ ಗಾಯಗೊಂಡು ಕಾರ್ತಿಕ್ ಹಾಗೂ ಆದರ್ಶ್ ಮೃತಪಟ್ಟಿದ್ದಾರೆ. ಮೂವರು ಸ್ನೇಹಿತರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದರು.

ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್‌ಗೆ ಮುಖ್ಯಮಂತ್ರಿ ಪತ್ರ

ಬರ ಘೋಷಣೆ: ಪರಿಷ್ಕರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಕಾಲೀನ ಸಂದರ್ಭದಲ್ಲಿನ ಸಮಸ್ಯೆಗಳಿಗೆ ಅನುಗುಣವಾಗಿ ‘ಬರ ಘೋಷಣೆ ಮಾರ್ಗಸೂಚಿ–2016’ ಅನ್ನು ಪರಿಷ್ಕರಿಸುವಂತೆ ಒತ್ತಾಯಿಸಿ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಹವಾಮಾನದಲ್ಲಿನ ಬದಲಾವಣೆ ಪರಿಣಾಮವಾಗಿ ವಾತಾವರಣದಲ್ಲಿ ಅನಿಯಮಿತವಾದ ಏರಿಳಿತಗಳಾಗುತ್ತಿವೆ. ಈ ಕಾರಣದಿಂದ ಮಳೆಯಲ್ಲೂ ವ್ಯತ್ಯಯವಾಗುತ್ತಿದ್ದು, ಕೃಷಿಕರು ಮತ್ತು ಕೃಷಿ ಕ್ಷೇತ್ರ ಸಂಕಷ್ಟಕ್ಕೆ ಸಿಲುಕುತ್ತಿದೆ. ಈ ರೀತಿಯ ಸನ್ನಿವೇಶಗಳಲ್ಲಿ ಬರ ಘೋಷಣೆಗೆ ಪೂರಕವಾಗಿ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಈವರೆಗಿನ ಅವಧಿಯಲ್ಲಿ ವಾಡಿಕೆಯ 336 ಮಿಲಿ ಮೀಟರ್ ಮಳೆಗೆ ಬದಲಾಗಿ 234 ಮಿಲಿ ಮೀಟರ್ ಮಳೆಯಾಗಿದೆ. ಶೇ 33ರಷ್ಟು ಮಳೆ ಕೊರತೆ ಇದೆ. ಮುಂಗಾರು ಆಗಮನದಲ್ಲಿನ ವಿಳಂಬದಿಂದಾಗಿ ಜೂನ್‌ನಲ್ಲಿ ಮಳೆ ಕೊರತೆ ಶೇಕಡ 56ರಷ್ಟಿತ್ತು. ಮಳೆಯ ಹಂಚಿಕೆ ಮತ್ತು ತೀವ್ರತೆಯೂ ಅನಿಯಮಿತವಾಗಿತ್ತು. ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಬರಗಾಲದ ಪರಿಸ್ಥಿತಿ ಇದೆ. ಆದರೆ, ಮಾರ್ಗಸೂಚಿಯಲ್ಲಿನ ತೊಡಕುಗಳಿಂದ ಬರ ಘೋಷಣೆ ಸಾಧ್ಯವಾಗುತ್ತಿಲ್ಲ. ಇದು ನಮ್ಮ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ’ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ಮಾರ್ಗಸೂಚಿ ಬದಲಾವಣೆಗೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ
- ಬೆಳೆವಿಮೆ ಪರಿಹಾರ ಪಾವತಿಸಲು ಕಾಲಮಿತಿ ನಿಗದಿಗೆ ಒತ್ತಾಯ

ರಾಜ್ಯದಲ್ಲಿ 14 ಕೃಷಿ ಹವಾಮಾನ ವಲಯಗಳಿವೆ. ಏಕರೂಪದ ಮಾರ್ಗಸೂಚಿಯು ರಾಜ್ಯದ ಎಲ್ಲ ಕೃಷಿ ಹವಾಮಾನ ವಲಯಗಳಿಗೆ ಹೊಂದಾಣಿಕೆ ಆಗುವುದಿಲ್ಲ. ಇಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಬರ ಘೋಷಣೆ ಮಾರ್ಗಸೂಚಿಗಳಲ್ಲಿ ಬದಲಾವಣೆ ತರುವ ಅಗತ್ಯವಿದೆ. ಸ್ಥಳೀಯ ವಾತಾವರಣ, ನೀರಿನ ಲಭ್ಯತೆ, ಕೃಷಿ ಪದ್ಧತಿಗಳನ್ನು ಆಧರಿಸಿ ಪ್ರತ್ಯೇಕವಾದ ಮಾರ್ಗಸೂಚಿ ರೂಪಿಸಬೇಕು ಎಂದು ಒತ್ತಾಯಿಸಿದ್ದಾರೆ.

‘ಮಳೆಯ ಹಂಚಿಕೆಯಲ್ಲಿನ ವ್ಯತ್ಯಾಸ ಮತ್ತು ಅನಿಯಮಿತತೆಯಿಂದ ಕೃಷಿ ಬರ ಸೃಷ್ಟಿಯಾಗುತ್ತದೆ. ಶೇ 60ಕ್ಕಿಂತ ಹೆಚ್ಚಿನ ಪ್ರಮಾಣದ ಮಳೆ ಕೊರತೆಯಾದರೆ ಮಾತ್ರ ಬರ ಘೋಷಿಸಲು ಈಗಿನ ಮಾರ್ಗಸೂಚಿಯಲ್ಲಿ ಅವಕಾಶವಿದೆ. ಶೇ 20ರಿಂದ ಶೇ 59ರಷ್ಟು ಮಳೆ ಕೊರತೆ ಸನ್ನಿವೇಶದಲ್ಲೂ ಬರ ಘೋಷಣೆಗೆ ಅವಕಾಶ ಕಲ್ಪಿಸಲು ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.

ಮೂರರಿಂದ ನಾಲ್ಕು ವಾರಗಳ ಕಾಲ ಮಳೆಯಾಗದೇ ಇದ್ದರೆ ಒಣ ಹವೆ ಎಂಬುದಾಗಿ ಘೋಷಿಸಲು ಮಾರ್ಗಸೂಚಿಯಲ್ಲಿ ಅವಕಾಶವಿದೆ. ಎರಡು ವಾರಕ್ಕಿಂತ ಕಡಿಮೆ ಅವಧಿಯಲ್ಲೂ ಮಳೆಯಾಗದೇ ಇದ್ದರೆ ಒಣಹವೆ ಘೋಷಿಸಲು ಅವಕಾಶ ನೀಡಬೇಕು. ‘ಬಿತ್ತನೆ ಅವಧಿ ಪೂರ್ಣಗೊಂಡಿದೆ’ ಎಂದು ಘೋಷಿಸಿದ ಬಳಿಕವೇ ಬರ ಪರಿಸ್ಥಿತಿ ಅಂದಾಜು ಮಾಡ ಬೇಕು ಎಂಬ ಷರತ್ತಿದೆ. ಅದನ್ನೂ ಬದಲಿಸಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ.

ಅಂತರ್ಜಲ ಕೊರತೆ, ಮಣ್ಣಿನಲ್ಲಿ ತೇವಾಂಶದ ಇಳಿಕೆ ಮತ್ತಿತರ ಅಂಶಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳಲ್ಲೂ ಬದಲಾವಣೆ ಅಗತ್ಯ. ‘ಶೇ 50ರಷ್ಟು ಮಳೆ ಕೊರತೆ ಇದ್ದರೆ ಮಾತ್ರ ಬರ ಘೋಷಿಸಬಹುದು’ ಎಂಬ ಷರತ್ತು ಮಾರ್ಗಸೂಚಿಯಲ್ಲಿದೆ. ಆದರೆ, ಬೆಳೆ ಹಾನಿ ಪ್ರಕರಣಗಳಲ್ಲಿ ವಿಪತ್ತು ಪರಿಹಾರ ನಿಧಿಯಡಿ ಪರಿಹಾರ ಮಂಜೂರಾತಿಗೆ ಶೇ 33ರಷ್ಟು ಮಳೆ ಕೊರತೆ ಇದ್ದರೆ ಸಾಕು ಎಂದು ಹೇಳಲಾಗಿದೆ. ಈ ವ್ಯತ್ಯಾಸ ಸರಿಪಡಿಸಬೇಕು. ಬರದಿಂದ ತೊಂದರೆಗೊಳಗಾದ ರೈತರಿಗೆ ಬೆಳೆ ವಿಮೆ ಪರಿಹಾರ ಪಾವತಿಗೆ ಕಾಲಮಿತಿಯನ್ನೂ ನಿಗದಿಪಡಿಸಬೇಕು ಎಂದು ಒತ್ತಾಯ ಮಾಡಿದ್ದಾರೆ.

‘ನಿಖರ ಅಂದಾಜಿನ ಮೂಲಕ ಬರ ಘೋಷಣೆ ಮಾಡಬೇಕು ಮತ್ತು ಲಭ್ಯ ಸಂಪನ್ಮೂಲಗಳನ್ನು ಸರಿಯಾಗಿ ಹಂಚಿಕೆ ಮಾಡಬೇಕು ಎಂಬ ಉದ್ದೇಶದಿಂದ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ. ಆದರೆ, ಇಂತಹ ವಿಚಾರಗಳಲ್ಲಿ ಪ್ರತಿ ರಾಜ್ಯ ಹಾಗೂ ಪ್ರತಿ ಪ್ರದೇಶದ ಪರಿಸ್ಥಿತಿ ವಿಭಿನ್ನವಾಗಿರುತ್ತದೆ. ಈ ಕಾರಣದಿಂದ ಎಲ್ಲ ಪ್ರದೇಶಗಳಿಗೂ ಹೊಂದಿಕೆಯಾಗುವ ರೀತಿಯಲ್ಲಿ ಬದಲಾವಣೆ ತರಬೇಕು’ ಎಂದು ಮುಖ್ಯಮಂತ್ರಿ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ವಾಹನ ಖರೀದಿ ಪ್ರಮಾಣ ಬೆಂಗಳೂರಿಗಿಂತ ಹೊರಗೆ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಒಂದು ದಶಕದಲ್ಲಿ ರಾಜ್ಯದ ರಾಜಧಾನಿಗಿಂತ ಇತರ ಪ್ರದೇಶಗಳಲ್ಲಿ ವಾಹನ ಖರೀದಿ ಮಾಡಿದ ಪ್ರಮಾಣವೇ ಹೆಚ್ಚು ಎಂಬುದನ್ನು ಸಾರಿಗೆ ಇಲಾಖೆಯ ಅಂಕಿ ಅಂಶಗಳು ದೃಢಪಡಿಸಿವೆ.

ಒಂದು ದಶಕದ ಹಿಂದೆ ಬೆಂಗಳೂರಿನಲ್ಲಿ ಇದ್ದ ವಾಹನಗಳ ಸಂಖ್ಯೆ ಈಗ ದುಪ್ಪಟ್ಟಾಗಿದೆ.

ಇದೇ ಸಮಯದಲ್ಲಿ ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ.

2013–14ರಲ್ಲಿ ಬೆಂಗಳೂರಿನಲ್ಲಿ 55.26 ಲಕ್ಷ ವಾಹನಗಳಿದ್ದವು. ಈಗ 1.11 ಕೋಟಿ ವಾಹನಗಳಿವೆ. ಇತರ ಪ್ರದೇಶಗಳಲ್ಲಿ 2012–13ರಲ್ಲಿ 94 ಲಕ್ಷ ವಾಹನಗಳಿದ್ದವು. ಈಗ 3.03 ಕೋಟಿ ವಾಹನಗಳಿವೆ.

ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿಯೇ ವಾಹನಗಳ ಸಂಖ್ಯೆ ಹೆಚ್ಚಿದೆ. ಬೆಂಗಳೂರಿನಲ್ಲಿ ಒಂದೂವರೆ ಕೋಟಿ ಜನಸಂಖ್ಯೆಗೆ 1.11 ಕೋಟಿ ವಾಹನಗಳಿದ್ದರೆ, ಇತರ ಪ್ರದೇಶಗಳಲ್ಲಿ 5.7 ಕೋಟಿ ಜನಸಂಖ್ಯೆ ಇದ್ದು, 3 ಕೋಟಿ ವಾಹನಗಳಿವೆ.

ಸಾರಿಗೆ ಇಲಾಖೆಯ ಅಂಕಿ ಅಂಶ

ಪ್ರದೇಶ	ದ್ವಿಚಕ್ರ ವಾಹನ	ಕಾರು	ಆಟೊ
ಬೆಂಗಳೂರು	2,15,13,287	44,62,107	7,85,584
ಬೆಂಗಳೂರೇತರ	74,84,315	22,84,690	3,08,293

ಆರ್‌ಎಲ್‌ಜೆಪಿ ರಾಜ್ಯ ಅಧ್ಯಕ್ಷೆ ಉಚ್ಚಾಟನೆ

ಬೆಂಗಳೂರು: ಆರ್‌ಎಲ್‌ಜೆಪಿ ಅಧ್ಯಕ್ಷೆ ಶಿಲ್ಪಾ ಬಾಬು ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಜತೆಗೆ, ರಾಜ್ಯ ಘಟಕವನ್ನು ವಿಸರ್ಜಿಸಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಪಶುಪತಿ ಕುಮಾರ್ ಪಾರಸ್ ಆದೇಶ ಹೊರಡಿಸಿದ್ದಾರೆ.

ಶಿಲ್ಪಾ ಬಾಬು ಮತ್ತು ಆಕೆಯ ಸ್ನೇಹಿತ ಸುಬೀಷ್ ವಾಸುವೇದ್ ಅವರನ್ನು ವಂಚನೆ ಪ್ರಕರಣದಲ್ಲಿ ಕರ್ನಾಟಕ ಪೊಲೀಸರು ಕೇರಳದಲ್ಲಿ ಬಂಧಿಸಿದ್ದಾರೆ. ಹೀಗಾಗಿ, ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಬಿಸಿನೆಸ್ ಎಕ್ಸ್‌ಚೇಂಜ್ ಗ್ರೂಪ್ ಮತ್ತು ಶೀಗ್ರ್ ಸೀಫುಡ್ಸ್ ಸಂಸ್ಥೆಯ ಹೆಸರಿನಲ್ಲಿ ಜನರಿಂದ ಕೋಟ್ಯಂತರ ರೂಪಾಯಿ ಬಂಡವಾಳ ಪಡೆದುಕೊಂಡು, ಹಣ ವಾಪಸ್ ನೀಡದ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂದು ರಾಷ್ಟ್ರೀಯ ಅಧ್ಯಕ್ಷರು ತಿಳಿಸಿದ್ದಾರೆ.

ಅರಣ್ಯಪ್ರದೇಶ ಕಬಳಿಸುವ ಭೂಮಾಫಿಯಾ ಯತ್ನಕ್ಕೆ ತಡೆ

ತುರಹಳ್ಳಿ: 324 ಎಕರೆ ರಕ್ಷಣೆ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ತುರಹಳ್ಳಿ ಕಿರು ಅರಣ್ಯದ 324 ಎಕರೆಯನ್ನು ರಕ್ಷಿಸಲು ಕೊನೆಗೂ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಸತತ ಇಪ್ಪತ್ತು ವರ್ಷಗಳ ಹೋರಾಟದ ಫಲ ಅರಣ್ಯ ಇಲಾಖೆ ಸಿಕ್ಕಿದೆ.

ತುರಹಳ್ಳಿ ಕಿರು ಅರಣ್ಯವು 597 ಎಕರೆ 19 ಗುಂಟೆ ಪ್ರದೇಶದಲ್ಲಿ ವಿಸ್ತಾರಗೊಂಡಿದ್ದು, 1934ರಲ್ಲಿ ಮೀಸಲು ಅರಣ್ಯ ಎಂದು ಅಧಿಸೂಚನೆಯಾಗಿತ್ತು. ಆದರೆ, ಭೂಮಾಫಿಯಾದವರು ಅದರಲ್ಲಿ ಕೆಲ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದರು. ಒಂದು ದಶಕದಿಂದ ಅರಣ್ಯ ಪ್ರದೇಶದ ದಾಖಲೆ ಸಂಗ್ರಹಿಸಿ, ಮೀಸಲು ಅರಣ್ಯ ಪ್ರದೇಶ ಎಂಬುದನ್ನು ಸಾಬೀತುಪಡಿಸಲಾಗಿದೆ.

‘ಅರಣ್ಯ ಭೂಮಿಯಲ್ಲಿ ಮತ್ತೊಂದು ಬಡಾವಣೆ ನಿರ್ಮಾಣ ಆಗುವುದನ್ನು ತಡೆದಿದ್ದೇವೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

2004ರಲ್ಲಿ ಅರಣ್ಯ ಪ್ರದೇಶದ 343 ಎಕರೆ 38 ಗುಂಟೆ ಮಾಲೀಕತ್ವದ ವಿಚಾರವಾಗಿ ಶ್ರೀನಿವಾಸ್ ಸೇರಿದಂತೆ 87 ಮಂದಿ ನ್ಯಾಯಾಲಯದ ಮೊರೆ ಹೋಗಿದ್ದರು. ಅರಣ್ಯ ಇಲಾಖೆ ಸಿಬ್ಬಂದಿ, ಜಿಲ್ಲಾಧಿಕಾರಿಗೆ ಪತ್ರ ಬರೆದ ಮೇಲೆ ಅರಣ್ಯ ಪ್ರದೇಶ ಕಬಳಿಸುವ ಪ್ರಯತ್ನವು ಗೊತ್ತಾಗಿತ್ತು.

2006ರಲ್ಲಿ ಬೆಂಗಳೂರು ತಹಶೀಲ್ದಾರ್ ಅವರು ಪರಿಶೀಲನೆ ನಡೆಸಿದಾಗ ಅರಣ್ಯ ಭೂಮಿಗೆ ಹಕ್ಕುಪತ್ರ ಮಾಡಿಸಿಕೊಳ್ಳಲು ಸುಳ್ಳು ದಾಖಲೆ ಸೃಷ್ಟಿಸಿದ್ದು ಕಂಡುಬಂದಿತ್ತು.

ದಿನೇಶ್ ಕುಮಾರ್ ಹೆಸರಿಗೆ 20 ಎಕರೆ ಜಮೀನು ನೋಂದಣಿಗೆ ಸುಳ್ಳು ಸರ್ವೆ ದಾಖಲೆ ಸೃಷ್ಟಿಸಲಾಗಿತ್ತು. ಇದನ್ನು ಉಲ್ಲೇಖಿಸಿ ಉಪ ನೋಂದಣಾಧಿಕಾರಿ ವಿರುದ್ಧ ಕ್ರಮಕ್ಕೆ ತಹಶೀಲ್ದಾರ್ ಶಿಫಾರಸು ಮಾಡಿದ್ದರು. ಅದಾದ ಮೇಲೆ 2009ರಲ್ಲಿ ಬೆಂಗಳೂರು ದಕ್ಷಿಣದ ಸಹಾಯಕ ಆಯುಕ್ತರು, ‘ಇದು ಅರಣ್ಯ ಭೂಮಿ ಅಲ್ಲ. ನಿಯಮದಂತೆ ಅರ್ಜಿದಾರರು 30 ವರ್ಷದಿಂದ ಜಮೀನು ಹೊಂದಿರುವುದಕ್ಕೆ ಸಾಗುವಳಿ ಚೀಟಿ ಪತ್ರ ಇರುವುದನ್ನು ಸಾಬೀತು ಮಾಡುವ ಅಗತ್ಯವಿಲ್ಲ’ ಎಂದು ಹೇಳಿದ್ದರು.

ಇದರಿಂದ ಆಘಾತಕ್ಕೆ ಒಳಗಾಗಿದ್ದ ಅರಣ್ಯ ಇಲಾಖೆ ಅಧಿಕಾರಿಗಳು, ನಕಲಿ ದಾಖಲೆ ಸೃಷ್ಟಿಸಿರುವ ಬಗ್ಗೆ ತನಿಖೆ ನಡೆಸುವಂತೆ ಕಂದಾಯ ಇಲಾಖೆ ಕೋರಿದ್ದರು. ಅದಾದ ಮೇಲೆ ಈ ಪ್ರಕ್ರಿಯೆಗೆ ಜಿಲ್ಲಾಧಿಕಾರಿ ತಡೆ ನೀಡಿದ್ದರು. ಅದರ ವಿರುದ್ಧ ಹಕ್ಕು ಪ್ರತಿಪಾದಿಸುತ್ತಿದ್ದವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೂರು ತಿಂಗಳಲ್ಲಿ ಅರ್ಜಿ ವಿಲೇವಾರಿ ಮಾಡುವಂತೆ ಕೋರ್ಟ್ ಜಿಲ್ಲಾಧಿಕಾರಿಗೆ ಸೂಚಿಸಿತ್ತು. ಆದರೆ. ಕೋವಿಡ್ ಮತ್ತಿತರ ಕಾರಣದಿಂದ ವಿಳಂಬವಾಗಿತ್ತು. ಈಗ ಅರಣ್ಯ ಇಲಾಖೆ ಜಮೀನು ಎಂಬ ಆದೇಶ ಹೊರಬಿದ್ದಿದೆ.

1934ರ ಅಧಿಸೂಚನೆಯಂತೆ ಇದುವರೆಗೂ ಅರಣ್ಯ ಭೂಮಿಯನ್ನು ಡಿನೋಟಿಫೈ ಮಾಡಿಲ್ಲ. ಅರ್ಜಿದಾರರು ಸಾಗುವಳಿಯನ್ನೂ ಮಾಡಿಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ. 2009ರಲ್ಲಿ ಬೆಂಗಳೂರು ದಕ್ಷಿಣದ ಸಹಾಯಕ ಆಯುಕ್ತರ ಆದೇಶವನ್ನು ಡಿಸಿ ನ್ಯಾಯಾಲಯವು ರದ್ದುಗೊಳಿಸಿದೆ.

ರಕ್ತನಾಳ ಸಂಬಂಧಿ ಸಮಸ್ಯೆಗೆ ಉಚಿತ ಸಮಾಲೋಚನೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಪ್ರಯುಕ್ತ ಬಂಟರ ಸಂಘದ ವೈದ್ಯರ ವಿಭಾಗವು ಇದೇ ಮಂಗಳವಾರ ರಕ್ತನಾಳ ಸಂಬಂಧಿ ಸಮಸ್ಯೆಗಳಿಗೆ ವಿಜಯನಗರದ ಬಂಟರ ಸಂಘದ ಕಚೇರಿಯಲ್ಲಿ ಉಚಿತ ಸಮಾಲೋಚನೆ ಶಿಬಿರ ಹಮ್ಮಿಕೊಂಡಿದೆ.

ವ್ಯಾಸ್ಕುಲರ್ ಕ್ಲಿನಿಕ್ ಹಾಗೂ ಬ್ರೈನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಈ ಶಿಬಿರ ನಡೆಯಲಿದೆ. ಮಧುಮೇಹಿ ಪಾದಗಳ ಆರೈಕೆ, ವಾಸಿಯಾಗದ ಹುಣ್ಣಿಗೆ ಚಿಕಿತ್ಸೆ ಸೇರಿ ರಕ್ತನಾಳ ಸಂಬಂಧಿ ಸಮಸ್ಯೆಗಳಿಗೆ ಆರೈಕೆ ಹಾಗೂ ಚಿಕಿತ್ಸಾ ಕಾರ್ಯವಿಧಾನದ ಬಗ್ಗೆಯೂ ತಿಳಿಸಿಕೊಡಲಾಗುತ್ತದೆ.

ಆಸಕ್ತರು 9620215965 ಅಥವಾ 9008973945ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಸ್‌ಎಲ್‌ಸಿ: ಪುನರಾವರ್ತಿತ ನಕಲು ಪ್ರಕರಣಗಳು, ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಕುಸಿತ

500ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರ ಸ್ಥಗಿತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 500ಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳನ್ನು ಮುಚ್ಚಲು, ಅಂತಹ ಕೇಂದ್ರಗಳಿಗೆ ಸಂಯೋಜನೆಗೊಂಡಿದ್ದ ಶಾಲೆಗಳ ಮಕ್ಕಳನ್ನು ಸಮೀಪದ ಇತರೆ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ.

ಪರೀಕ್ಷೆ ಬರೆಯುವ ಸರ್ಕಾರಿ ಶಾಲಾ ಮಕ್ಕಳ ಸಂಖ್ಯೆ ಪ್ರತಿವರ್ಷ ಗಣನೀಯವಾಗಿ ಕಡಿಮೆ ಆಗುತ್ತಿರುವುದು, ನಕಲು ತಡೆಯಲು ವಿಫಲವಾಗಿರುವ ಪರೀಕ್ಷಾ ಕೇಂದ್ರಗಳ ಜತೆಗೆ, ನಿಯಮ ಪಾಲಿಸದ ಕೆಲವು ಖಾಸಗಿ ಪರೀಕ್ಷಾ ಕೇಂದ್ರಗಳನ್ನೂ ಮುಚ್ಚಲಾಗುತ್ತಿದೆ.

ದ್ವಿತೀಯ ಪಿಯು ಪರೀಕ್ಷೆಗಳಿಗೆ ಹೋಲಿಸಿದರೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ ಸಂಖ್ಯೆ ಮೂರು ಪಟ್ಟು ಹೆಚ್ಚಿವೆ. ಅಲ್ಲದೇ ಹಲವು ಪರೀಕ್ಷಾ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ದ್ವಿತೀಯ ಪಿಯು ಪರೀಕ್ಷೆಗಾಗಿ ಹೊಸ ಕೇಂದ್ರಕ್ಕೆ ಅನುಮತಿ ನೀಡಬೇಕಾದರೆ ಆ ಕೇಂದ್ರದಲ್ಲಿ ಪರೀಕ್ಷೆ ಬರೆಯುವ ಮಕ್ಕಳ ಸಂಖ್ಯೆ ಕನಿಷ್ಠ 400 ಇರಬೇಕು ಎಂಬ ನಿಯಮವನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿದೆ.

ಪ್ರಜಾವಾಣಿ ವಿಶೇಷ

ಹಾಗಾಗಿ, ರಾಜ್ಯದಲ್ಲಿ ದ್ವಿತೀಯ ಪಿಯು ಪರೀಕ್ಷಾ ಕೇಂದ್ರಗಳ ಸಂಖ್ಯೆ ಕಡಿಮೆ ಇವೆ. ಪರೀಕ್ಷೆಗಳು ವ್ಯವಸ್ಥಿತವಾಗಿ ನಡೆಯುತ್ತಿವೆ. ಅದೇ ಕನಿಷ್ಠ 200 ಮಕ್ಕಳಿದ್ದರೂ ಸಾಕು ಎಸ್‌ಎಸ್‌ಎಲ್‌ಸಿಗೆ ಹೊಸ ಪರೀಕ್ಷಾ ಕೇಂದ್ರ ಮಂಜೂರು ಮಾಡಬಹುದು. ಇದರಿಂದ ಪರೀಕ್ಷಾ ಕೇಂದ್ರಗಳ ಸಂಖ್ಯೆ ಅಧಿಕವಾಗಿದ್ದು, ನಿಯಂತ್ರಣ ಹಾಗೂ ನಿರ್ವಹಣೆಯ ವೈಫಲ್ಯಗಳು ಮರುಕಳಿಸುತ್ತಿವೆ ಎನ್ನುವುದು ಶಿಕ್ಷಣ ಇಲಾಖೆಯ ವಿವರಣೆ.

ಕಳೆದ ಐದು ವರ್ಷಗಳಿಂದ ಈಚೆಗೆ ಹಲವು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುತ್ತಿರುವ ಮಕ್ಕಳ ಸಂಖ್ಯೆ 100ಕ್ಕಿಂತ ಕೆಳಗೆ ಇಳಿದಿದೆ. ಕೆಲವು ಪರೀಕ್ಷಾ ಕೇಂದ್ರಗಳು ಜನವಸತಿಯಿಂದ ದೂರವಿರುವ ಸುರಕ್ಷಿತವಲ್ಲದ ಪರಿಸರದಲ್ಲಿವೆ. ಇಂತಹ ಎಲ್ಲ ಕೇಂದ್ರಗಳನ್ನೂ ಪಟ್ಟಿ ಮಾಡಲಾಗಿದೆ. ಇದುವರೆಗೂ ಅಲ್ಲಿ ಪರೀಕ್ಷೆ ಬರೆಯುತ್ತಿದ್ದ ನಿಗದಿತ ಶಾಲೆಯ ಮಕ್ಕಳನ್ನು ಸಮೀಪದ ಬೇರೊಂದು ಕೇಂದ್ರಗಳಿಗೆ ನಿಯೋಜಿಸಲಾಗುತ್ತಿದೆ. ಈ ಕುರಿತು ಪರಿಷ್ಕೃತ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತನ್ನ ವೆಬ್‌ಸೈಟ್‌ನಲ್ಲಿ ಶೀಘ್ರ ಪ್ರಕಟಿಸಲಿದೆ.

2023ರ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಆರೋಪದ ಮೇಲೆ 38 ಶಿಕ್ಷಕರನ್ನು ಅಮಾನತು ಮಾಡಲಾಗಿತ್ತು. ವಿಜಯಪುರ, ಯಾದಗಿರಿ, ಬೆಳಗಾವಿ, ಬೀದರ್, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳನ್ನು ಅತಿ ಹೆಚ್ಚು ನಕಲು ನಡೆದ ಜಿಲ್ಲೆಗಳೆಂದು ಗುರುತಿಸಲಾಗಿತ್ತು. ಹಾಗಾಗಿ, 2024ರಲ್ಲಿ ನಡೆಯುವ ಪರೀಕ್ಷೆಯಲ್ಲಿ ನಕಲು, ವ್ಯವಹಾರಕ್ಕೆ ಸಂಪೂರ್ಣ ಕಡಿವಾಣ ಹಾಕಲು ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿತ್ತು. ಮುಂದೆ ನಡೆಯುವ ಪರೀಕ್ಷೆಗಳನ್ನು ಅತ್ಯಂತ ವ್ಯವಸ್ಥಿತವಾಗಿ, ನಕಲಿಗೆ ಅವಕಾಶವಿಲ್ಲದಂತೆ, ಪಾರದರ್ಶಕವಾಗಿ ನಡೆಸಲು ಪರೀಕ್ಷಾ ಕೇಂದ್ರಗಳ ಸಂಖ್ಯೆ ಕಡಿತಗೊಳಿಸಲು ನಿರ್ಧರಿಸಲಾಗಿದೆ ಎನ್ನುವುದು ಮೌಲ್ಯನಿರ್ಣಯ ಮಂಡಳಿಯ ವಿವರಣೆ.

ಅಂಕಿ–ಅಂಶ

3,305 ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳು	**8.35** ಲಕ್ಷ 2023ರಲ್ಲಿ ಪರೀಕ್ಷೆ ಬರೆದಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು
1,109 ದ್ವಿತೀಯ ಪಿಯು ಪರೀಕ್ಷಾ ಕೇಂದ್ರಗಳು	**7.02** ಲಕ್ಷ 2023ರಲ್ಲಿ ಪರೀಕ್ಷೆ ಬರೆದಿದ್ದ ದ್ವಿತೀಯ ಪಿಯು ವಿದ್ಯಾರ್ಥಿಗಳು

ಅಧಿಕ ಪ್ರಮಾಣದಲ್ಲಿ ಪರೀಕ್ಷಾ ಕೇಂದ್ರಗಳಿರುವುದು ಸುಗಮ ನಿರ್ವಹಣೆಗೆ ಅಡ್ಡಿಯಾಗಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪರಿಷ್ಕರಣೆ ಮಾಡಲಾಗುತ್ತಿದೆ

ರಿತೇಶ್ ಕುಮಾರ್ ಸಿಂಗ್
ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಅಂತರ 10 ಕಿ.ಮೀ. ಮೀರುವಂತಿಲ್ಲ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳನ್ನು ರದ್ದು ಮಾಡಿ, ಆ ಕೇಂದ್ರಕ್ಕೆ ಇದುವರೆಗೂ ಸಂಯೋಜನೆಗೊಂಡಿದ್ದ ಶಾಲೆಗಳನ್ನು ಬೇರೊಂದು ಕೇಂದ್ರಕ್ಕೆ ವಹಿಸುವ ಮೊದಲು ಅನುಕೂಲ, ಅನನುಕೂಲಗಳನ್ನು ಲೆಕ್ಕಹಾಕಲಾಗಿದೆ. ಪರೀಕ್ಷೆಗೆ ಹಾಜರಾಗುವ ಮಕ್ಕಳು ತಮ್ಮ ಗ್ರಾಮದಿಂದ 10 ಕಿ.ಮೀ ಮೀರದಂತಹ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು ಹಾಗೂ ಪರೀಕ್ಷಾ ಉಸ್ತುವಾರಿ ಅಧಿಕಾರಿಗಳಿಗೆ ನೀಡಲಾಗಿದೆ. ಪರೀಕ್ಷಾ ಕೇಂದ್ರಗಳ ರದ್ದತಿ ನಂತರ ಹೊಸ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮಕ್ಕಳಿಗೆ ಬಸ್ ಮತ್ತಿತರ ಸೌಕರ್ಯಗಳು ಇಲ್ಲದಿದ್ದರೆ, ಮಕ್ಕಳನ್ನು ಕೇಂದ್ರಗಳಿಗೆ ಸುರಕ್ಷಿತವಾಗಿ, ಸಮಯಕ್ಕೆ ಸರಿಯಾಗಿ ಕರೆತರುವ ಹೊಣೆಗಾರಿಕೆಯನ್ನು ಶಿಕ್ಷಣ ಇಲಾಖೆ ನಿಭಾಯಿಸಲಿದೆ.

ಹಂಪಿಯ ವಿಜಯ ವಿಠ್ಠಲ ದೇವಸ್ಥಾನದಲ್ಲಿನ ಕಲ್ಲಿನ ರಥ ನೋಡಲು ಭಾನುವಾರ ಸೇರಿದ್ದ ಪ್ರವಾಸಿಗರು –ಪ್ರಜಾವಾಣಿ ಚಿತ್ರ

ಹಂಪಿ: ಪ್ರವಾಸಿಗರ ದಂಡು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಸರಣಿ ರಜೆ ಹಿನ್ನೆಲೆಯಲ್ಲಿ ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಪ್ರವಾಸಿಗರ ದಂಡೇ ಸೇರಿದ್ದು, ಭಾನುವಾರ ಎಲ್ಲೆಡೆ ವಾಹನ ದಟ್ಟಣೆ ಕಾಣಿಸಿತು. ಹೊಸಪೇಟೆಯಲ್ಲಿ ಎಲ್ಲ ವಸತಿಗೃಹಗಳೂ ಭರ್ತಿಯಾಗಿವೆ.

ವಿಜಯ ವಿಠ್ಠಲ ದೇವಸ್ಥಾನ, ಲೋಟಸ್ ಮಹಲ್, ಮ್ಯೂಸಿಯಂ ಪ್ರವೇಶಕ್ಕೆ ಟಿಕೆಟ್ ಇದ್ದು, ಭಾನುವಾರ ಸಂಜೆ 15 ಸಾವಿರ ಮಂದಿ ಟಿಕೆಟ್ ಪಡೆದಿದ್ದಾರೆ. ಮಹಾನವಮಿ ದಿಬ್ಬ ಸಹಿತ ಹಲವೆಡೆ ಹೊಸದಾಗಿ ನಿರ್ಮಿಸಲಾಗಿರುವ ರಸ್ತೆ ಕಿರಿದಾಗಿದ್ದು, ವಾಹನಗಳು ದಟ್ಟಣೆಯಲ್ಲಿ ಸಿಲುಕಿದವು. ವಾಹನ ನಿಲುಗಡೆ ವ್ಯವಸ್ಥೆಯೂ ಸರಿಯಾಗಿ ಇಲ್ಲದ ಕಾರಣ ಕಾರಿನಲ್ಲಿ ಬಂದ ಪ್ರವಾಸಿಗರಿಗೆ ಬಹಳ ತೊಂದರೆಯಾಯಿತು.

‘ಶುಕ್ರವಾರದಿಂದಲೇ ಹೊಸಪೇಟೆಯ ಎಲ್ಲ ಲಾಡ್ಜ್‌ಗಳು ಭರ್ತಿಯಾಗಿವೆ’ ಎಂದು ಬಸ್ ನಿಲ್ದಾಣ ಸಮೀಪದ ಹೋಟೆಲ್ ಮಾಲೀಕ ಕಾರ್ತಿಕ್ ಹೇಳಿದರು. ಹಂಪಿ ಮೃಗಾಲಯ ವೀಕ್ಷಣೆಗೂ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬಂದಿದ್ದು, ಭಾನುವಾರ ಒಂದೇ ದಿನ ₹2.60 ಲಕ್ಷ ಸಂಗ್ರಹವಾಗಿದೆ.

ತುಂಗಭದ್ರಾ ಜಲಾಶಯ ಇನ್ನೂ ಭರ್ತಿಯಾಗಿಲ್ಲದೆ ಇದ್ದರೂ, ಪ್ರವಾಸಿಗರು ಇಲ್ಲಿಗೂ ಭೇಟಿ ನೀಡಿ ಕಣ್ತುಂಬಿಕೊಳ್ಳುತ್ತಿದ್ದಾರೆ.

ಎಚ್. ಗಿರಿಜಮ್ಮ ಸಾಹಿತ್ಯ ಪ್ರಶಸ್ತಿಗೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗವು ‘ಡಾ.ಎಚ್. ಗಿರಿಜಮ್ಮ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಿದೆ. ಲೇಖಕಿ ಎಚ್. ಗಿರಿಜಮ್ಮ ಅವರ ನೆನಪಿನಲ್ಲಿ ಪ್ರತಿವರ್ಷ ಮಹಿಳಾ ವೈದ್ಯರಿಗೆ ನೀಡುವ ಸಾಹಿತ್ಯ ಪ್ರಶಸ್ತಿ ಇದಾಗಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ವೈದ್ಯ ಸಾಹಿತ್ಯ, ಕಥಾ ಸಂಕಲನ, ಕಾದಂಬರಿ, ಕವಿತಾ ಸಂಕಲನ, ಪ್ರಬಂಧ, ಪ್ರವಾಸ ಕಥನ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 2022ರಲ್ಲಿ ಪ್ರಕಟವಾದ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಕೃತಿಯ ಮೂರು ಪ್ರತಿಗಳನ್ನು ವೈದ್ಯ ಲೇಖಕಿಯರು ಇದೇ 30ರೊಳಗೆ ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ, ನಂ.222, 2ನೇ ಇ ಕ್ರಾಸ್, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ, ಬೆಂಗಳೂರು 560079 ಈ ವಿಳಾಸಕ್ಕೆ ಕಳುಹಿಸಬೇಕು (ಸಂಪರ್ಕಕ್ಕೆ: 9986840477) ಎಂದು ಬಳಗದ ಸಂಚಾಲಕಿ ಡಾ. ವಸುಂಧರಾ ಭೂಪತಿ ತಿಳಿಸಿದ್ದಾರೆ.

ಸೂಕ್ಷ್ಮ ವಲಯದಲ್ಲಿ ನಟ ಗಣೇಶ್ ಕಟ್ಟಡ: ಆಕ್ಷೇಪ

ಬಂಡೀಪುರ ಸಮೀಪದ ಜಕ್ಕಳ್ಳಿಯಲ್ಲಿ ಜಮೀನು, ತಾತ್ಕಾಲಿಕ ಮನೆ ನಿರ್ಮಾಣಕ್ಕಷ್ಟೇ ಅನುಮತಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ/ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿ ಚಿತ್ರನಟ ಗಣೇಶ್ ಅವರು ಕಟ್ಟಡ ನಿರ್ಮಿಸುತ್ತಿರುವುದಕ್ಕೆ ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ವಾಸ ಹಾಗೂ ಕೃಷಿ ಉದ್ದೇಶಕ್ಕೆ ತಾತ್ಕಾಲಿಕ ಮನೆಯನ್ನು ನಿರ್ಮಿಸಲು ಗಣೇಶ್ ಅನುಮತಿ ಪಡೆದಿದ್ದಾರೆ. ಆದರೆ, ಅವರು ಬೃಹತ್ ಕಟ್ಟಡ ನಿರ್ಮಿಸುತ್ತಿದ್ದಾರೆ’ ಎಂಬುದು ಆರೋಪ. ಅದಕ್ಕೆ ಪೂರಕವೆಂಬಂತೆ, ಕಟ್ಟಡದ ಅಡಿಪಾಯಕ್ಕಾಗಿ ದೊಡ್ಡ ಕಾಂಕ್ರೀಟ್ ಪಿಲ್ಲರ್‌ಗಳನ್ನು ಹಾಕಲಾಗಿದೆ. ಕಟ್ಟಡ ನಿರ್ಮಾಣ ಬಿರುಸಿನಿಂದ ಸಾಗಿದ್ದು, ಜೆಸಿಬಿಯನ್ನೂ ಬಳಸಲಾಗುತ್ತಿದೆ.

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಳ್ಳಿಯ ಸರ್ವೆ ನಂಬರ್ 105ರಲ್ಲಿ 1 ಎಕರೆ 24 ಗುಂಟೆ ಜಮೀನಿದ್ದು, ವಾಸಕ್ಕೆ ಮನೆ ಮತ್ತು ತೋಟಗಾರಿಕೆ ಉದ್ದೇಶದಿಂದ ಸುತ್ತಲೂ ಕಾಂಪೌಂಡ್ ನಿರ್ಮಿಸಲು ಅನುಮತಿ ನೀಡಬೇಕು ಎಂದು ಗಣೇಶ್ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದರು.

ಜಮೀನಿನಲ್ಲಿ ಕಟ್ಟಡ ನಿರ್ಮಾಣವಾಗುತ್ತಿದೆ

ಪರಿಸರ ಸೂಕ್ಷ್ಮ ವಲಯ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಜಮೀನು ಇದೆ. ಅಧಿಸೂಚನೆ ಪ್ರಕಾರ, ಸೂಕ್ಷ್ಮ ವಲಯದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿಲ್ಲ. ಶಾಶ್ವತ ಕಟ್ಟಡಗಳನ್ನೂ ನಿರ್ಮಿಸುವಂತಿಲ್ಲ.

ತಾತ್ಕಾಲಿಕ ಕಟ್ಟಡಕ್ಕಷ್ಟೇ ಅನುಮತಿ: ‘ತಾತ್ಕಾಲಿಕ ಕಟ್ಟಡವನ್ನು ವಸತಿ ಉದ್ದೇಶಕ್ಕಷ್ಟೇ ಬಳಸಬೇಕು. ವನ್ಯಜೀವಿಗಳ ಸಂಚಾರಕ್ಕೆ ಧಕ್ಕೆ ತರಕೂಡದು. ಸಮಿತಿ ಮುಂದೆ ಹಾಜರುಪಡಿಸಿದ್ದ ನೀಲನಕ್ಷೆಯಂತೆಯೇ ಮನೆ ಕಟ್ಟಬೇಕು. ಯಾವುದೇ ಕಾರಣಕ್ಕೂ ವಿಸ್ತೀರ್ಣ, ಮಾದರಿ ಬದಲಿಸುವಂತಿಲ್ಲ’ ಎಂಬ ಷರತ್ತುಗಳನ್ನು ವಿಧಿಸಿ ಈ ವರ್ಷದ ಮಾರ್ಚ್ 15ರಂದು ಪರಿಸರ ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿಯು ಗಣೇಶ್ ಅವರಿಗೆ ಅನುಮತಿ ನೀಡಿತ್ತು.

‘ಆದರೆ, ಜಮೀನಿನಲ್ಲಿ ದೊಡ್ಡ ಕಾಂಕ್ರೀಟ್ ಪಿಲ್ಲರ್‌ಗಳನ್ನು ನಿರ್ಮಿಸಲಾಗಿದೆ. ಅದನ್ನು ತಾತ್ಕಾಲಿಕ ಕಟ್ಟಡ ಎನ್ನಲು ಸಾಧ್ಯವಿಲ್ಲ. ಜಮೀನಿಗೆ ಸೋಲಾರ್ ಬೇಲಿಯನ್ನೂ ಹಾಕಲಾಗಿದೆ. ಇದು ಪರಿಸರ ಸೂಕ್ಷ್ಮ ವಲಯ ಮಾರ್ಗಸೂಚಿಗೆ ವಿರುದ್ಧ’ ಎಂದು ಪರಿಸರವಾದಿ ಜೋಸೆಫ್ ಹೂವರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮಾನವ – ವನ್ಯಜೀವಿ ಸಂಘರ್ಷ ಹೆಚ್ಚಳ

‘ಬಂಡೀಪುರ ವ್ಯಾಪ್ತಿಯಲ್ಲಿ ಬೆಂಗಳೂರು ಸೇರಿದಂತೆ ದೂರದ ಊರುಗಳ ಸಿರಿವಂತರು, ಜಮೀನು ಖರೀದಿಸಿ ಮನೆ ನಿರ್ಮಿಸಿ ಜಮೀನು ಪೂರ್ತಿ ಬೇಲಿ ಹಾಕುವ ಪ್ರವೃತ್ತಿ ಹೆಚ್ಚುತ್ತಿದೆ. ಅದರಿಂದ ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಮಾನವ –ವನ್ಯಜೀವಿ ಸಂಘರ್ಷ ಹೆಚ್ಚಾಗಲು ಕಾರಣವಾಗಿದೆ. ಅರಣ್ಯ ಇಲಾಖೆ ಕಡಿವಾಣ ಹಾಕಬೇಕು’ ಎಂದು ಹೂವರ್ ಆಗ್ರಹಿಸಿದರು.

‘ಅನುಮತಿ ನೀಡುವ ಮೊದಲು ಬಂಡೀಪುರದ ನಿರ್ದೇಶಕರು ತಮ್ಮ ಕೆಳಹಂತದ ಅಧಿಕಾರಿಗಳ ಮೂಲಕ ಜಮೀನು ಪರಿಶೀಲಿಸಿ ವರದಿ ಪಡೆಯಬೇಕು. ಕಟ್ಟಡ ನಿರ್ಮಾಣದ ಷರತ್ತುಗಳನ್ನು ಸ್ಪಷ್ಟವಾಗಿ ವಿವರಿಸಬೇಕು. ಈ ಪ್ರಕರಣದಲ್ಲಿ ಇದೆಲ್ಲವನ್ನೂ ಪಾಲಿಸಲಾಗಿದೆಯೇ ಎಂಬುದು ಗೊತ್ತಿಲ್ಲ. ನಟ ಗಣೇಶ್‌ಗೂ ಇದರ ಬಗ್ಗೆ ಮಾಹಿತಿ ಇದೆಯೇ ಎಂಬುದು ತಿಳಿದಿಲ್ಲ. ಗೊತ್ತಿದ್ದೂ ಕಟ್ಟಡ ನಿರ್ಮಿಸಿದರೆ ದೊಡ್ಡ ತಪ್ಪಾಗುತ್ತದೆ’ ಎಂದರು.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬಂಡೀಪುರ ಹುಲಿ ಯೋಜನಾ ನಿರ್ದೇಶಕ ಪಿ.ರಮೇಶ್ ಕುಮಾರ್, ‘ಪರಿಸರ ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿಯಲ್ಲಿ ನಾನು ಸದಸ್ಯ ಕಾರ್ಯದರ್ಶಿ ಅಷ್ಟೇ. ಪ್ರಾದೇಶಿಕ ಆಯುಕ್ತರು ಮುಖ್ಯಸ್ಥರು. ಈ ಪ್ರಕರಣದಲ್ಲಿ ತಾತ್ಕಾಲಿಕ ಮನೆ ನಿರ್ಮಾಣ ಮಾಡುವುದಾಗಿ ಹೇಳಿ ಗಣೇಶ್ ಅನುಮತಿ ಪಡೆದಿದ್ದಾರೆ. ಯಾವ ರೀತಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದು ಪರಿಶೀಲನೆ ನಡೆಸುತ್ತೇವೆ’ ಎಂದು ಹೇಳಿದರು.

ಭ್ರಷ್ಟಾಚಾರ: ಸಮರಕ್ಕೆ ಬಿಜೆಪಿ ಸಿದ್ಧತೆ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಕೇಳಿ ಬಂದಿರುವ ಭ್ರಷ್ಟಾಚಾರದ ಆರೋಪವನ್ನು ದೀರ್ಘಕಾಲ ಜೀವಂತವಾಗಿಡುವಂತೆ ಬಿಜೆಪಿ ವರಿಷ್ಠರು ಪಕ್ಷದ ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ ಎನ್ನಲಾಗಿದ್ದು, ಇದಕ್ಕಾಗಿಯೇ ಸೋಮವಾರದಿಂದ ಸರಣಿ ಸಭೆಗಳನ್ನು ನಡೆಸುವ ಸಾಧ್ಯತೆ ಇದೆ.

ಭ್ರಷ್ಟಾಚಾರದ ಆರೋಪದಿಂದಾಗಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಿತ್ತು. ಈಗ ಅದೇ ಆರೋಪವನ್ನು ಕಾಂಗ್ರೆಸ್ ವಿರುದ್ಧದ ಪ್ರಬಲ ಅಸ್ತ್ರವನ್ನಾಗಿ ಬಳಸಿ ಲೋಕಸಭಾ ಚುನಾವಣೆಯಲ್ಲಿ ಲಾಭ ಪಡೆಯಲು ಬಿಜೆಪಿ ಮುಂದಾಗಿದೆ.

ಈ ಕಾರ್ಯತಂತ್ರದ ಭಾಗವಾಗಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದ ಬಿಜೆಪಿ ಮುಖಂಡರ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಸೋಮವಾರ ಭೇಟಿ ಮಾಡುವ ಸಾಧ್ಯತೆ ಇದೆ. ಈ ನಿಯೋಗವು, ಬಿಬಿಎಂಪಿ ಪ್ರಯೋಗಾಲಯದಲ್ಲಿ ನಡೆದಿರುವ ಅಗ್ನಿ ಅವಘಡದ ಕುರಿತು ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಲಿದೆ ಎಂದು ಗೊತ್ತಾಗಿದೆ. ಹೋರಾಟದ ರೂಪುರೇಷೆ ನಿರ್ಧರಿಸುವುದಕ್ಕಾಗಿ ಬಿಜೆಪಿ ನಾಯಕರು ಸೋಮವಾರ ಅಥವಾ ಮಂಗಳವಾರ ಸಭೆ ನಡೆಸಲಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	112.48	4,220	6,998
ಹಾರಂಗಿ	2,859	2,858.73	1,538	1,900
ಕಬಿನಿ	2284.00	2,281.59	5,360	5,000
ಹೇಮಾವತಿ	2,922	2,915.95	1,041	3,640
ಲಿಂಗನಮಕ್ಕಿ	1,819	1,790.70	6,711	6,571.69
ಸೂಪಾ (ಮೀ)	564	546.60	3,623	4,831
ಮಾಣಿ	595	581	737	648
ತುಂಗಭದ್ರಾ	1,633	1,628.70	11,800	11,546
ಮಲಪ್ರಭಾ	2079.50	2,066.90	1,305	194
ಘಟಪ್ರಭಾ	2175	2,165.61	4,230	2,483
ಭದ್ರಾ	186	167	2,139	2,787
ಆಲಮಟ್ಟಿ (ಮೀ)	519.60	519.57	13,693	15,731
ನಾರಾಯಣಪುರ (ಮೀ)	492.25	492.10	12,000	00

*ನೆಲಮಟ್ಟದಿಂದ

‘ಕೈ’ ಸರ್ವಸದಸ್ಯರ ಸಭೆ ಇಂದು

ಬೆಂಗಳೂರು: ಲೋಕಸಭಾ ಚುನಾವಣೆಗೆ ತಳ ಮಟ್ಟದಿಂದ ಸಿದ್ಧತೆ ನಡೆಸಲು ಮುಂದಾಗಿರುವ ಕಾಂಗ್ರೆಸ್, ಪೂರ್ವ ತಯಾರಿಯ ಬಗ್ಗೆ ಚರ್ಚಿಸಲು ಕೆಪಿಸಿಸಿ ಸರ್ವಸದಸ್ಯರ ಸಭೆಯನ್ನು ಸೋಮವಾರ (ಆಗಸ್ಟ್ 14) ಹಮ್ಮಿಕೊಂಡಿದೆ.

ಕೆಪಿಸಿಸಿ ಕಚೇರಿಯ ಇಂದಿರಾ ಭವನದಲ್ಲಿರುವ ‘ಭಾರತ್ ಜೋಡೊ’ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಈ ಸಭೆ ನಡೆಯಲಿದೆ. ಪಕ್ಷ ಸಂಘಟನೆಗೆ ಒತ್ತು ನೀಡುವ ಜೊತೆಗೆ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಪ್ರಚಾರ ಮತ್ತು ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷರು, ಎಐಸಿಸಿ ಪದಾಧಿಕಾರಿಗಳು, ಸಚಿವರು ಮತ್ತು ಹಿರಿಯ ನಾಯಕರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಭಾಗವಹಿಸುವಂತೆ ಎಲ್ಲ ನಾಯಕರಿಗೆ ಸೂಚನೆ ನೀಡಲಾಗಿದೆ.

ಜಾತಿ ಗಣತಿ ವರದಿ ಶೀಘ್ರ ಸಲ್ಲಿಕೆ

ಒಂದನೇ ಪುಟದಿಂದ...

ಸಮಿತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯಲ್ಲಿ (ಐಸೆಕ್) ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಅಬ್ದುಲ್ ಅಜೀಜ್, ಪರಿಶಿಷ್ಟ ಜಾತಿ, ಪಂಗಡ ಮತ್ತು ಬುಡಕಟ್ಟು ಜನರ ಸಾಮಾಜಿಕ ಸ್ಥಿತಿಗತಿ ಅಧ್ಯಯನ, ಕೊಳಚೆ ಪ್ರದೇಶ ಮತ್ತು ಕರಾವಳಿ ಪಟ್ಟಣಗಳ ಸಮಾಜೋ ಆರ್ಥಿಕ ಅಂಕಿ ಅಂಶಗಳ ಅಧ್ಯಯನ ಸೇರಿದಂತೆ ಸರ್ಕಾರದ ವಿವಿಧ ಸಂಶೋಧನಾ ಯೋಜನೆಗಳಿಗೆ ಸಮಾಜಶಾಸ್ತ್ರಜ್ಞರಾಗಿ ಕಾರ್ಯನಿರ್ವಹಿಸಿರುವ ಪ್ರೊ. ಜೋಗನ್ ಶಂಕರ್, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿಯಾಗಿದ್ದ ಛಾಯಾ ಕೆ. ದೇಗಾಂವ್ಕರ್, ಐಸೆಕ್‌ನಲ್ಲಿ ಭೂಗೋಳ ವಿಜ್ಞಾನ ಪ್ರಾಧ್ಯಾಪಕರಾಗಿರುವ ಸಿ.ಎಂ. ಲಕ್ಷ್ಮಣ್, ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿ (ಸಾಂಖ್ಯಿಕ) ಆಗಿದ್ದ ಸಿ. ಕೆಂಪಯ್ಯ ಇದ್ದಾರೆ.

ಈ ಪೈಕಿ, ಅಬ್ದುಲ್ ಅಜೀಜ್, ಜೋಗನ್ ಶಂಕರ್ ಮತ್ತು ಲಕ್ಷ್ಮಣ್ ಅವರು ಕಾಂತರಾಜು ನೇತೃತ್ವದ ಆಯೋಗ ವರದಿ ಸಿದ್ಧಪಡಿಸಲು ನೆರವಾಗಿದ್ದ ಸಮಿತಿಯಲ್ಲೂ ಇದ್ದರು.

ಈ ಸಮಿತಿಯು ಕಾಂತರಾಜು ನೇತೃತ್ವದ ಆಯೋಗ ಸಂಗ್ರಹಿಸಿದ್ದ ದತ್ತಾಂಶಗಳನ್ನು ವಿಶ್ಲೇಷಿಸಿ ಪ್ರವರ್ಗಗಳ ಮರು ವರ್ಗೀಕರಣ, ಮೀಸಲಾತಿ ಪ್ರಮಾಣ ಹಂಚಿಕೆಗೆ ಅಂತಿಮ ರೂಪ ನೀಡಲಿದೆ. ಸಮೀಕ್ಷೆಯಲ್ಲಿ ಸಂಗ್ರಹಿಸಿದ್ದ ಜಾತಿವಾರು ಜನಸಂಖ್ಯೆ ಆಧರಿಸಿ, ಪ್ರವರ್ಗಗಳ ಮರು ವಿಂಗಡಣೆ ಕೆಲಸವನ್ನೂ ನಿರ್ವಹಿಸುವ ಜೊತೆಗೆ, ಈ ವರದಿಗೆ ಸಂಬಂಧಿಸಿದ ಇತರ ವಿಚಾರಗಳ ಬಗ್ಗೆಯೂ ಆಯೋಗಕ್ಕೆ ಸಲಹೆ, ಸೂಚನೆಗಳನ್ನು ನೀಡಲಿದೆ ಎಂದೂ ಆಯೋಗದ ಮೂಲಗಳು ತಿಳಿಸಿವೆ.

ಎಚ್. ಕಾಂತರಾಜು ಆಯೋಗದ ಅವಧಿಯಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಂಗ್ರಹಿಸಿದ್ದ ದತ್ತಾಂಶಗಳನ್ನು ವಿಶ್ಲೇಷಿಸಲು ತಜ್ಞರ ಸಮಿತಿ ರಚಿಸಲಾಗಿದೆ

ಕೆ. ಜಯಪ್ರಕಾಶ ಹೆಗ್ಡೆ, ಅಧ್ಯಕ್ಷ, ಹಿಂದುಳಿದ ವರ್ಗಗಳ ಆಯೋಗ

ಮೀಸಲು ಮರು ವರ್ಗೀಕರಣ ಸವಾಲು

ಸಮೀಕ್ಷೆಯಲ್ಲಿ ಕಂಡುಬಂದ ಪ್ರತಿ ಜಾತಿಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಯನ್ನು ಆಧರಿಸಿ ಪ್ರವರ್ಗಗಳ ಮರು ವಿಂಗಡಣೆ ಆಗಬೇಕಿದೆ. ಪ್ರತಿ 10 ವರ್ಷಗಳಿಗೊಮ್ಮೆ ಪ್ರವರ್ಗಗಳ ಮರು ವಿಂಗಣೆ ಆಗಬೇಕಿದೆ. ಆದರೆ, 29 ವರ್ಷ ಕಳೆದರೂ ಆಗಿಲ್ಲ. ಹೆಗ್ಡೆ ನೇತೃತ್ವದ ಆಯೋಗ ಹಿಂದುಳಿದ ವರ್ಗಗಳ ಪಟ್ಟಿಯನ್ನು ಮರು ವರ್ಗೀಕರಣಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಿದೆ. ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಮೀಸಲಾತಿ ಪ್ರಮಾಣವನ್ನು ಶೇ 24ಕ್ಕೆ ಹೆಚ್ಚಿಸಲಾಗಿದೆ. ಅಲ್ಲದೆ, ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ಶೇ 10 ಮೀಸಲಾತಿ ಕಲ್ಪಿಸಲಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟು ಪ್ರವರ್ಗಗಳ ಮರು ವಿಂಗಡಣೆ ಮತ್ತು ಮೀಸಲಾತಿ ಪ್ರಮಾಣ ಹಂಚಿಕೆಯ ಸವಾಲು ಆಯೋಗದ ಮುಂದಿದೆ ಎಂದೂ ಆಯೋಗದ ಮೂಲಗಳು ಹೇಳಿವೆ.

ಎಚ್. ಕಾಂತರಾಜು ನೇತೃತ್ವದ ಆಯೋಗ ವರದಿ ಸಿದ್ಧಪಡಿಸುವ ವೇಳೆಯಲ್ಲಿ ಕೇಂದ್ರ ಸರ್ಕಾರವು ಆರ್ಥಿಕ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ಶೇ 10 ಮೀಸಲಾತಿ ಕಲ್ಪಿಸಿರಲಿಲ್ಲ. ಈಗ ಈ ಮೀಸಲಾತಿ ಜಾರಿಯಲ್ಲಿದೆ. ಹೊಸತಾಗಿ ಜಾತಿಗಳನ್ನು ಪ್ರವರ್ಗವಾರು ಮರು ವರ್ಗೀಕರಿಸಿ, ಮೀಸಲಾತಿ ಪ್ರಮಾಣ ಹಂಚಿಕೆ ಮಾಡುವ ವೇಳೆ ಈ ಅಂಶವನ್ನು ಗಮನಿಸಬೇಕಾಗಿದೆ ಎಂದೂ ಗೊತ್ತಾಗಿದೆ.

ಕೆ. ಜಯಪ್ರಕಾಶ ಹೆಗ್ಡೆ ಅವರ ಮೂರು ವರ್ಷಗಳ ಅಧಿಕಾರಾವಧಿ ನ. 25ಕ್ಕೆ ಮುಗಿಯಲಿದೆ. ಅಷ್ಟರ ಒಳಗೆ ವರದಿಯನ್ನು ಸಲ್ಲಿಸಲು ಅವರು ಮುಂದಾಗಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಹೆಗ್ಡೆ, ‘ಕಾಂತರಾಜು ನೇತೃತ್ವದ ಆಯೋಗ ಸಮೀಕ್ಷೆ ನಡೆಸಿದೆ. ಆ ಸಮೀಕ್ಷೆಯ ಸಂದರ್ಭದಲ್ಲಿ ಸಂಗ್ರಹಿಸಿರುವ ಅಂಕಿಅಂಶಗಳನ್ನು ತಜ್ಞರ ಸಮಿತಿಯ ನೆರವಿನಿಂದ ವಿಶ್ಲೇಷಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ನಿರ್ಧರಿಸಿದ್ದೇವೆ. ವರದಿ ಸಲ್ಲಿಸುವ ಕುರಿತಂತೆ ಸರ್ಕಾರದಿಂದಲೂ ನಿರ್ದೇಶನ ಬಂದಿದೆ’ ಎಂದು ಅವರು ಹೇಳಿದರು.

₹1 ಲಕ್ಷ ಮೊತ್ತದ ತಾರಾನಾಥ ಪ್ರಶಸ್ತಿಗೆ ಕವಿತಾ ಮಿಶ್ರಾ ಆಯ್ಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ತಾರಾನಾಥ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಸ್ವಾತಂತ್ರ್ಯೋತ್ಸವ ದಿನ ಕೊಡುವ ಪ್ರತಿಷ್ಠಿತ ತಾರಾನಾಥ ಪ್ರಶಸ್ತಿಗೆ ಈ ಬಾರಿ ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹1 ಲಕ್ಷ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ನಗರದ ಎಲ್‌ವಿಡಿ ಕಾಲೇಜಿನಲ್ಲಿ ಆಗಸ್ಟ್ 15ರಂದು ಆಯೋಜಿಸಿರುವ ಸಮಾರಂಭದಲ್ಲಿ ಕವಿತಾ ಮಿಶ್ರಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಾರಾನಾಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಾರಸಮಲ್ ಸುಖಾಣಿ ತಿಳಿಸಿದ್ದಾರೆ.

ಕವಿತಾ ಮಿಶ್ರಾ

ಮಂಗಮ್ಮ

ಕಾಯಕ ಮಹಿಳಾ ಪ್ರಶಸ್ತಿಯನ್ನು ಹಣ್ಣು ಮಾರುವ ಗುವ್ವಲದಿನ್ನಿ ಮಂಗಮ್ಮ ಅವರಿಗೆ ಪ್ರದಾನ ಮಾಡಲಾಗುವುದು. ಈ ಪ್ರಶಸ್ತಿ ₹10 ಸಾವಿರ ನಗದು ಒಳಗೊಂಡಿದೆ.

ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಎಚ್.ವಿಶ್ವನಾಥ ಹೇಳಿಕೆ

ಅ.2ರಿಂದ ‘ಷಫರ್ಡ್ಸ್ ಇಂಡಿಯಾ’ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಷಫರ್ಡ್ಸ್ ಇಂಡಿಯಾ–ಇಂಟರ್‌ನ್ಯಾಷನಲ್ ಸಂಘಟನೆಯ 9ನೇ ವಾರ್ಷಿಕೋತ್ಸವ ಹಾಗೂ ರಾಷ್ಟ್ರೀಯ ಪ್ರತಿನಿಧಿಗಳ ಮಹಾ ಸಮಾವೇಶವನ್ನು ನಗರದ ಸಿ.ಪಿ.ಇಡಿ ಮೈದಾನದಲ್ಲಿ ಅಕ್ಟೋಬರ್ 2 ಮತ್ತು 3ರಂದು ಆಯೋಜಿಸಲಾಗುವುದು’ ಎಂದು ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ ಹೇಳಿದರು.

ನಗರದಲ್ಲಿ ಭಾನುವಾರ ಪೂರ್ವಭಾವಿ ಸಭೆ ನಂತರ ಮಾಹಿತಿ ನೀಡಿದ ಅವರು, ‘ದೇಶದ ವಿವಿಧ ರಾಜ್ಯಗಳಲ್ಲಿ 12 ಕೋಟಿಗೂ ಅಧಿಕ ಕುರುಬರಿದ್ದು ಎಲ್ಲರನ್ನೂ ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಉದ್ದೇಶದಿಂದ ‘ಷಫರ್ಡ್ಸ್ ಇಂಡಿಯಾ’ ಕಟ್ಟಲಾಗಿದೆ. ಪ್ರತಿ ವರ್ಷ ಒಂದೊಂದು ರಾಜ್ಯದಲ್ಲಿ ಸಮಾವೇಶ ನಡೆಸಲಾಗುತ್ತದೆ. ಈ ಬಾರಿ ಕರ್ನಾಟಕಕ್ಕೆ ಆತಿಥ್ಯ ಸಿಕ್ಕಿದ್ದು, ಬೆಳಗಾವಿಯೇ ಇದಕ್ಕೆ ಸೂಕ್ತ ಎಂದು ನಿರ್ಧರಿಸಲಾಗಿದೆ’ ಎಂದರು.

‘ಅಕ್ಟೋಬರ್ 2ರಂದು ಕಾರ್ಯಕಾರಿಣಿಯಲ್ಲಿ ದೇಶದ ಎಲ್ಲ ರಾಜ್ಯಗಳ ಪ್ರತಿನಿಧಿಗಳೂ ಪಾಲ್ಗೊಳ್ಳುವರು. ಅಕ್ಟೋಬರ್ 3ರಂದು ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳ ಜನರನ್ನು ಸೇರಿಸಿ ಸಮಾವೇಶ ಮಾಡಲಾಗುತ್ತಿದ್ದು, ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಲಿದ್ದಾರೆ. ಅದೇ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಗುವುದು’ ಎಂದರು.

‘ಕುರುಬರು ವಿಶ್ವದ ಮೂಲ ನಿವಾಸಿಗಳು. ವಿಶ್ವದೆಲ್ಲೆಡೆ ಇರುವ ನಮ್ಮ ರಾಜಕಾರಣ, ಸಂಸ್ಕೃತಿ, ಸಂಸ್ಕಾರ, ಜೀವನ ಪದ್ಧತಿ ಹಾಗೂ ಸವಾಲುಗಳ ಕುರಿತು ವಿಚಾರ– ವಿಮರ್ಶೆ ಈ ಸಮಾವೇಶದಲ್ಲಿ ನಡೆಯಲಿದೆ. ಇದು ಪಕ್ಷಾತೀತ ಸಂಘಟನೆಯಾಗಿದ್ದು ಎಲ್ಲ ಪಕ್ಷದ ನಾಯಕರೂ ಪಾಲ್ಗೊಳ್ಳಲಿದ್ದಾರೆ’ ಎಂದು ಹೇಳಿದರು.

ಸಂಘಟನೆಯ ಸಂಚಾಲಕ ಎಚ್. ಎಂ.ರೇವಣ್ಣ ಹಾಗೂ ಕುರುಬರ ಸಂಘದ ವಿವಿಧ ರಾಜ್ಯಗಳ ಮುಖಂಡರೂ ಇದ್ದರು.

‘ಕಾಂಗ್ರೆಸ್‌ನಿಂದ ಟಿಕೆಟ್ ಕೇಳುವೆ’

‘ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಟಿಕೆಟ್ ಕೇಳುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ ಹೇಳಿದರು.

ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘40 ವರ್ಷ ಕಾಂಗ್ರೆಸ್‌ನಲ್ಲಿದ್ದೆ. ಕಾಂಗ್ರೆಸ್‌ನಿಂದಲೇ ಸಂಸದನಾಗಿದ್ದೆ. ಯಾವುದೋ ಗಳಿಗೆಯಲ್ಲಿ ಪಕ್ಷ ಬಿಟ್ಟಿದ್ದೆ. ಈಗ ಮತ್ತೊಮ್ಮೆ ಏಕೆ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಬಾರದು’ ಎಂದು ಪ್ರಶ್ನಿಸಿದರು.

‘ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಈಗ ಪಕ್ಷ ರಾಜಕಾರಣಕ್ಕಿಂತ ವ್ಯಕ್ತಿ ರಾಜಕಾರಣ ನಡೆಯುತ್ತಿದೆ. ಸಿದ್ದರಾಮಯ್ಯ, ಯಡಿಯೂರಪ್ಪ, ಕುಮಾರಸ್ವಾಮಿ, ಎಚ್.ಡಿ.ದೇವೇಗೌಡ ಕೇಂದ್ರಿತ ರಾಜಕಾರಣ ನಡೆಯುತ್ತಿದೆ. ಇದರಿಂದ ಆಂತರಿಕ ಪ್ರಜಾಪ್ರಭುತ್ವ ಸತ್ತುಹೋಗಿದೆ’ ಎಂದೂ ಹೇಳಿದರು.

‘ರಾಜಕಾರಣ ಜಡವಲ್ಲ ಅದು ಜಂಗಮ. ಏನೇನು ಬದಲಾಗುತ್ತದೆಯೋ ನೋಡೋಣ’ ಎಂದು ಹೇಳಿದರು.

98 ಗ್ರಾಮಗಳಲ್ಲಿ ನೀರು ಪೂರೈಕೆ ಸ್ಥಗಿತ

ಒಂದನೇ ಪುಟದಿಂದ...

ನೀರಿನಲ್ಲಿ ಪತ್ತೆಯಾದ ಸೂಕ್ಷ್ಮಾಣುವಿನ ವಿವರ ಪತ್ತೆಹಚ್ಚಲು ನೀರಿನ ಮಾದರಿಯ 2ನೇ ಹಂತದ ಪರೀಕ್ಷೆಗಾಗಿ ಶಿವಮೊಗ್ಗದ ವೈದ್ಯಕೀಯ ಕಾಲೇಜಿನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆ ಪರೀಕ್ಷಾ ವರದಿ ಸೋಮವಾರ ಕೈಸೇರುವ ನಿರೀಕ್ಷೆ ಇದೆ.



ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಬಳಿಯ ಶುದ್ಧೀಕರಣ ಘಟಕದಲ್ಲಿ ಸೂಕ್ಷ್ಮಾಣುಗಳು ಪತ್ತೆಯಾಗಿರುವ ನೀರು

‘ಆಯಾ ಗ್ರಾಮಗಳ ಕಿರು ನೀರು ಪೂರೈಕೆ ಘಟಕಗಳು ಹಾಗೂ ಓವರ್‌ಹೆಡ್ ಟ್ಯಾಂಕ್‌ಗಳಿಂದ ನೀರಿನ ಮಾದರಿಯನ್ನು ಆಗಾಗ ಪರೀಕ್ಷಿಸಲಾಗುತ್ತಿದೆ. ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೆ ಭೇಟಿ ನೀಡಿ ನೀರಿನಿಂದ ಸಮಸ್ಯೆಯಾಗಿದೆಯೇ ಎಂಬುದರ ಮಾಹಿತಿ ಸಂಗ್ರಹಿಸಿ ವರದಿ ಸಲ್ಲಿಸುತ್ತಿದ್ದಾರೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ್ ತಿಳಿಸಿದ್ದಾರೆ.

‘ಶಾಂತಿಸಾಗರದ ನೀರಿನಲ್ಲಿ ಸೂಕ್ಷ್ಮಾಣುಗಳು ಪತ್ತೆಯಾದ ಕಾರಣ ಬಹುಗ್ರಾಮ ಯೋಜನೆಯಡಿ ನೀರು ಪೂರೈಕೆ ಸ್ಥಗಿತಗೊಳಿಸಿ ಕೊಳವೆಬಾವಿ ಸೇರಿದಂತೆ ಪರ್ಯಾಯ ಮೂಲಗಳಿಂದ ನೀರು ಪೂರೈಸಲಾಗುತ್ತಿದೆ. ಅಲ್ಲದೆ, ಈ ಗ್ರಾಮಗಳ ವ್ಯಾಪ್ತಿಯಲ್ಲಿ ಟ್ಯಾಂಕ್‌ಗಳ ನೀರನ್ನು ಖಾಲಿ ಮಾಡಿ ಕ್ಲೋರಿನೇಷನ್ ಮಾಡಿದ ಬಳಿಕ ನೀರನ್ನು ಪರೀಕ್ಷೆಗೆ ಒಳಪಡಿಸಿ, ಕುಡಿಯಲು ಯೋಗ್ಯ ಎಂದು ಕಂಡುಬಂದ ಬಳಿಕ ಪೂರೈಸಲಾಗುವುದು’ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್ ಬಿ. ಇಟ್ನಾಳ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಚಿತ್ರದುರ್ಗದ ಕವಾಡಿಗರಹಟ್ಟಿ ಸೇರಿ ರಾಜ್ಯದ ವಿವಿಧೆಡೆ ಇತ್ತೀಚೆಗೆ ಕಲುಷಿತ ನೀರು ಸೇವನೆಯಿಂದ ಭಾರಿ ಅನಾಹುತ ಸಂಭವಿಸಿರುವ ಕಾರಣ, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರ ನೀರಿನ ಮಾದರಿಯ ಪರೀಕ್ಷೆ ನಡೆಸಲು ಸೂಚಿಸಿದೆ.

IN THE COURT I ADDL. DIST & SESSIONS JUDGE
BAGALKOT SITTING AT: JAMKHANDI
EXECUTION PETITION NO.5001/2023
1) Nirani Sugars Limited Mudhol, Dist: Bagalkot ... Decree Holder
V/s- 1) Laxmi Agencies and another ...Judgement Debtor
SUIT SUMMONS TO BELOW NAMED JUDGEMENT DEBTOR NO. 1&2.
1) Laxmi Agencies, (COAL BRIQUETS INDUSTRY) Plot # 400A, industrial area, Balkampady, Mangalore-575011 Dakshan kannada District Karnataka, represented by its proprietor Shri, Hiriyappa D.B Age: 67 Years, Occ: Business,
2) Shri, Hiriyappa D.B. Proprietor of Laxmi Agencies, (COAL BRIQUETS INDUSTRY) Plot # 400A, Industrial area, Balkampady, Mangalore-575011 Dakshan kannada District Karnataka,
Whereas, the above name Decree holder has filed this Execution petiotion for recovery of decreetal amount of Rs. 5,34,20,000/- with interest etc., which comes to Rs.6,81,70,586/- as per the Judgement and decree passed by this Hon'ble court in commercial O.S.No.04/2020 dated 16-07-2022
The above case is now fixed on 26-09-2023, you are hereby summoned to appear before this Hon'ble court in person or through duly instructed counsel to answer the claim of the plaintiff on 26-09-2023 at.11:00 A.M. Failing which necessary orders shall be passed in your absence.
Given under my hand and seal of this court on this 04-08-2023
Sd/- Advocate for Decree holder
Place: Jamkhandi
Date: 04-08-2023
BY ORDER OF THE COURT
Sd/-
I Addl District & Sessions Judge Bagalkot Sitting at Jamkhandi

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560029
ಟೆಲಿಫೋನ್: 080–25536625, 25536789
ಇ–ಮೇಲ್: kmfengg@gmail.com / engg@kmf.coop
ಕಹಾಮ/ಅಭಿ/ಪಿಎಫ್‌ಪಿ/01733/2023–24 ದಿನಾಂಕ: 10.8.2023
ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST) ಪ್ರಕಟಣೆ
ಕರ್ನಾಟಕ ಹಾಲು ಮಹಾಮಂಡಳ ನಿಯಮಿತ, ಬೆಂಗಳೂರು ರವರ ವತಿಯಿಂದ ಈ ಕೆಳಗೆ ನಮೂದಿಸಿರುವ ತಯಾರಿಕಾ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
“ಪ್ರತಿ ತಿಂಗಳಿಗೆ 1500 ಮೆ.ಟನ್ ದಿಂದ 2000 ಮೆ.ಟನ್ ರವರಗೆ ವಿಸ್ತರಿಸಬಹುದಾದ ಪೌಚ್ ಫಿಲಂ ಘಟಕ”
ಈ ನಿಟ್ಟಿನಲ್ಲಿ ಕಹಾಮವು ಉದ್ದೇಶಿತ ಘಟಕದ ಅನುಷ್ಠಾನದಲ್ಲಿ ಪರಿಣಿತಿ ಹೊಂದಿರುವ ಯಂತ್ರೋಪಕರಣಗಳ ತಯಾರಕರು / ಸರಬರಾಜುದಾರರು / ಸಲಹೆಗಾರರು “ಆಸಕ್ತಿ ವ್ಯಕ್ತಪಡಿಸುವಿಕೆ” ಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಈ ಬಗ್ಗೆ ಹಾಗೂ ತಮ್ಮ ಅರ್ಹತೆಯ ಬಗ್ಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಹಾಮ ರವರ ಹೆಸರಿಗೆ / ಸಂಸ್ಥೆಯ ವಿಳಾಸಕ್ಕೆ ದಿನಾಂಕ:25.08.2023 ರೊಳಗೆ ತಮ್ಮ ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಸಬಹುದಾಗಿದೆ. ಆಸಕ್ತಿ ವ್ಯಕ್ತಪಡಿಸುವಿಕೆಗೆ ಸಂಬಂಧಿಸಿದ ವಿವರಗಳು ಕಹಾಮ ವೆಬ್‌ಸೈಟ್: www.kmfnandini.coop ನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–26096811 ರಲ್ಲಿ ಕಛೇರಿ ದಿನಗಳಲ್ಲಿ ಸಂಪರ್ಕಿಸಬಹುದಾಗಿದೆ.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ
ಒಳ್ಳೆಯದು ಉಳಿಯಬೇಕಾದರೆ ಕೆಟ್ಟವರೊಂದಿಗೆ ಹೋರಾಡಬೇಕು.
-ಅ.ನ.ಕೃ.

ನಾಗರಿಕರ ವೈಯಕ್ತಿಕ ದತ್ತಾಂಶ ರಕ್ಷಿಸದ ದತ್ತಾಂಶ ಸಂರಕ್ಷಣಾ ಕಾಯ್ದೆ

ಸಂಸತ್ತು ಅಂಗೀಕರಿಸಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಹಿ ಕೂಡ ಮಾಡಿರುವ ಡಿಜಿಟಲ್ ದತ್ತಾಂಶ ಸಂರಕ್ಷಣಾ ಕಾಯ್ದೆಯು ಹಲವು ಪರಿಷ್ಕರಣೆಗಳಿಗೆ ಒಳಗಾಗಿದ್ದರೂ ಮಹತ್ವದ ಕೆಲವು ವಿಚಾರಗಳಲ್ಲಿ ಲೋಪಗಳು ಉಳಿದಿವೆ. ಜನರ ವೈಯಕ್ತಿಕ ದತ್ತಾಂಶಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದು ಕಾಯ್ದೆಯ ಗುರಿಯೇ ಹೊರತು ಅವುಗಳನ್ನು ಹೇಗೆ ರಕ್ಷಿಸಬಹುದು ಎಂಬುದಲ್ಲ. ವೈಯಕ್ತಿಕ ದತ್ತಾಂಶಗಳನ್ನು ರಕ್ಷಿಸುವುದಕ್ಕೆ ಏನೇನು ಮಾಡಬಹುದು ಎಂಬುದಕ್ಕಿಂತ ದತ್ತಾಂಶ ಬಳಕೆಗೆ ವಿನಾಯಿತಿಗಳನ್ನು ಹೇಗೆ ನೀಡಬಹುದು ಎಂಬುದರತ್ತ ಹೆಚ್ಚು ಗಮನಹರಿಸಲಾಗಿದೆ. ಹೆಸರೇ ಹೇಳುವಂತೆ ದತ್ತಾಂಶ ಸಂರಕ್ಷಣೆಯೇ ಕಾಯ್ದೆಯ ಮುಖ್ಯ ಗುರಿ ಆಗಬೇಕಿತ್ತು. ಒಬ್ಬ ವ್ಯಕ್ತಿಗೆ ಸಂಬಂಧಿಸಿದ ದತ್ತಾಂಶಗಳನ್ನು ಇನ್ನೊಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಕಾನೂನುಬದ್ಧ ಉದ್ದೇಶಕ್ಕೆ ಬಳಸುವಾಗ ವ್ಯಕ್ತಿಯ ಸಮ್ಮತಿ ಪಡೆದಿರಬೇಕು ಎಂಬುದನ್ನು ಕಾಯ್ದೆಯು ಖಾತರಿಪಡಿಸಬೇಕಿತ್ತು. ಸರ್ಕಾರವು ತನಗೆ ಮತ್ತು ತನ್ನ ಅಧೀನದಲ್ಲಿರುವ ಸಂಸ್ಥೆಗಳಿಗೆ ಜನರ ದತ್ತಾಂಶ ಬಳಸುವುದಕ್ಕೆ ಹಲವು ವಿನಾಯಿತಿಗಳನ್ನು ಕೊಟ್ಟುಕೊಳ್ಳುವ ಮೂಲಕ ಕಾಯ್ದೆಯನ್ನು ತೀರಾ ದುರ್ಬಲಗೊಳಿಸಿದೆ. ನ್ಯಾಯಾಂಗದ ನಿಬಂಧನೆಗಳ ಅಥವಾ ಸಂಸದೀಯ ನಿಯಂತ್ರಣ ಇಲ್ಲದೆಯೇ ಸರ್ಕಾರವು ದತ್ತಾಂಶವನ್ನು ಸಂಗ್ರಹಿಸಿ ತನಗೆ ಬೇಕಾದಂತೆ ಬಳಸಿಕೊಳ್ಳುವುದಕ್ಕೆ ಕಾಯ್ದೆಯು ಅವಕಾಶ ಒದಗಿಸಿದೆ. ಹೀಗೆ ಸಂಗ್ರಹಿಸಲಾದ ದತ್ತಾಂಶವನ್ನು ವ್ಯಕ್ತಿಗಳ ಮೇಲಿನ ಕಣ್ಗಾವಲು ಮತ್ತು ನಿಗಾಕ್ಕೆ ದುರ್ಬಳಕೆ ಮಾಡುವ ಅವಕಾಶವನ್ನೂ ಕಾಯ್ದೆಯು ಕೊಟ್ಟಿದೆ.



> ಸರ್ಕಾರವು ತನಗೆ ಮತ್ತು ತನ್ನ ಅಧೀನದಲ್ಲಿರುವ ಸಂಸ್ಥೆಗಳಿಗೆ ಜನರ ದತ್ತಾಂಶ ಬಳಸುವುದಕ್ಕೆ ಹಲವು ವಿನಾಯಿತಿಗಳನ್ನು ಕೊಟ್ಟುಕೊಳ್ಳುವ ಮೂಲಕ ಕಾಯ್ದೆಯನ್ನು ತೀರಾ ದುರ್ಬಲಗೊಳಿಸಿದೆ

ಸರ್ಕಾರ ನೀಡುವ ಸೌಲಭ್ಯಗಳು, ಸಹಾಯಧನಗಳು, ಪರವಾನಗಿಗಳು ಮುಂತಾದವುಗಳಿಗೆ ವ್ಯಕ್ತಿಯ ಸಮ್ಮತಿ ಇಲ್ಲದೆಯೇ ದತ್ತಾಂಶವನ್ನು ಬಳಸಬಹುದಾಗಿದೆ ಎಂದು ಕಾಯ್ದೆಯು ಹೇಳುತ್ತಿದೆ. ಒಂದು ಉದ್ದೇಶಕ್ಕಾಗಿ ಸಂಗ್ರಹಿಸಿದ ದತ್ತಾಂಶವನ್ನು ಆ ಉದ್ದೇಶಕ್ಕೆ ಮಾತ್ರ ಬಳಸಬೇಕು ಎಂಬುದು ದತ್ತಾಂಶ ಸಂರಕ್ಷಣೆಯ ಮೂಲ ತತ್ವವಾಗಿದೆ. ಆದರೆ, ಇಲ್ಲಿ ಆ ತತ್ವದ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲಾಗಿದೆ. ಸರ್ಕಾರವು ಒಬ್ಬ ವ್ಯಕ್ತಿಯ ದತ್ತಾಂಶವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಅನಿಸಿದರೆ ಅದರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡುವುದು ಕೂಡ ಕಷ್ಟವಾಗಲಿದೆ. ಏಕೆಂದರೆ, 'ಸದುದ್ದೇಶದ ಬಳಕೆ' ಎಂಬುದರ ಅಡಿಯಲ್ಲಿ ಈ ದುರ್ಬಳಕೆಗಳನ್ನು ಸೇರಿಸಿಕೊಳ್ಳಬಹುದು. ಕೆಲವು ವ್ಯಕ್ತಿಗಳು ಅಥವಾ ಸಂಸ್ಥೆಗಳ ದತ್ತಾಂಶ ಬಳಕೆಗೆ ಸಮ್ಮತಿ ಪಡೆದುಕೊಳ್ಳುವ ಅಗತ್ಯ ಇಲ್ಲ ಎಂದು ಅಧಿಸೂಚನೆ ಹೊರಡಿಸುವ ಅವಕಾಶವನ್ನು ಕಾಯ್ದೆಯು ಸರ್ಕಾರಕ್ಕೆ ನೀಡಿದೆ. ಭಾರಿ ಪ್ರಮಾಣದ ದತ್ತಾಂಶವನ್ನು ಸರ್ಕಾರವು ಬಳಸಿಕೊಳ್ಳಬೇಕಾದ ಸಂದರ್ಭ ಸೃಷ್ಟಿಯಾಗಬಹುದು ಮತ್ತು ಅಂತಹ ಸಂದರ್ಭದಲ್ಲಿ ಹೊರಗಿನ ಸಂಸ್ಥೆಯ ನೆರವು ಸರ್ಕಾರಕ್ಕೆ ಬೇಕಾಗಬಹುದು. ಆಗ ಬೇರೆ ಸಂಸ್ಥೆಗಳ ನೆರವನ್ನು ಸರ್ಕಾರ ಪಡೆಯಬೇಕಾಗುತ್ತದೆ ಎಂಬ ಕಾರಣಕ್ಕೆ ಈ ಅವಕಾಶವನ್ನು ಸರ್ಕಾರಕ್ಕೆ ನೀಡಲಾಗಿದೆ. ಇದು ವೈಯಕ್ತಿಕ ದತ್ತಾಂಶ ಗೋಪ್ಯತೆ ಮತ್ತು ಖಾಸಗಿತನದ ಹಕ್ಕಿನ ಉಲ್ಲಂಘನೆ ಆಗುತ್ತದೆ.

ಜನರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಸ್ವತಂತ್ರ ನಿಯಂತ್ರಣ ವ್ಯವಸ್ಥೆಗೆ ಕಾಯ್ದೆಯು ಅವಕಾಶ ಕಲ್ಪಿಸಿಲ್ಲ. ದತ್ತಾಂಶ ಸಂರಕ್ಷಣಾ ಮಂಡಳಿ ಸ್ವಾಯತ್ತ ಪ್ರಾಧಿಕಾರ ಆಗಿಲ್ಲ. ಇದರ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸುವ ಮತ್ತು ಸೇವಾ ಷರತ್ತುಗಳನ್ನು ನಿರ್ಧರಿಸುವ ಅಧಿಕಾರವನ್ನು ಕಾಯ್ದೆಯು ಸರ್ಕಾರದ ಕೈಯಲ್ಲಿಯೇ ಇರಿಸಿದೆ. ಹಾಗೆಯೇ ಸದಸ್ಯರ ಕಡ್ಡಾಯ ನಿವೃತ್ತಿ ಮತ್ತು ನಿಬಂಧನೆಗಳನ್ನು ಸರ್ಕಾರವೇ ನಿರ್ಧರಿಸಲಿದೆ. ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯನ್ನು ಸರ್ಕಾರವು ಹಲವು ನಿರ್ಧಾರಗಳ ಮೂಲಕ ಈಗಾಗಲೇ ದುರ್ಬಲಗೊಳಿಸಿದೆ. ಈಗಿನ ಕಾಯ್ದೆಯು ಈ ಆರ್‌ಟಿಐಗೆ ಮಾರಣಾಂತಿಕ ಹೊಡೆತ ಕೊಟ್ಟಿದೆ. ಸಾರ್ವಜನಿಕ ಹುದ್ದೆಯಲ್ಲಿ ಇರುವವರ ವೈಯಕ್ತಿಕ ಮಾಹಿತಿಯನ್ನು ಸಾರ್ವಜನಿಕ ಹಿತಾಸಕ್ತಿಯ ಕಾರಣಕ್ಕೆ ಬಹಿರಂಗಪಡಿಸಬೇಕಾದ ಅಗತ್ಯ ಇದ್ದರೂ ಅದನ್ನು ಬಹಿರಂಗಪಡಿಸುವುದನ್ನು ನಿರಾಕರಿಸಲು ಅವಕಾಶ ಕಲ್ಪಿಸಿ ಆರ್‌ಟಿಐ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಸಾರ್ವಜನಿಕ ಜೀವನದಲ್ಲಿ ಅಥವಾ ಸರ್ಕಾರದ ಹುದ್ದೆಯಲ್ಲಿ ಇರುವವರಿಗೆ ಕೂಡ ಖಾಸಗಿತನವು ಮೂಲಭೂತ ಹಕ್ಕು ಎಂದು ಸರ್ಕಾರವು ಸಮಜಾಯಿಷಿ ನೀಡಿದೆ. ಸರ್ಕಾರದ ಹುದ್ದೆಯಲ್ಲಿ ಇರುವವರ ಖಾಸಗಿತನದ ಹಕ್ಕಿನ ಬಗ್ಗೆ ಸರ್ಕಾರ ಹೊಂದಿರುವ ಗೌರವವು ಜನರ ಖಾಸಗಿತನದ ಹಕ್ಕಿಗೂ ವಿಸ್ತರಣೆ ಆಗುವುದಿಲ್ಲ ಎಂಬುದು ಮಾತ್ರ ವಿರೋಧಾಭಾಸಕರ.

ದಿನದ ಟ್ವೀಟ್

ಆನೆ- ಬಿಳಿಯಾನೆ!
ಗಜ ಗಣತಿಯ ಪ್ರಕಾರ, ನಮ್ಮ ರಾಜ್ಯದಲ್ಲೇ ಅತ್ಯಂತ ಹೆಚ್ಚು ಆನೆ! ಇದರಲ್ಲಿ ಸರ್ಕಾರದ ಬಿಳಿಯಾನೆಗಳನ್ನೂ ಸೇರಿಸಿಲ್ಲ ತಾನೆ?
ಎಚ್.ಡುಂಡಿರಾಜ್, ಕವಿ

ಕಿಡಿನುಡಿ

ಪೆಹಲಾ ವೋಟ್ ಅಂತೆ. ಹೀಗಂದ್ರೆ ಏನು? ಉತ್ತರ ಪ್ರದೇಶದಲ್ಲಿ ಕಾರ್ಯಕ್ರಮ ಮಾಡ್ತಿದ್ದೀರ?
(ರಾಜ್ಯ ಯುವ ಕಾಂಗ್ರೆಸ್ ಹಮ್ಮಿಕೊಂಡಿರುವ 'ಪೆಹಲಾ ವೋಟ್' ಹೆಸರಿನ ಅಭಿಯಾನಕ್ಕೆ ಪ್ರತಿಕ್ರಿಯೆ)
ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 14-8-1998

• ಸೂಕ್ತ ನಿರ್ಧಾರ ಕೈಗೊಳ್ಳಲು ಜಯಾಗೆ ಅಧಿಕಾರ: ಸದ್ಯಕ್ಕೆ ಪಾರಾದ ಕೇಂದ್ರ ಸರ್ಕಾರ

ಚೆನ್ನೈ, ಆಗಸ್ಟ್ 13 (ಪಿಟಿಐ, ಯುಎನ್ಐ)– 'ಸೂಕ್ತ ಸಮಯದಲ್ಲಿ ತಕ್ಕ ನಿರ್ಧಾರ ಕೈಗೊಳ್ಳಲು ಮಿತ್ರಪಕ್ಷಗಳು ಅಣ್ಣಾ ಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಅವರಿಗೆ ಅಧಿಕಾರ ನೀಡಿದ್ದರೂ ಇಂದು ಕೇಂದ್ರದ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳಲಿಲ್ಲ.

'ನಮ್ಮ ಸಚಿವರನ್ನು ಸಂಪುಟದಿಂದ ಹಿಂದಕ್ಕೆ ಕರೆಸಿಕೊಳ್ಳುವ ಪ್ರಶ್ನೆ ಈಗ ಉದ್ಭವಿಸುವುದೇ ಇಲ್ಲ' ಎಂದು ತಮಿಳಗ ರಾಜೀವ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ವಿ. ರಾಮಮೂರ್ತಿ ಅವರು ಅಣ್ಣಾ ಡಿಎಂಕೆ ಹಾಗೂ ಮಿತ್ರ ಪಕ್ಷಗಳ 90 ನಿಮಿಷಗಳ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಅಸಮಾಧಾನ ಸೂಚಿಸುವ ಕನಿಷ್ಠ ಕ್ರಮವಾಗಿ ಕೇಂದ್ರ ಸರ್ಕಾರದಲ್ಲಿರುವ ತಮಿಳುನಾಡಿನ ಸಚಿವರನ್ನು ರಾಜೀನಾಮೆ ಕೊಡುವಂತೆ ಜಯಲಲಿತಾ ಕೋರುವರು ಎಂದು ಈ ಮುನ್ನ ಭಾರಿ ಊಹಾಪೋಹ ಕೇಳಿಬಂದಿದ್ದವು.

• ಅಧಿಕಾರ ತ್ಯಾಗ: ಗೌಡರ ಕರೆಗೆ ಶಾಸಕರ ವಿರೋಧ

ಬೆಂಗಳೂರು, ಆಗಸ್ಟ್ 13– ಜನತಾ ದಳವನ್ನು ಸಂಘಟಿಸಲು ಹಾಗೂ ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಅಧಿಕಾರ ತ್ಯಾಗ ಮಾಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ದಳದ ಶಾಸಕಾಂಗ ಪಕ್ಷದ ಸಭೆಯಲ್ಲಿ ಇಂದು ಮಾಡಿದ ಸಲಹೆಗೆ ಬಹುತೇಕ ಶಾಸಕರು ವಿರೋಧ ವ್ಯಕ್ತಪಡಿಸಿದ್ದಾರೆ.

ಕೆಲವು ಸಚಿವರನ್ನು ಸಂಪುಟದಿಂದ ಕೈಬಿಡುವುದರಿಂದ ಇಲ್ಲವೇ ಸಂಪುಟಕ್ಕೆ ಕೆಲವರನ್ನು ತೆಗೆದುಕೊಳ್ಳುವುದರಿಂದ ಪಕ್ಷವನ್ನು ಸಂಘಟಿಸಲು ಅಥವಾ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಸಚಿವರು ಹಾಗೂ ಶಾಸಕರು ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸಲು ಪ್ರಯತ್ನಿಸಬೇಕು. ಅಧಿಕಾರಶಾಹಿಗೆ ಬಿಸಿ ಮುಟ್ಟಿಸುವ ಮೂಲಕ ಆಡಳಿತ ಯಂತ್ರ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡಬೇಕು ಎಂದು ಸಭೆಯಲ್ಲಿ ಮಾತನಾಡಿದ ಹಲವು ಶಾಸಕರು ಸಲಹೆ ಮಾಡಿದರೆಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 14-8-1973

• ಮುಂಬೈ- ಪುಣೆ ಮುಖಂಡರಿಂದ ಪ್ರಚೋದನೆ: ಬೆಳಗಾವಿ ಕಬಳಿಸಲು ಶಿವಸೇನೆ ಸಮರ ಸನ್ನಾಹ

ಬೆಳಗಾವಿ, ಆಗಸ್ಟ್ 13– ಗಡಿ ಪ್ರಶ್ನೆಯ ವಿಚಾರದಲ್ಲಿ ಜನತೆಯನ್ನು ಪ್ರಚೋದಿಸಬಾರದೆಂದು ಸಂಸತ್ತಿನಲ್ಲಿ ಸಚಿವ ಕೃಷ್ಣಚಂದ್ರ ಪಂತ್ ಅವರು ಮಾಡಿದ ಮನವಿಯನ್ನು ಅಲಕ್ಷಿಸಿ, ಮುಂಬೈ ಮತ್ತು ಪುಣೆ ಮೇಯರ್ ಅವರು ಗಡಿ ವಿಭಾಗದ ಮಹಾರಾಷ್ಟ್ರೀಯರನ್ನು ಚಳವಳಿಯ ಮಾರ್ಗಕ್ಕೆಳೆಸಲು ಪ್ರಚೋದನೆ ಕಾರ್ಯದಲ್ಲಿ ತೊಡಗಿದ್ದಾರೆ.

ಬೆಳಗಾವಿಯ ಸಮಸ್ಯೆ ಬಗೆಹರಿಯದಿದ್ದರೆ ಶಿವಸೇನೆ ಚಳವಳಿ ನಡೆಸುವುದೆಂದು ಮುಂಬೈ ಮೇಯರ್ ಬೆದರಿಕೆ ಹಾಕಿದ್ದರೆ, ಗಡಿ ಮರಾಠಿಗರು ಹೋರಾಟವನ್ನು ಚುರುಕುಗೊಳಿಸಬೇಕೆಂದು ಪುಣೆಯ ಮುನಿಸಿಪಲ್ ಕಾರ್ಪೊರೇಷನ್ ಮೇಯರ್ ಶಾಂತಾರಾಮ್ ದಿವೇಕರ್ ಇಲ್ಲಿ ನಿನ್ನೆ ರಾತ್ರಿ ಕರೆ ನೀಡಿದ್ದಾರೆ.

• ನವದೆಹಲಿಯಲ್ಲಿ ಮೈಸೂರು ಸಚಿವರಿಂದ 'ಔತಣಕೂಟಕ್ಕೆ' ರಾಜ್ಯದ ಸಂಸದರ ವಿರೋಧ

ನವದೆಹಲಿ, ಆಗಸ್ಟ್ 13– ಮೈಸೂರು ರಾಜ್ಯದ ಸಂಪುಟ ಸಹೋದ್ಯೋಗಿಗಳು ರಾಜಧಾನಿಗೆ ಅಧಿಕೃತ ಭೇಟಿ ನೀಡಿದ ಸಮಯದಲ್ಲಿ ಸಂಸತ್ ಸದಸ್ಯರಾಗಲಿ, ಬೇರೆ ಯಾರಿಗೇ ಆಗಲಿ ಭೋಜನಕೂಟಗಳನ್ನು ಏರ್ಪಡಿಸುವುದನ್ನು ಪ್ರೋತ್ಸಾಹಿಸದಂತೆ ಮೈಸೂರು ಮುಖ್ಯಮಂತ್ರಿಯವರನ್ನು ಕೋರಲು ರಾಜ್ಯದ ಸಂಸತ್ ಸದಸ್ಯರು ಇಂದು ಇಲ್ಲಿ ಸರ್ವಾನುಮತದಿಂದ ನಿರ್ಧರಿಸಿದರು.

ಈ ಬಗ್ಗೆ ಮುಖ್ಯಮಂತ್ರಿ ಅರಸು ಅವರಿಗೆ ಪತ್ರ ಬರೆಯುವಂತೆ 13 ಮಂದಿ ಸಂಸದರು ಭಾಗವಹಿಸಿದ್ದ ಈ ಸಭೆಯು, ಸಂಚಾಲಕ ಎಸ್.ಬಿ. ಪಾಟೀಲರನ್ನು ಕೋರಿತು.

ರಾಜಧಾನಿಯಿಂದ ಹೊರಗಿರುವ ಕ್ರೀಡಾಂಗಣಗಳಲ್ಲೂ ಪಂದ್ಯಗಳು ನಡೆಯಲಿ

ರಾಜ್ಯ ಕ್ರಿಕೆಟ್ ಬೆಂಗಳೂರು ಕೇಂದ್ರಿತವೇ?

ವಿಶ್ಲೇಷಣೆ
ಗಿರೀಶ ದೊಡ್ಡಮನಿ

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನಡೆ, ಕ್ರಿಕೆಟ್ ಅಭಿಮಾನಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ದೇಸಿ ಕ್ರಿಕೆಟ್ ಟೂರ್ನಿ ಪಂದ್ಯಗಳನ್ನು ಒಂದೇ ಕಡೆ ಆಯೋಜಿಸುತ್ತಿರುವುದು ಇದಕ್ಕೆ ಕಾರಣ. ರಣಜಿ ಟ್ರೋಫಿ ಹಾಗೂ ದುಲೀಪ್ ಟ್ರೋಫಿ ಟೂರ್ನಿಗಳ ಪಂದ್ಯಗಳನ್ನು ಬೆಂಗಳೂರಿನಲ್ಲೇ ಆಯೋಜಿಸಲಾಗಿತ್ತು. ಈಗ ನಡೆಯುತ್ತಿರುವ ಮಹಾರಾಜ ಟ್ರೋಫಿ ಪಂದ್ಯಗಳೂ ಬೆಂಗಳೂರಿನಲ್ಲೇ ಕೇಂದ್ರೀಕೃತಗೊಂಡಿರುವುದು ಕ್ರೀಡಾ ಅಭಿಮಾನಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ರಾಜ್ಯದ ಬೇರೆ ನಗರಗಳಲ್ಲಿರುವ ಕ್ರೀಡಾಂಗಣಗಳಲ್ಲಿ ಪಂದ್ಯ ನಡೆಸದಿರುವುದು ಅಭಿಮಾನಿಗಳಲ್ಲಿ ಸಿಟ್ಟು ಮೂಡಿಸಿದೆ. ಅಲ್ಲದೆ, ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಆಟಗಾರರ ಹರಾಜು ಪ್ರಕ್ರಿಯೆ ಮತ್ತಿತರ ಕಾರ್ಯಕ್ರಮಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಿಲ್ಲ ಎಂಬ ಟೀಕೆಗಳು ವ್ಯಕ್ತವಾಗಿವೆ.

ಬೆಂಗಳೂರಿನಿಂದ ಹೊರಗೆ ಪಂದ್ಯಗಳನ್ನು ಆಯೋಜಿಸದಿರಲು ಸಂಸ್ಥೆಯು ಕಾರಣಗಳನ್ನು ನೀಡಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಬ್ ಏರ್ ಸಿಸ್ಟಮ್ ತಂತ್ರಜ್ಞಾನ ಇರುವುದರಿಂದ ಮಳೆ ಬಂದು ನಿಂತ ಮೇಲೆ ಅಲ್ಪ ಸಮಯದಲ್ಲಿ ಪಂದ್ಯ ಮುಂದುವರಿಸಲು ಅನುಕೂಲ ಎಂಬುದು ಒಂದು ಕಾರಣವಾದರೆ, ಪಂದ್ಯಗಳ ನೇರ ಪ್ರಸಾರದ ಹಕ್ಕು ಪಡೆದ ವಾಹಿನಿಯವರ ಸರಂಜಾಮು ಸಾಗಣೆಗೆ ಅಡಚಣೆಯಾಗುತ್ತದೆ ಎಂಬುದು ಇನ್ನೊಂದು ಕಾರಣ ಎನ್ನುತ್ತಾರೆ.

ಆದರೆ ಕೆಲವು ಫ್ರ್ಯಾಂಚೈಸಿಗಳ ಮಾಲೀಕರಿಗೆ ಈ ಕಾರಣಗಳ ಬಗ್ಗೆ ಪೂರ್ಣ ಸಹಮತವಿಲ್ಲ. ಬೇರೆ ನಗರಗಳಲ್ಲಿ ಈ ಹಿಂದೆಗಿಂತಲೂ ಈಗ ಸಾರಿಗೆ ಮತ್ತು ಸೌಲಭ್ಯಗಳು ಉತ್ತಮವಾಗಿವೆ. ಆದ್ದರಿಂದ ಪ್ರಸಾರಕ ಸಂಸ್ಥೆಗಳಿಗೆ ಹೇಗೆ ಸಮಸ್ಯೆಯಾಗುತ್ತದೆ ಎಂದು ಪ್ರಶ್ನಿಸುತ್ತಾರೆ. ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳಿಗೆ ಮಾತ್ರ ಜನರು ಕಿಕ್ಕಿರಿದು ಸೇರುತ್ತಾರೆ. ಉಳಿದ ಪಂದ್ಯಗಳಲ್ಲಿ ಆಸನಗಳು ಖಾಲಿ ಇರುತ್ತವೆ. ಸಣ್ಣ ನಗರಗಳಲ್ಲಿ ಜನರು ಕ್ರೀಡಾಂಗಣಕ್ಕೆ ಬರುತ್ತಾರೆ. ಆಗ ಪಂದ್ಯಗಳಿಗೆ ವೈಭವದ ಕಳೆ ಇರುತ್ತದೆ, ಪ್ರಾಯೋಜಕರಿಗೂ ಹೆಚ್ಚು ಪ್ರಚಾರ ಲಭಿಸುತ್ತದೆ ಎಂದೂ ಫ್ರ್ಯಾಂಚೈಸಿ ಮಾಲೀಕರು ಹೇಳುತ್ತಾರೆ.

ಬರೋಬ್ಬರಿ ಒಂದು ವರ್ಷದ ಹಿಂದೆ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ಟೂರ್ನಿಯ ಉದ್ಘಾಟನೆ ನಡೆದಿತ್ತು. ಇಲ್ಲಿ ನಡೆದಿದ್ದ ಲೀಗ್ ಹಂತದ ಹದಿನೆಂಟು ಪಂದ್ಯಗಳಿಗೂ ಪ್ರೇಕ್ಷಕರು ಕಿಕ್ಕಿರಿದು ಸೇರಿದ್ದರು. ಅದೂ ಟಿಕೆಟ್ ಖರೀದಿಸಿ!

ಅದೇ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಬೆಂಗಳೂರಿನಲ್ಲಿ ನಡೆದಾಗ ಅಭಿಮಾನಿಗಳ ಸಂಖ್ಯೆ ಅಷ್ಟೇನೂ ಹೆಚ್ಚಿರಲಿಲ್ಲ. ಕೋವಿಡ್ ಬಿಕ್ಕಟ್ಟಿಗಿಂತ ಮೊದಲು ನಡೆದಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯಗಳು ಮೈಸೂರು, ಹುಬ್ಬಳ್ಳಿಯಲ್ಲಿ ಆಯೋಜನೆಗೊಂಡಾಗ ಟಿ.ವಿ ನೇರಪ್ರಸಾರ ಕೂಡ ಮಾಡಲಾಗಿತ್ತು. ಸ್ಥಳೀಯ ಸಂಸ್ಕೃತಿ, ಆಹಾರ ಮತ್ತು ಜನಜೀವನವನ್ನು ಅಧಿಕೃತ ಪ್ರಸಾರಕರು ಸಾಕ್ಷ್ಯಚಿತ್ರ ಮಾಡಿದ್ದರು. ಮೈಸೂರು ಕುಸ್ತಿ, ಹುಬ್ಬಳ್ಳಿ ಊಟದ ಗಮ್ಮತ್ತುಗಳ ವಿಡಿಯೊಗಳು ಈಗಲೂ ಜನಪ್ರಿಯ.

ಮಹಾರಾಜ ಟ್ರೋಫಿ ಹೋಗಲಿ; ಈಚೆಗೆ ದುಲೀಪ್ ಟ್ರೋಫಿ ಮತ್ತು ಹೋದ ವರ್ಷದ ಋತುವಿನ ರಣಜಿ ಟ್ರೋಫಿ ಪಂದ್ಯಗಳು ಬೆಂಗಳೂರಿನಲ್ಲಿಯೇ ನಡೆದವು. ಅದರಲ್ಲಿ ಬಹುತೇಕ ಪಂದ್ಯಗಳನ್ನು ಟಿ.ವಿಯಲ್ಲಿ ನೇರಪ್ರಸಾರ ಮಾಡಿರಲಿಲ್ಲ. ಅಂತಹ ಪಂದ್ಯಗಳನ್ನೂ ಗ್ರಾಮಾಂತರ ಪ್ರದೇಶಗಳ ಕ್ರೀಡಾಂಗಣಗಳಲ್ಲಿ ನಡೆಸದಿರಲು ಕಾರಣವೇನು?

ಮಾಜಿ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಅವರು ಕೆಎಸ್‌ಸಿಎ ಪದಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಬೆಂಗಳೂರು ಹೊರವಲಯದ ಆಲೂರು, ಹುಬ್ಬಳ್ಳಿ, ಮೈಸೂರು, ಬೆಳಗಾವಿ ಮತ್ತು ಶಿವಮೊಗ್ಗ ಕ್ರೀಡಾಂಗಣಗಳ ಅಭಿವೃದ್ಧಿಗೆ ಹೆಚ್ಚು ಶ್ರಮವಹಿಸಿದ್ದರು. ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರ ಅಧಿಕಾರದ ಅವಧಿಯಲ್ಲಿಯೂ ಬೇರೆ ಊರುಗಳಲ್ಲಿ ಮೂಲ ಸೌಲಭ್ಯಗಳ ಅಭಿವೃದ್ಧಿಯನ್ನು ಮುಂದುವರಿಸಿದ್ದರು.

ಇದರಿಂದಾಗಿ ಅಲ್ಲಿಯ ಸ್ಥಳೀಯ ಆಟಗಾರರಿಗೆ ಟರ್ಫ್ ಮೈದಾನದಲ್ಲಿ ಆಡುವ ಮತ್ತು ಅಭ್ಯಾಸ ಮಾಡುವ ಅವಕಾಶ ಸಿಕ್ಕಿತ್ತು. ಅಲ್ಲಿ ನಡೆದ ಪ್ರಥಮ ದರ್ಜೆ ಪಂದ್ಯಗಳನ್ನು ನೋಡಿ ಕಲಿಯುವ ಅವಕಾಶವೂ ಇತ್ತು. ಅಲ್ಲದೆ, ಆಯಾ ವಲಯದಲ್ಲಿರುವ ಅಂಪೈರ್, ಸ್ಕೋರರ್ ಮತ್ತು ಕ್ರೀಡಾಂಗಣ ಸಿಬ್ಬಂದಿಗೂ ಕಾರ್ಯನಿರ್ವಹಿಸುವ ಅನುಭವ ಲಭಿಸುತ್ತಿತ್ತು. ದಶಕಗಳ ಹಿಂದೆ ಬೆಂಗಳೂರು ಕೇಂದ್ರಿತವಾಗಿದ್ದ ಕ್ರಿಕೆಟ್‌ನಿಂದಾಗಿ ಉತ್ತರ ಕರ್ನಾಟಕದ ಪ್ರತಿಭೆಗಳು ಗೋವಾ ಮತ್ತಿತರ ತಂಡಗಳತ್ತ ಮುಖ ಮಾಡುತ್ತಿದ್ದವು. ಎರಡನೇ ಹಂತದ ನಗರಗಳಲ್ಲಿ ಸೌಲಭ್ಯ ವೃದ್ಧಿಯಿಂದಾಗಿ ಕೊಂಚ ಪರಿಹಾರ ಸಿಕ್ಕಿತ್ತು. ರೋನಿತ್ ಮೋರೆ, ಶಿಶಿರ್ ಭವಾನೆ, ರೋಹನ್ ಕದಂ, ಪವನ್ ದೇಶಪಾಂಡೆ ಮತ್ತು ವಿದ್ಯಾಧರ್ ಪಾಟೀಲರಂತಹ ಪ್ರತಿಭಾನ್ವಿತರು ಬೆಳಕಿಗೆ ಬಂದರು.

ಹುಬ್ಬಳ್ಳಿಯಲ್ಲಿ 2022ರಲ್ಲಿ ಭಾರತ ಎ ಮತ್ತು ನ್ಯೂಜಿಲೆಂಡ್ ಎ ನಡುವಣ ನಾಲ್ಕು ದಿನಗಳ ಪಂದ್ಯ ನಡೆದಿತ್ತು. ಎಲ್ಲ ದಿನವೂ ಪ್ರೇಕ್ಷಕರ ಗ್ಯಾಲರಿ ಭರ್ತಿಯಾಗಿತ್ತು. ದಶಕದ ಹಿಂದೆ ಮೈಸೂರಿನಲ್ಲಿ ನಡೆದ ಕಲೆ ಪಂದ್ಯಗಳಲ್ಲಿ ವಿವಿಎಸ್ ಲಕ್ಷ್ಮಣ್, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್ ಮತ್ತು ವೀರೇಂದ್ರ ಸೆಹ್ವಾಗ್ ಆಡಿದ್ದರು. ಶಿವಮೊಗ್ಗದಲ್ಲಿ ನಡೆದ ರಣಜಿ ಪಂದ್ಯದಲ್ಲಿ ಆಡುತ್ತಿದ್ದ ಸಂದರ್ಭದಲ್ಲಿಯೇ ಹೈದರಾಬಾದಿನ ಮೊಹಮ್ಮದ್ ಸಿರಾಜ್ ಅವರಿಗೆ ಭಾರತ ತಂಡದ ಬುಲಾವ್ ಬಂದಿತ್ತು. ಸದ್ಯ ಅವರು ರಾಷ್ಟ್ರೀಯ ತಂಡದ ಪ್ರಮುಖ ಬೌಲರ್ ಆಗಿದ್ದಾರೆ. ಇಂತಹ ಪಂದ್ಯಗಳು ನಡೆದಾಗ ತಾರಾ ವರ್ಚಸ್ಸಿನ ಆಟಗಾರರನ್ನು ಹತ್ತಿರದಿಂದ ನೋಡುವ ಅಭಿಮಾನಿಗಳ ಆಸೆಯೂ ಈಡೇರುತ್ತದೆ.

ಇದನ್ನು ಈಗಲೂ ಶಿವಮೊಗ್ಗದ ಅಭಿಮಾನಿಗಳು ನೆನಪಿಸಿಕೊಂಡು ಪುಳಕಿತರಾಗುತ್ತಾರೆ. ಇದೀಗ ಕಾರವಾರ, ಹಾಸನ, ಕೋಲಾರ, ಮಂಗಳೂರು, ಗದಗ ಮತ್ತು ರಾಯಚೂರು ಸೇರಿದಂತೆ ರಾಜ್ಯದ ಹಲವೆಡೆ ಕ್ರೀಡಾಂಗಣಗಳನ್ನು ಕಟ್ಟಲು ಯೋಜನೆ ರೂಪಿಸಲಾಗಿದೆ.

'ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕ್ರಿಕೆಟ್ ಆಡುವವರ ಸಂಖ್ಯೆ ಹೆಚ್ಚುತ್ತಿದೆ. ಸೌಲಭ್ಯಗಳನ್ನು ಒದಗಿಸಬೇಕಿದೆ. ಅದಕ್ಕಾಗಿ ಈ ಕ್ರೀಡಾಂಗಣಗಳ ಅವಶ್ಯಕತೆ ಇದೆ. ಬೆಂಗಳೂರಿನ ಹವಾಗುಣ ಮತ್ತು ಸೌಲಭ್ಯಗಳಿಂದಾಗಿ ಎಲ್ಲರಿಗೂ ಇಲ್ಲಿಯ ಕ್ರೀಡಾಂಗಣಗಳು ಬೇಕು. ಇದೀಗ ನೆದರ್ಲೆಂಡ್ಸ್ ದೇಶದ ತಂಡ, ಬರೋಡಾ, ಗುಜರಾತ್, ಛತ್ತೀಸಗಢ ಮತ್ತು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಯುಪಿ ವಾರಿಯರ್ಸ್ ತಂಡಗಳು ನಗರದ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿವೆ. ಆದ್ದರಿಂದ ಹೆಚ್ಚು ಸೌಲಭ್ಯಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಹೇಳುತ್ತಾರೆ.

ಇಂಗ್ಲಿಷ್ ಕೌಂಟಿ ತಂಡಗಳೂ ಇಲ್ಲಿಗೆ ಬಂದು ಅಭ್ಯಾಸ ನಡೆಸುವ ಕುರಿತು ಒಲವು ತೋರಿವೆಯಂತೆ. ಬೆಂಗಳೂರಿನ ಕ್ರೀಡಾಂಗಣಗಳು ಇಷ್ಟೊಂದು ಭರ್ತಿಯಾಗಿದ್ದರೂ ದೇಶಿ ಪಂದ್ಯಗಳನ್ನು ಇಲ್ಲಿಯೇ ಆಡಿಸುವುದಕ್ಕಿಂತ ಹೊರಗಿನ ಕ್ರೀಡಾಂಗಣಗಳಲ್ಲಿ ಆಯೋಜಿಸುವುದು ಸೂಕ್ತವಲ್ಲವೇ?

'ಗ್ರಾಮಾಂತರ ಪ್ರತಿಭೆಗಳಿಗೆ ಅವಕಾಶ ಕೊಡುವುದಕ್ಕೆ ಬದ್ಧ' ಎಂದು ಹೇಳುವ ಕೆಎಸ್‌ಸಿಎ, ತನ್ನದೇ ಸುಪರ್ದಿಯಲ್ಲಿರುವ ಕ್ರೀಡಾಂಗಣಗಳ ಸೂಕ್ತ ಬಳಕೆಗೂ ಆದ್ಯತೆ ನೀಡಬೇಕಲ್ಲವೇ? ಗ್ರಾಮಾಂತರ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯದಿದ್ದರೆ ನಿರ್ವಹಣೆ ವೆಚ್ಚದ ಭಾರವೂ ಸಂಸ್ಥೆಯ ಮೇಲೆ ಬೀಳುತ್ತದೆ.

ತಮಿಳುನಾಡಿನಲ್ಲಿ ಆರಂಭವಾಗಲಿರುವ ಬುಚ್ಚಿಬಾಬು ಕ್ರಿಕೆಟ್ ಟೂರ್ನಿಯ ಎಲ್ಲ ಪಂದ್ಯಗಳೂ ರಾಜಧಾನಿ ಚೆನ್ನೈನಿಂದ ಹೊರಗಿನ ಊರುಗಳಲ್ಲಿ ನಡೆಯಲಿವೆ. ಅಲ್ಲಿಯ ಕ್ರಿಕೆಟ್ ಸಂಸ್ಥೆ ಮತ್ತು ಆಟಗಾರರ ತಮಿಳುಪ್ರೇಮ ಬೇರೆಯವರಿಗೂ ಮಾದರಿ.

ಕರ್ನಾಟಕ ತಂಡದ ಮನೀಷ್ ಪಾಂಡೆ, ಮಯಂಕ್ ಅಗರವಾಲ್, ಕರುಣ್ ನಾಯರ್ ಮತ್ತು ದೇವದತ್ತ ಪಡಿಕ್ಕಲ್ ಅವರ ಮನೆಗಳ ಭಾಷೆ ಕನ್ನಡ ಅಲ್ಲ. ಆದರೂ ಅವರೆಲ್ಲರೂ ಕನ್ನಡ ಮಾತನಾಡುತ್ತಾರೆ. ಕೆಲವು ಐಪಿಎಲ್ ಪಂದ್ಯಗಳಲ್ಲಿ ಅವರ ಕನ್ನಡ ಸಂಭಾಷಣೆಗಳು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡಿದಾಗ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಸ್ಟಾರ್ ಸ್ಪೋರ್ಟ್ಸ್ ಕನ್ನಡ ಮತ್ತು ಜಿಯೊ ಸಿನಿಮಾ ಆ್ಯಪ್‌ಗಳ ಕನ್ನಡ ಕಾಮೆಂಟ್ರಿಯಲ್ಲಿ ಕೆಲವು ಖ್ಯಾತನಾಮ ಆಟಗಾರರೂ ಮಿಂಚುತ್ತಿದ್ದಾರೆ. ಆದರೂ ಕೆಎಸ್‌ಸಿಎ ಮಾತ್ರ ಕನ್ನಡದ ಬಳಕೆಗೆ ಹಿಂಜರಿಯುವುದು ಯಾಕೋ ಗೊತ್ತಿಲ್ಲ?

ಚುರುಮುರಿ

ಕಮಲ ಪದಕೋಶ!

• ಸುಮಂಗಲಾ

'ಹಾರುವ ವಿಮಾನ, ಹಾರುವ ಹಕ್ಕಿ, ಹಾರುವ ತಟ್ಟೆ... ಇವೆಲ್ಲ ನಾ ಕೇಳೀನಿ. ಆದರ ಇದೇನಿದು ಫ್ಲೈಯಿಂಗ್ ಕಿಸ್? ಕಿಸ್ ಹೆಂಗ ಹಾರತದ? ಅದಕ್ಕೇನು ರೆಕ್ಕೆ ಅದಾವೇನು?' ಬೆಕ್ಕಣ್ಣ ಬಲು ಗಂಭೀರವಾಗಿಯೇ ಕೇಳಿತು.

'ಕಿಸ್ ಹಾರಂಗಿಲ್ಲಲೇ. ದೂರದಿಂದ ಮುತ್ತು ಕೊಟ್ಟಂಗೆ ಸನ್ನೆ ಮಾಡಿ, ಮುತ್ತು ಹಾರಿಸತಾರ. ಅದಕ್ಕೆ ಫ್ಲೈಯಿಂಗ್ ಕಿಸ್ ಅಂತಾರ' ಎಂದು ಬೆಕ್ಕಣ್ಣನಿಗೆ ಒಂದು ಫ್ಲೈಯಿಂಗ್ ಕಿಸ್ ಕೊಟ್ಟೆ.

'ನೀ ನನಗೇ ಕೊಡಾಕೆ ಹತ್ತೀಯಲ್ಲ, ಎಷ್ಟರ ನಾಚಿಕೆಗೆಟ್ಟೀ' ಎಂದು ಮುಖ ಮುಚ್ಚಿಕೊಂಡಿತು.

'ನಾ ಖರೇ ಖರೇ ಕೊಟ್ಟಿಲ್ಲಲೇ... ಹಿಂಗ ಕೊಡ್ತಾರಂತ ತೋರಿಸಿದೆ ಅಷ್ಟೇ! ಅದ್ಸರಿ, ನಿನಗ್ಯಾಕೆ ಈ ವಿಚಾರ? ನೀ ಯಾರಿಗರೆ ಕೊಡಬೇಕೇನ್' ಎಂದು ಕಿಚಾಯಿಸಿದೆ.

'ಅಲ್ಲಾ... ನಮ್ಮ ರಾಹುಲಣ್ಣ ಸಂಸತ್ತಿಗೆ ವಾಪಸು ಬಂದಿದ್ದೇ, ಕಮಲಕ್ಕನ ಮನಿ ಹೆಣ್‌ಮಕ್ಕಳ ಕಡಿಗೆ ನೋಡಿಕೋತ ಹೀಂಗ ಫ್ಲೈಯಿಂಗ್ ಕಿಸ್ ಕೊಟ್ಟಾನಂತ. ಲೋಕಸಭಾ ಸದಸ್ಯತ್ವ ಮರಳಿ ಸಿಕ್ಕ ದಿನವೇ ಹೀಂಗ ಮಾಡೂದೇನ್' ಎಂದು ಅಲವತ್ತುಕೊಂಡಿತು.

'ಮದ್ಲೇ ಕಮಲಕ್ಕನ ಮನಿಯವ್ರು ಹೆಂಗ ಇವನ ಕಾಲಿಡಿದು ಎಳೀಬಕು, ಹೆಂಗ ಮಕಾಡೆ ಮಲಗಿಸಬೇಕು ಅಂತ ಹಗಲು ರಾತ್ರಿ ಯೋಚಿಸಿ, ಹೊಸ ತಂತ್ರ ಹೊಸೀತಿರತಾರೆ. ತೂಕಡಿಸುವರಿಗೆ ಹಾಸಿಗಿ ಹಾಸಿಕೊಟ್ಟಂಗೆ ಇದು'.

'ಮಣಿಪುರದ ದಳ್ಳುರಿ, ಹರಿಯಾಣದ ಕೋಮುಗಲಭೆ ವಿಷಯ ಇವನ್ನೆಲ್ಲ ಮೂಲೆಗೊತ್ತಿ, ಸುಖಾಸುಮ್ಮನೆ ಚರ್ಚೆ ಮಾಡಾಕೆ ಎಂಥ ಘನಗಂಭೀರ ವಿಷಯ ಕೊಟ್ಟಾನ ರಾಹುಲಣ್ಣ ಅಂತ ಕಮಲಕ್ಕನ ಮನಿಯವ್ರು ರಾಹುಲಣ್ಣಂಗೆ ಮನಸ್ಸಿನೊಳಗನೆ ಥ್ಯಾಂಕ್ಸ್ ಹೇಳಾಕೆ ಹತ್ಯಾರಂತ'.

'ಅದಕ್ಕ ನಿಮ್ಮ ರಾಹುಲಣ್ಣಂಗೆ ಹೇಳಲೇ... ಅಂವಾ ಎಲ್ಲೂ ಕಮಲಕ್ಕನ ಮನಿಯವ್ರ ಹೆಸರು ತೆಗೆದು ಮಾತಾಡಬಾರದು. ಕೈಸನ್ನೆ, ಹಾವಭಾವ ಅಂತೂ ಬಿಲ್‌ಕುಲ್ ಮಾಡಬಾರದು ಅಂತ'.

'ಕಮಲಕ್ಕನ ಮನಿಯವರು ಅವನಿಗಾಗಿ ಹೊಸ ಪದಕೋಶ ರಚನೆ ಮಾಡ್ಯಾರೆ. ಅಂವಾ ಸುಮ್ಮನಿದ್ದರೂ ಅದಕ್ಕೊಂದು ಅರ್ಥ ಕೊಟ್ಟು, ಅವನಿಗೆ ಟಾಂಗ್ ಕೊಡತಾರೆ!' ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ಸಂಗತ

ಸ್ವಾತಂತ್ರ್ಯ: ದಿನ ನಿಗದಿಯ ಕಸರತ್ತು

ಭಾರತಕ್ಕೆ ಸ್ವಾತಂತ್ರ್ಯವನ್ನು ಘೋಷಿಸಲು ದಿನಾಂಕ ಆಯ್ಕೆ ಮಾಡಿಕೊಂಡಿದ್ದರಲ್ಲಿಯೂ ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ದರ್ಪವನ್ನೇ ಮೆರೆದಿದ್ದರು!

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಭಾರತದ ಸ್ವಾತಂತ್ರ್ಯೋತ್ಸವವನ್ನು ನಾವೆಲ್ಲರೂ ಆಗಸ್ಟ್ 15ರಂದು ಆಚರಿಸುತ್ತೇವೆ. ಆ ಸಂಭ್ರಮಕ್ಕೆ ಕಾರಣವಾದ ದಿನಾಂಕ ನಿಗದಿಯ ಕಸರತ್ತಿನ ಬಗ್ಗೆ ಅರಿಯುವ ಗೋಜಿಗೆ ನಾವು ಹೋಗುವುದಿಲ್ಲ. ಆ ಬಗ್ಗೆ ಕೇಳಿದರೂ 'ಒಳ್ಳೆ ಕತೆಯಾಯಿತಲ್ಲ, ಬ್ರಿಟಿಷರಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದ್ದು 1947ರ ಆಗಸ್ಟ್ 15ರಂದು, ಆದ್ದರಿಂದ...' ಎಂಬ ಉತ್ತರ ಬರುವುದು ಸಹಜ. ಮತ್ತೆ ಅದೇ ಪ್ರಶ್ನೆ, ಅಂದೇ ಏಕೆ, ಒಂದೆರಡು ದಿನ ಹಿಂದೆ, ಮುಂದೆ ಯಾಕಲ್ಲ?

ನಮಗೆ ಸ್ವಾತಂತ್ರ್ಯ ದೊರಕಿದ್ದು ಬ್ರಿಟಿಷ್ ಪಾರ್ಲಿಮೆಂಟ್ 1947ರ ಫೆಬ್ರುವರಿ 20ರಂದು ಪಾಸು ಮಾಡಿದ ಇಂಡಿಯನ್ ಆ್ಯಕ್ಟ್ ಆಫ್ ಇಂಡಿಪೆಂಡೆನ್ಸ್–1947ರ ಪ್ರಕಾರ. ಆ ಅಧಿನಿಯಮದಲ್ಲಿ ಭಾರತವನ್ನು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಪಾಕಿಸ್ತಾನ್ ಮತ್ತು ರಿಪಬ್ಲಿಕ್ ಆಫ್ ಇಂಡಿಯಾ ಎಂಬ ಎರಡು ರಾಷ್ಟ್ರಗಳನ್ನಾಗಿ ವಿಭಜಿಸುವ ತೀರ್ಮಾನವೂ ಆಗಿಹೋಗಿತ್ತು. ಅದರ ಪ್ರಕಾರ, ಭಾರತ ಮತ್ತು ಪಾಕಿಸ್ತಾನಕ್ಕೆ ಅಧಿಕಾರವನ್ನು ಒಟ್ಟಿಗೇ ಹಸ್ತಾಂತರಿಸಿದ್ದು 1947ರ ಆಗಸ್ಟ್ 15ರಂದು, ಅಂದರೆ ಆಗಸ್ಟ್ 14 ಮತ್ತು 15ರ ನಡುವಿನ ಮಧ್ಯರಾತ್ರಿ. ಹೀಗಾಗಿ ನಾವು ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತೇವೆ. ಪಾಕಿಸ್ತಾನದ ಪ್ರಮಾಣಿತ ಸಮಯವು ಭಾರತೀಯ ಪ್ರಮಾಣಿತ ಸಮಯಕ್ಕಿಂತ (ಐಎಸ್‌ಟಿ) 30 ನಿಮಿಷ ಹಿಂದೆ. ಹೀಗಾಗಿ, ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಮತ್ತು ಅದು ಸ್ವಾತಂತ್ರ್ಯೋತ್ಸವವನ್ನು ಆಚರಿಸುವುದು ಆಗಸ್ಟ್ 14ರಂದು.

ಹಾಗೆ ನೋಡಿದರೆ, ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಲು ಲಾರ್ಡ್ ಮೌಂಟ್‌ಬ್ಯಾಟನ್ ಅವರಿಗೆ ಬ್ರಿಟಿಷ್ ಸಂಸತ್ತು ನಿಗದಿ ಮಾಡಿದ ದಿನಾಂಕ ಜೂನ್ 30, 1948. ಆದರೆ, ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಇಂಥ ಯಾವುದೇ ವಿಳಂಬವನ್ನು ಸಹಿಸಿಕೊಳ್ಳುವ ಮನಃಸ್ಥಿತಿಯಲ್ಲಿ ಇರಲಿಲ್ಲ. ವಿಭಜನೆಯ ವಿಚಾರವನ್ನು ಎತ್ತಿಕೊಂಡು ಆಗಲೇ ದೇಶದ ನಾನಾ ಕಡೆ ಕೋಮು ಹಿಂಸಾಚಾರಗಳು ಭುಗಿಲೆದ್ದಿದ್ದವು. ಇವು ಇನ್ನೂ ಉಲ್ಬಣವಾಗುವ ಸೂಚನೆ ಕಂಡುಬಂದ ಹಿನ್ನೆಲೆಯಲ್ಲಿ ಮೌಂಟ್‌ಬ್ಯಾಟನ್ ಅಧಿಕಾರ ಹಸ್ತಾಂತರದ ದಿನಾಂಕವನ್ನು ಇನ್ನಷ್ಟು ಬೇಗ ಹಾಕಿಕೊಂಡು, ಸ್ವಾತಂತ್ರ್ಯವನ್ನು ಘೋಷಿಸಿದರು.

ಅದಕ್ಕಾಗಿ ಆಗಸ್ಟ್ ಹದಿನೈದನ್ನು ಆಯ್ಕೆ ಮಾಡಿಕೊಂಡಿದ್ದಕ್ಕೂ ಒಂದು ನಿರ್ದಿಷ್ಟ ಕಾರಣವಿದೆ. ಇಂಥ ಮಹತ್ವದ ಒಂದು ಐತಿಹಾಸಿಕ ಘಟನೆಗೆ ಒಂದು ಪ್ರಶಸ್ತ ದಿನವನ್ನು ನಿಗದಿಪಡಿಸುವುದು ಅಗತ್ಯವಲ್ಲವೇ? ಈ ಆಯ್ಕೆಯ ಅವಕಾಶವನ್ನು ಭಾರತೀಯರಿಗೆ ನೀಡದೆ, ಬ್ರಿಟಿಷರೇ ಈ ದಿನವನ್ನು ನಿಗದಿ ಮಾಡಿದರು. 1939- 45ರಲ್ಲಿ ನಡೆದ ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ, ಬ್ರಿಟನ್ನಿನ ಮಿತ್ರರಾಷ್ಟ್ರವಾದ ಯುನೈಟೆಡ್ ಸ್ಟೇಟ್ಸ್ ಆಗಸ್ಟ್ 6 ಮತ್ತು 9ಕ್ಕೆ ಅನುಕ್ರಮವಾಗಿ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬುಗಳನ್ನು ಸಿಡಿಸಿತು. ನಗರಗಳು ನೆಲಸಮವಾದ ನಂತರ ಜಪಾನ್ ಬೇರೆ ದಾರಿ ಕಾಣದೆ ಬ್ರಿಟಿಷರಿಗೆ ಶರಣಾಯಿತು. ಅದು, 1945ರ ಆಗಸ್ಟ್ 15ರಂದು. 1947ರ ಆಗಸ್ಟ್ 15ಕ್ಕೆ ಈ ಘಟನೆಗೆ ಎರಡು ವರ್ಷ. ಈ ಹಿನ್ನೆಲೆಯಲ್ಲಿ ಅಧಿಕಾರ ಹಸ್ತಾಂತರಕ್ಕೆ ಮೌಂಟ್‌ಬ್ಯಾಟನ್ ಈ ದಿನವನ್ನು ಆಯ್ಕೆ ಮಾಡಿಕೊಂಡರು.

ವಿಪರ್ಯಾಸದ ಸಂಗತಿ ಎಂದರೆ, ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯೂ ಸೇರಿದ ಹಾಗೆ ಸರಿಸುಮಾರು 190 ವರ್ಷಗಳವರೆಗೆ ತಾವು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದ ದೇಶಕ್ಕೆ ಕೊನೆಗೂ ಸ್ವಾತಂತ್ರ್ಯವನ್ನು ಘೋಷಿಸಲು ಆಯ್ಕೆ ಮಾಡಿಕೊಂಡಿದ್ದ ದಿನದಲ್ಲಿಯೂ ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ದರ್ಪವನ್ನೇ ಮೆರೆದಿದ್ದರು. ಇದು ಆಗಿನ ಭಾರತೀಯ ನಾಯಕರಿಗೆ ಇಷ್ಟವಾಗಿರಲಿಲ್ಲ. ಆದರೆ, ಅದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು. ಇಲ್ಲಿ, ಇನ್ನೊಂದು ಅಂಶವನ್ನೂ ಗಮನಿಸಬೇಕು.

1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಗಳಿಸಿತು ಎಂದು ಹೇಳಲಾಗುತ್ತದೆ. ಆದರೆ, ಅಂದು ನಾವು ಸಾರ್ವಭೌಮ ರಾಷ್ಟ್ರವಾಗಿರಲಿಲ್ಲ. ನಮ್ಮದೇ ಸಂಸತ್ತು ಇದ್ದರೂ ದೇಶವನ್ನು ಆಳುತ್ತಿದ್ದುದು ಬ್ರಿಟಿಷರ ದಿ ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್– 1935ರ ಪ್ರಕಾರವೇ. ಅಲ್ಲಿಯವರೆಗೆ ಬ್ರಿಟಿಷ್ ವೈಸರಾಯ್ ಆಗಿದ್ದ ಮೌಂಟ್ ಬ್ಯಾಟನ್, ಬ್ರಿಟಿಷ್ ರಾಜರ ಪರವಾಗಿ ನಮ್ಮ ಗವರ್ನರ್ ಜನರಲ್ ಆಗಿ ಮುಂದುವರಿದರು. ಹಾಗಾದರೆ ನಾವು ಆಗ ಸಾವರಿನ್ ಅಥವಾ ಸಾರ್ವಭೌಮ ರಾಷ್ಟ್ರವಾಗಿರಲಿಲ್ಲವೇಕೆ? ಏಕೆಂದರೆ, ನಮಗೆ ಸ್ವಾತಂತ್ರ್ಯ ಸಿಕ್ಕಿದ್ದರೂ ನಮ್ಮ ದೇಶವನ್ನು ನಾವೇ ಆಳಿಕೊಳ್ಳಲು ಅಗತ್ಯ 'ಸಂವಿಧಾನ' ನಮ್ಮಲ್ಲಿ ಇರಲಿಲ್ಲ.



ಭಾರತಕ್ಕೆ ಬೇಕಾದ ಸಂವಿಧಾನವನ್ನು ರಚಿಸಿಕೊಳ್ಳುವ ಕಾರ್ಯವು 1946ರಲ್ಲಿಯೇ ಡಿಸೆಂಬರ್ 6ರಿಂದ ಆರಂಭವಾಗಿತ್ತೇನೋ ನಿಜ. ಆದರೆ ಅದು ಆಗಿನ್ನೂ ಪರಿಪೂರ್ಣವಾಗಿ ಸಿದ್ಧವಾಗಿರಲಿಲ್ಲ. ಭಾರತದ ವಿವಿಧ ಪ್ರದೇಶಗಳಿಂದ ಜನರ ಪರೋಕ್ಷ ಆಯ್ಕೆಯ ಮೂಲಕ ಬಂದ 299 ಜನರ 'ಸಂವಿಧಾನ ರಚನಾ ಸಭೆ'ಯು ಈ ಕಾರ್ಯದಲ್ಲಿ ತೊಡಗಿತ್ತು. 'ಕರಡು ರಚನಾ ಸಮಿತಿ'ಯ ಅಧ್ಯಕ್ಷರಾಗಿದ್ದ ಬಿ.ಆರ್. ಅಂಬೇಡ್ಕರ್ ಅವರು ಭಾರತ ಸಂವಿಧಾನದ ಸಮಗ್ರ ಕರಡನ್ನು ತಯಾರಿಸಿ, ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದ ರಾಜೇಂದ್ರ ಪ್ರಸಾದ್ ಅವರಿಗೆ 1949ರ ನವೆಂಬರ್ 25ರಂದು ಸಲ್ಲಿಸಿದರು. ಮರುದಿನವೇ, ಅಂದರೆ, 1949ರ ನವೆಂಬರ್ 26ರಂದು ಸಂವಿಧಾನ ರಚನಾ ಸಭೆಯಲ್ಲಿ ಸಂವಿಧಾನವು ಅಂಗೀಕಾರವಾಯಿತು (ಆ ದಿನವನ್ನು ನಾವೀಗ ಪ್ರತಿವರ್ಷ 'ರಾಷ್ಟ್ರೀಯ ಸಂವಿಧಾನ ದಿನ'ವೆಂದು ಆಚರಿಸುತ್ತೇವೆ). ಅದು ದೇಶದಲ್ಲಿ ಜಾರಿಗೆ ಬಂದಿದ್ದು 1950ರ ಜ. 26ರಂದು. ಭಾರತವು ತನ್ನದೇ ಆದ ಸಂವಿಧಾನ ಹೊಂದಿರುವ, ಸಾರ್ವಭೌಮ ಜನಸತ್ತಾತ್ಮಕ ಗಣರಾಜ್ಯವಾಗಿ ಹೊಮ್ಮಿದ್ದು ಅದೇ ದಿನ. ಅಂದು ನಾವು ಭಾರತದ ಗಣರಾಜ್ಯೋತ್ಸವವನ್ನು ಆಚರಿಸುತ್ತೇವೆ.

ವಾಚಕರ ವಾಣಿ

ಟೊಮೆಟೊ ಬೆಳೆ: ವಿವೇಚನೆ ಇರಲಿ

ರೈತರು ಲಾಭದ ಆಸೆಗೆ ಟೊಮೆಟೊ ಬೆಳೆಯನ್ನು ಹೆಚ್ಚಾಗಿ ಬೆಳೆಯಲು ಮುಂದಾಗಿದ್ದಾರೆ ಎಂದು ವರದಿಯಾಗಿದೆ. ಈಗ ಟೊಮೆಟೊಗೆ ಅಧಿಕ ಬೆಲೆ ಇರುವುದರಿಂದ, ಎಲ್ಲ ರೈತರೂ ಟೊಮೆಟೊ ನಾಟಿ ಮಾಡಿದರೆ ಕಟಾವಿನ ಸಮಯದಲ್ಲಿ ಉತ್ಪನ್ನ ಹೆಚ್ಚಾಗಿ ಬೆಲೆ ಕುಸಿಯುತ್ತದೆ. ಆಗ ಬೆಳೆಯನ್ನು ಬೀದಿಗೆ ಬಿಸಾಡುವ ಪರಿಸ್ಥಿತಿ ಬರಬಹುದು. ಆದ್ದರಿಂದ ರೈತರು ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಟೊಮೆಟೊ ಬೆಳೆ ಬೆಳೆಯುವ ಬದಲು, ಬೇರೆ ವಿವಿಧ ತರಕಾರಿ, ಹೂವಿನ ಬೆಳೆಗಳನ್ನೂ ಬೆಳೆಯುವುದು ಲಾಭದಾಯಕ. **ಎಚ್.ಆರ್.ಪ್ರಕಾಶ್,** ಕೆ.ಬಿ.ದೊಡ್ಡಿ, ಮಂಡ್ಯ

ಇದೆಂತಹ ರಾಜಕೀಯ ಅಧೋಗತಿ?!

ಮಣಿಪುರದಲ್ಲಿನ ಅಸಹನೆ ಮತ್ತು ಹಿಂಸಾಚಾರವನ್ನು ಪರಿಹರಿಸುವಲ್ಲಿ ಮಣಿಪುರ ಸರ್ಕಾರ ನಿರ್ಲಕ್ಷ್ಯ ತೋರಿಸಿದೆ, ರಾಜ್ಯ ಸರ್ಕಾರದ ವೈಫಲ್ಯವನ್ನು ಕೇಂದ್ರ ಗೃಹ ಇಲಾಖೆ ಸಹ ಗಂಭೀರವಾಗಿ ತೆಗೆದುಕೊಂಡಿಲ್ಲ ಎನ್ನುವುದು ಬಹುಶಃ ವಿರೋಧಪಕ್ಷಗಳ ನಿಲುವಾಗಿತ್ತೋ ಏನೋ. ಆದರೆ ಈ ನಾಯಕರು ವಿಷಯವನ್ನು ಸಮಂಜಸವಾಗಿ, ಸಮರ್ಥವಾಗಿ ಪ್ರತಿಪಾದಿಸಲಿಲ್ಲ! ಘಟನಾ ಸ್ಥಳಗಳಿಗೆ ಖುದ್ದು ಭೇಟಿ ನೀಡಿದ್ದಾಗಿ ಕೆಲವರು ಹೇಳಿಕೊಂಡರಾದರೂ, ಅಲ್ಲಿನ ದಾರುಣ ಸ್ಥಿತಿಗೆ ಸ್ಥಳೀಯ ಪುರಾವೆ, ಆಧಾರಗಳನ್ನು ವಿಶ್ವಾಸಾರ್ಹವಾಗುವಂತೆ ಯಾರೂ ಮಂಡಿಸಹೋಗಲಿಲ್ಲ. ದೊಡ್ಡ ಅನಾಹುತವಾಗುತ್ತಿದೆ, ರಾಷ್ಟ್ರದ ಭದ್ರತೆಗೇ ಭಂಗ ತರುವಂತೆ ವಿದ್ಯಮಾನಗಳು ಘಟಿಸುತ್ತಿವೆ ಎಂದು ಸುದ್ದಿ ಮಾಧ್ಯಮಗಳ ವಿಶ್ಲೇಷಕರು ಹಳಹಳಿಸಿ, ಕಣ್ಣಿಗೆ ಕಾಣುವಂತೆ ದಳ್ಳುರಿಯನ್ನು ತೋರಿಸಿದರಾದರೂ, ಇದೆಲ್ಲಿಂದ ಆರಂಭವಾಯಿತು ಎನ್ನುವ ಬಗ್ಗೆ ಯಾರೂ ಪ್ರಾಮಾಣಿಕವಾಗಿ ಬೆಳಕು ಚೆಲ್ಲಲಿಲ್ಲ.

ಅಲ್ಲಿನ ಸ್ಥಿತಿ ಮತ್ತು ಅದಕ್ಕೆ ಸಂಬಂಧಿಸಿದ ಸತ್ಯಾಸತ್ಯತೆಯನ್ನು ಸರ್ವೋಚ್ಚ ಶಾಸಕಾಂಗದ ಮೂಲಕ ಬಹಿರಂಗಗೊಳಿಸಲು ಪ್ರಯತ್ನ ಮಾಡಿದ್ದು ತಪ್ಪಲ್ಲ. ಆದರೆ ಅದರಲ್ಲಿ ಪ್ರಾಮಾಣಿಕತೆ ಕಂಡುಬರಲಿಲ್ಲ. ಸರ್ಕಾರವಂತೂ ಉದ್ದೇಶಪೂರ್ವಕವಾಗಿ ಅದನ್ನು ಮಾಡಲೇ ಇಲ್ಲ. ಹಾಗೆಂದು ಈ ವಿಚಾರದಲ್ಲಿ ನೇರವಾಗಿ ಪ್ರಧಾನಿಯವರನ್ನು ಗುರಿ ಮಾಡಿದ್ದು, ಅವರೇ ಖುದ್ದು ಸದನಕ್ಕೆ ಬಂದು ಹೇಳಿಕೆ ನೀಡಬೇಕೆಂದು ಸವಾಲು ಹಾಕಿದ್ದರಲ್ಲಿ ಯಾವುದೇ ವಿವೇಕ ಇರಲಿಲ್ಲ. ಪ್ರಧಾನಿ ಬಂದರು, ಗಲಭೆಗ್ರಸ್ತ ಪ್ರದೇಶದಲ್ಲಿ ಶಾಂತಿ ತರುತ್ತೇವೆಂದು ಔಪಚಾರಿಕವಾಗಿ ಹೇಳಿದರು, ಹೋದರು. ಅವಿಶ್ವಾಸ ನಿರ್ಣಯದ ಕುರಿತು ಕ್ಯಾರೆ ಎನ್ನಲೂ ಸಭೆಯಲ್ಲಿ ಯಾರೂ ಉಳಿದಿರಲಿಲ್ಲ! ಮಸೂದೆಗಳೆಲ್ಲಾ ಚರ್ಚೆಯಿಲ್ಲದೇ ಪಾಸಾದವು. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವಾಗಲೇ ಇದೆಂತಹ ರಾಜಕೀಯ ಅಧೋಗತಿ?! **ಆರ್.ಕೆ.ದಿವಾಕರ,** ಬೆಂಗಳೂರು

ಅಕ್ರಮ ಹೂಳು, ನಿಯಮ ಬದಲಾಗಲಿ

ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ ಗ್ರಾಮದ ಕೆರೆಯಲ್ಲಿ ಅಕ್ರಮವಾಗಿ ಹೂಳು ತೆಗೆದು ಸರ್ಕಾರದ ಬೊಕ್ಕಸಕ್ಕೆ ₹ 71.45 ಲಕ್ಷ ನಷ್ಟ ಉಂಟುಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 13). ಕೆರೆಯಲ್ಲಿ ಸಾವಿರಾರು ಲೋಡ್ ಮಣ್ಣನ್ನು ತೆಗೆಯಲಾಗಿದೆ. ಆದರೆ ಅಷ್ಟೊಂದು ಪ್ರಮಾಣದ ಮಣ್ಣನ್ನು ರಾತ್ರೋರಾತ್ರಿ ತೆಗೆಯಲು ಸಾಧ್ಯವೇ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಅವರೆಗೂ ಕಣ್ಣು ಮುಚ್ಚಿಕೊಂಡು ಕುಳಿತಿದ್ದುದು ಏಕೆ? ಎಲ್ಲ ಯೋಜನೆಗಳಲ್ಲಿ ನಷ್ಟದ ವಸೂಲಿಯನ್ನು ಅಧಿಕಾರಿಗಳಿಂದಲೇ ವಸೂಲು ಮಾಡುವ ನಿಯಮವನ್ನು ಜಾರಿಗೆ ತಂದಾಗ ಇಂಥ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೇನೊ.

ಸರ್ಕಾರದಿಂದ ಇದುವರೆಗೆ ಜಲಸಂವರ್ಧನೆಗೆ ವಿವಿಧ ಯೋಜನೆಗಳಡಿ ಅಸಂಖ್ಯ ಕೆರೆಕಟ್ಟೆಗಳ ಹೂಳನ್ನು ತೆಗೆಯಲು ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಆದರೆ ಸರಿಯಾಗಿ ಪರಿಶೀಲಿಸಿದರೆ ಯಾವೊಂದು ಕೆರೆಯೂ ಖರ್ಚಿಗೆ ಅನುಗುಣವಾಗಿ ಸ್ವಚ್ಛವಾದ ಉದಾಹರಣೆ ರಾಜ್ಯದಲ್ಲಿಯೇ ಇಲ್ಲ. ಬಹುತೇಕ ಕಡೆ ಬರೀ 3-4 ಅಡಿ ಮಾತ್ರ ಹೂಳು ಎತ್ತಲಾಗಿದೆ. ಖರ್ಚು ಮಾಡಿದ ಮೊತ್ತಕ್ಕೂ ಕಾಮಗಾರಿಯಿಂದ ಆಗುವ ಲಾಭಕ್ಕೂ ಅಜಗಜಾಂತರ ಇರುತ್ತದೆ. ಸರ್ಕಾರದ ಹೂಳು ತೆಗೆಯುವ ವೆಚ್ಚಕ್ಕೆ ಹೋಲಿಸಿದರೆ ರಾಜಧನ ನಷ್ಟವಾದರೂ, ಸಾರ್ವಜನಿಕರಿಗೆ ಅದಕ್ಕಿಂತ ಹೆಚ್ಚು ಲಾಭವಾಗಿರುತ್ತದೆ. ಆದ್ದರಿಂದ ರಾಜ್ಯದ ಎಲ್ಲ ಕೆರೆಕಟ್ಟೆಗಳ ಹೂಳನ್ನು ಉಚಿತವಾಗಿ ತೆಗೆದುಕೊಂಡು ಹೋಗುವಂತೆ ನಿಯಮ ಬದಲಾಯಿಸಿದಲ್ಲಿ, ಈಗಾಗಲೇ ಮಳೆ ಕೊರತೆ, ಅಂತರ್ಜಲ ಕೊರತೆಯಿಂದ ಬರಡಾಗುತ್ತಿರುವ ಭೂಮಿಯಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಸಂವರ್ಧಿಸುತ್ತದೆ. **ಮಹೇಶ ಸಿ.ಎಚ್.,** ರಾಣೆಬೆನ್ನೂರು

ಸೌಹಾರ್ದದ ಅರಿವು ಮೂಡಿದರೆ ಶಾಂತಿ ನೆಲೆಸಲಿದೆ

ಮುಸ್ಲಿಂ ವಿದ್ವಾಂಸ ಮುಹಮ್ಮದ್ ಬಿನ್ ಅಬ್ದುಲ್ ಕರೀಂ ಅಲ್- ಇಸ್ಸಾ ಅವರ ಭಾರತ ಪ್ರವಾಸದಲ್ಲಿನ ಮಾತುಗಳನ್ನು ಉಲ್ಲೇಖಿಸುತ್ತಾ, 'ಪೊಳ್ಳು ಜಾತ್ಯತೀತವಾದಿಗಳು, ಮೋದಿ ನಿಂದಕರು ಮತ್ತು ಈಗ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವವರು ಇಸ್ಲಾಂ ಕುರಿತು ಭೀತಿ ಹರಡುತ್ತಿದ್ದಾರೆ ಎಂದು ಸುಳ್ಳು ಹರಡುತ್ತಿರುವವರ ಬಾಯಿ ಬಂದ್ ಆಗಿದೆ' ಎಂದು ಎ.ಸೂರ್ಯಪ್ರಕಾಶ್ ಅವರು ಅಭಿಪ್ರಾಯಪಟ್ಟಿರುವುದು (ಪ್ರ.ವಾ., ಆ. 12) ವಿಚಿತ್ರ ಹಾಗೂ ಪೂರ್ವಗ್ರಹಪೀಡಿತವಾಗಿದೆ. ಇಸ್ಸಾ ಅವರು ಭಾರತದ ಸಂವಿಧಾನ ಮತ್ತು ತತ್ವಜ್ಞಾನದ ಹಿನ್ನೆಲೆಯಲ್ಲಿ ಹಾಗೂ ವಿವೇಕಾನಂದ ಅಂತರರಾಷ್ಟ್ರೀಯ ಪ್ರತಿಷ್ಠಾನದಲ್ಲಿನ ಪ್ರಮುಖ ಧಾರ್ಮಿಕ ನಾಯಕರ ಜೊತೆಗಿನ ಸಂವಾದದ ಸಂದರ್ಭದಲ್ಲಿ ಆಡಿದ ಮಾತುಗಳನ್ನು ಪ್ರಸ್ತುತ ಭಾರತದ ರಾಜಕೀಯ ಹಾಗೂ ಸಾಮಾಜಿಕ ಸಂದರ್ಭಗಳನ್ನು ಗಮನಿಸಿ ಹೇಳಿದ ಮಾತುಗಳು ಎಂಬಂತೆ ಲೇಖಕರು ಅಪಾರ್ಥ ಮಾಡಿಕೊಂಡಿದ್ದಾರೆ.

ಮೂರು ತಿಂಗಳಿನಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ಮಹಿಳೆಯರ ಬೆತ್ತಲೆ ಮೆರವಣಿಗೆ, ಲೈಂಗಿಕ ಕಿರುಕುಳ, ಹತ್ಯೆಗಳು ನಡೆಯುತ್ತಿರುವುದು ಮಾಮೂಲು ಸಂಗತಿ ಎಂಬಂತೆ ಅಲ್ಲಿನ ಮುಖ್ಯಮಂತ್ರಿ ಹೇಳುತ್ತಾರೆ. ಅದರ ಬಗೆಗೆ ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರ ಸ್ಪಂದನೆ ತುಂಬ ನಿರಾಶಾದಾಯಕವಾಗಿದೆ. ಹರಿಯಾಣದ ನೂಹ್‌ನಲ್ಲಿ ಕೋಮುಗಲಭೆ, ಉತ್ತರಪ್ರದೇಶದಲ್ಲಿ ಬಡ ಮುಸ್ಲಿಮರ ಮನೆಗಳ ಮೇಲೆ ಬುಲ್ಡೋಜರ್ ದಾಳಿ ನಡೆದಿದೆ. ಹೀಗಿರುವಾಗ ಇಲ್ಲಿ 'ಸಬ್ ಚೆಂಗಾಸಿ' ಅಂತ ಹೇಳಲು ಇಸ್ಸಾ ಅವರೇನು ಬಿಜೆಪಿಯ ವಿದೇಶಿ ವಕ್ತಾರರೇ? ಅದನ್ನು ಸೂರ್ಯಪ್ರಕಾಶ್ ಅವರು ಮೋದಿ ನೇತೃತ್ವದ ಸರ್ಕಾರಕ್ಕೆ ಕೊಟ್ಟ ಅರ್ಹತಾ ಪತ್ರ ಎಂದು ತಿರುಚಿದ್ದಾರೆ. ನ್ಯಾಯವಾಗಿ ಇಸ್ಸಾ ಅವರ ಮಾತುಗಳು ನಮ್ಮಲ್ಲಿ ಸಂತೋಷಕ್ಕಿಂತ ಅಳುಕನ್ನು ಉಂಟುಮಾಡಬೇಕಾಗಿದೆ. ಹಿಂದೂ ಧರ್ಮದ ಹೆಸರಿನಲ್ಲಿ 'ಹಿಂದುತ್ವ' ರಾಜಕೀಯ ಮಾಡುತ್ತಿರುವವರು ಮತ್ತು ಅದಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳ ಬಯಸುತ್ತಿರುವ ಕೆಲವು ಮುಸ್ಲಿಮರು ಇಸ್ಸಾ ಅವರ ಸೌಹಾರ್ದದ ಪಾಠಗಳನ್ನು ಮೊದಲು ಕೇಳಿಸಿಕೊಂಡು ಅರಿವನ್ನು ಮೂಡಿಸಿಕೊಂಡರೆ ಭಾರತದಲ್ಲಿ ಶಾಂತಿ ನೆಲೆಸುತ್ತದೆ. **ಪು.ಸೂ.ಲಕ್ಷ್ಮೀನಾರಾಯಣ ರಾವ್,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿನ್ನ ದುಬಾರಿ ತಗ್ಗಿದ ಖರೀದಿ, ಹೂಡಿಕೆ

● ವಿಶ್ವನಾಥ ಎಸ್.

ಚಿನ್ನದ ಬಳಕೆಯಲ್ಲಿ ಭಾರತವು ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ. ಭಾರತೀಯರಿಗೆ ಚಿನ್ನದ ವ್ಯಾಮೋಹ ತುಸು ಹೆಚ್ಚೇ... ಮದುವೆ ಸಮಾರಂಭ, ಅಕ್ಷಯ ತೃತೀಯ... ಹೀಗೆ ವಿಶೇಷ ಸಂದರ್ಭಗಳಿಗೆ ಮಾತ್ರವಲ್ಲದೆ ಕಷ್ಟಕಾಲದಲ್ಲಿ ಬೇಕಾಗುತ್ತದೆ ಎಂದು, ಹೂಡಿಕೆಯ ದೃಷ್ಟಿಯಿಂದಲೂ ಭಾರತದಲ್ಲಿ ಚಿನ್ನಕ್ಕೆ ಮಹತ್ವದ ಸ್ಥಾನ ಇದೆ. ಉಳಿತಾಯದ ದೃಷ್ಟಿಯಿಂದಲೂ ಚಿನ್ನ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ.

ಚಿನ್ನದ ಬೆಲೆ ಗರಿಷ್ಠ ಮಟ್ಟದಲ್ಲಿ ಇದ್ದಾಗ ಹೂಡಿಕೆ, ಖರೀದಿ ಪ್ರಮಾಣ ಕಡಿಮೆ ಆಗುತ್ತದೆ. ದೇಶದಲ್ಲಿ ಸದ್ಯ ಚಿನ್ನದ ಬೆಲೆಯು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಬೇಡಿಕೆ ಇಳಿಮುಖವಾಗಿದೆ. ಚಿನ್ನಾಭರಣ ಖರೀದಿ, ಚಿನ್ನದ ಮೇಲೆ ಹೂಡಿಕೆ ಮಾಡಲು ಜನರು ಹಿಂದೇಟು ಹಾಕುತ್ತಿದ್ದಾರೆ.

10 ಗ್ರಾಂ ಚಿನ್ನದ ದರ ಸದ್ಯ ₹60 ಸಾವಿರವನ್ನು ದಾಟಿ ವಹಿವಾಟು ನಡೆಸುತ್ತಿದೆ. ಈ ವರ್ಷದ ಆರಂಭದಿಂದಲೇ ಚಿನ್ನದ ದರ ಏರುಗತಿಯಲ್ಲಿ ಇದೆ. 10 ಗ್ರಾಂಗೆ ಫೆಬ್ರುವರಿಯಲ್ಲಿ ₹60 ಸಾವಿರದ ಗಡಿಯನ್ನು ದಾಟಿದ್ದ ಚಿನ್ನವು ಇನ್ನಷ್ಟು ಏರಿಕೆ ಕಾಣುವ ಸೂಚನೆ ನೀಡಿತ್ತಾದರೂ ಸದ್ಯ ₹60 ಸಾವಿರದ ಆಸುಪಾಸಿನಲ್ಲಿ ಇದೆ.

ಚಿನ್ನದ ದರ ಗರಿಷ್ಠ ಮಟ್ಟದಲ್ಲಿ ಇರುವುದರಿಂದಾಗಿ ಭಾರತದಲ್ಲಿ ಚಿನ್ನಕ್ಕೆ ಬೇಡಿಕೆ ಕಡಿಮೆ ಆಗುತ್ತಿದೆ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಈಚಿನ ವರದಿ ಹೇಳಿದೆ. ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ 158.1 ಟನ್ ಚಿನ್ನಕ್ಕೆ ಬೇಡಿಕೆ ಬಂದಿತ್ತು. 2022ರ ಇದೇ ಅವಧಿಗೆ ಹೋಲಿಸಿದರೆ (170.7 ಟನ್) ಶೇ 7ರಷ್ಟು ಇಳಿಕೆ ಆಗಿದೆ ಎಂದು ವರದಿ ತಿಳಿಸಿದೆ. ಆದರೆ ಮೌಲ್ಯದ ಲೆಕ್ಕದಲ್ಲಿ ₹79,270 ಕೋಟಿಯಿಂದ ₹82,530 ಕೋಟಿಗೆ ಏರಿಕೆ ಕಂಡಿದೆ. ಚಿನ್ನಾಭರಣ ಬೇಡಿಕೆಯು ಸಹ ಶೇ 8ರಷ್ಟು ಇಳಿಕೆಯಾಗಿ 128.6 ಟನ್‌ಗೆ ತಲುಪಿದೆ. ಕಳೆದ ಬಾರಿ 140.3 ಟನ್ ಇತ್ತು. ಚಿನ್ನದ ಬಾರ್ ಮತ್ತು ನಾಣ್ಯಗಳ ಬೇಡಿಕೆಯೂ ಶೇ 3ರಷ್ಟು ಕಡಿಮೆ ಆಗಿದೆ.

ಹೆಚ್ಚಿದ ಮರುಬಳಕೆ: ಚಿನ್ನದ ಬೆಲೆ ಏರಿಕೆ ಕಂಡಾಗ ಖರೀದಿಯಿಂದ ಹಿಂದೆ ಸರಿಯುವ ಜನರು ಒಂದೆಡೆಯಾದರೆ, ತಮ್ಮ ಬಳಿ ಸಂಗ್ರಹಿಸಿ ಇಟ್ಟುಕೊಂಡಿರುವ ಚಿನ್ನವನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳಲು ಮುಂದಾಗುವ ಜನರು ಇನ್ನೊಂದೆಡೆ. ಈ ವರ್ಷದ ಆರಂಭದಿಂದಲೂ ಚಿನ್ನದ ದರ ಗರಿಷ್ಠ ಮಟ್ಟದಲ್ಲಿಯೇ ಇರುವುದರಿಂದ ಜನರು ತಮ್ಮ ಬಳಿ ಇರುವ ಚಿನ್ನದಲ್ಲಿ ಒಂದಷ್ಟನ್ನು ಮಾರಾಟ ಮಾಡಿ ಲಾಭ ಮಾಡಿಕೊಂಡಿದ್ದಾರೆ. ಹೀಗಾಗಿ ಜೂನ್ ತ್ರೈಮಾಸಿಕದಲ್ಲಿ ಚಿನ್ನದ ಮರುಬಳಕೆಯು ಶೇ 61ರಷ್ಟು ಹೆಚ್ಚಾಗಿ 37.6 ಟನ್‌ಗಳಿಗೆ ತಲುಪಿದೆ.





ಸಿರಿವಂತರ ಹೂಡಿಕೆ ಶೇ 6ರಷ್ಟು: ದೇಶದ ಅತಿ ಸಿರಿವಂತರು ಕಳೆದ ವರ್ಷ ತಮ್ಮ ಒಟ್ಟು ಹೂಡಿಕೆಯಲ್ಲಿ ಶೇಕಡ 6ರಷ್ಟನ್ನು ಚಿನ್ನ ಖರೀದಿಗೆ ಬಳಸಿದ್ದಾರೆ. ಸಿರಿವಂತರು ಚಿನ್ನದ ಮೇಲೆ ಮಾಡುವ ಹೂಡಿಕೆಯಲ್ಲಿ ಭಾರತವು ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಆಸ್ತಿ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ಇಂಡಿಯಾ ಹೇಳಿದೆ.

ಆಸ್ಟ್ರಿಯಾದ ಸಿರಿವಂತರು ಚಿನ್ನ ಖರೀದಿಯಲ್ಲಿ ಶೇ 8ರಷ್ಟು ಹಣವನ್ನು ತೊಡಗಿಸಿದ್ದಾರೆ. ಸಿರಿವಂತರು ಚಿನ್ನದ ಮೇಲೆ ಹೂಡಿಕೆ ಮಾಡುವ ಪಟ್ಟಿಯಲ್ಲಿ ಆಸ್ಟ್ರಿಯಾ ಮೊದಲ ಸ್ಥಾನದಲ್ಲಿದೆ. ಚೀನಾ ಸಹ ಭಾರತದೊಂದಿಗೆ ಎರಡನೇ ಸ್ಥಾನ ಪಡೆದುಕೊಂಡಿದೆ.

ಭಾರತದ ಸಿರಿವಂತರು ಚಿನ್ನದ ಮೇಲೆ ಮಾಡುವ ಹೂಡಿಕೆಯು 2018ರಲ್ಲಿ ಶೇ 4ರಷ್ಟು ಇತ್ತು. ಅದು 2022ರ ವೇಳೆಗೆ ಶೇ 6ಕ್ಕೆ ಏರಿಕೆ ಆಗಿದೆ. ಚಿನ್ನದ ಗಳಿಕೆ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣ. ಐದು ವರ್ಷಗಳಲ್ಲಿ ಚಿನ್ನದ ಮೇಲಿನ ಹೂಡಿಕೆಯು ಶೇ 69ರಷ್ಟು ಗಳಿಕೆ ತಂದುಕೊಟ್ಟಿದೆ ಎಂದು ನೈಟ್ ಫ್ರ್ಯಾಂಕ್ ಹೇಳಿದೆ.

ಚಿನ್ನದ ಬಾರ್ ಮತ್ತು ನಾಣ್ಯ: ಭಾರತದಲ್ಲಿ ಕುಟುಂಬದ ಉಳಿತಾಯದಲ್ಲಿ ಭೌತಿಕ ಸ್ವರೂಪದ ಸ್ವತ್ತು (ರಿಯಲ್ ಎಸ್ಟೇಟ್, ಚಿನ್ನ, ಬೆಳ್ಳಿ ಗಟ್ಟಿ, ನಾಣ್ಯ ಮತ್ತು ಚಿನ್ನಾಭರಣ) ಗರಿಷ್ಠ ಪ್ರಮಾಣದಲ್ಲಿ ಇರುತ್ತದೆ. ಈ ಕಾರಣದಿಂದಾಗಿಯೇ ಚಿನ್ನದ ಬಾರ್ ಮತ್ತು ನಾಣ್ಯ ಮಾರುಕಟ್ಟೆಗಳ ಪೈಕಿ ಭಾರತವು ಜಗತ್ತಿನ ಎರಡನೇ ಅತಿದೊಡ್ಡ ಮಾರುಕಟ್ಟೆ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. ಕಳೆದೊಂದು ದಶಕದಿಂದ ವಾರ್ಷಿಕವಾಗಿ 187 ಟನ್ ಬಳಕೆ ಆಗುತ್ತಿದೆ. ವಾರ್ಷಿಕವಾಗಿ ಬಳಕೆ ಆಗುತ್ತಿರುವುದರಲ್ಲಿ ಶೇ 40–50ರಷ್ಟು ಆಭರಣಕ್ಕೆ ಪರಿವರ್ತನೆ ಮಾಡಲಾಗುತ್ತಿದೆ ಎಂದು ಮೆಟಲ್ಸ್ ಫೋಕಸ್ ಸಂಸ್ಥೆಯ ವರದಿ ತಿಳಿಸಿದೆ.

ಚಿನ್ನದ ಇಟಿಎಫ್‌ಗೂ ಪೆಟ್ಟು

ಗಟ್ಟಿ ಚಿನ್ನ, ನಾಣ್ಯ, ಚಿನ್ನಾಭರಣ ಅಷ್ಟೇ ಅಲ್ಲದೆ, ಚಿನ್ನದ ಇಟಿಎಫ್ ಸಹ ಹೂಡಿಕೆಯಲ್ಲಿ ಪ್ರಮುಖ ಪಾತ್ರ ಹೊಂದಿದೆ. ಚಿನ್ನದ ಇಟಿಎಫ್ ಮೇಲಿನ ಹೂಡಿಕೆಯು ಸಹ ಚಿನ್ನದ ದರ, ಜಾಗತಿಕ ವಿದ್ಯಮಾನಗಳು ಮತ್ತು ಹಣದುಬ್ಬರದ ಪ್ರಭಾವಕ್ಕೆ ಒಳಪಟ್ಟಿದೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ನೀಡಿರುವ ಮಾಹಿತಿಯ ಪ್ರಕಾರ, 2023–24ನೇ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಚಿನ್ನದ ಇಟಿಎಫ್‌ಗಳು ₹298 ಕೋಟಿ ಬಂಡವಾಳ ಆಕರ್ಷಿಸಿವೆ. 2022–23ನೇ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಆಗಿದ್ದ ಹೂಡಿಕೆಗೆ ಹೋಲಿಸಿದರೆ ಹೂಡಿಕೆಯಲ್ಲಿ ಶೇ 80ರಷ್ಟು ಕುಸಿತ ಕಂಡುಬಂದಿದೆ. ಹೀಗಿದ್ದರೂ ಹಿಂದಿನ ಸೆಪ್ಟೆಂಬರ್, ಡಿಸೆಂಬರ್ ಮತ್ತು ಮಾರ್ಚ್ ತ್ರೈಮಾಸಿಕದಲ್ಲಿ ಆಗಿದ್ದ ಬಂಡವಾಳ ಹೊರಹರಿವಿಗೆ ಹೋಲಿಸಿದರೆ ಅಲ್ಪ ಮೊತ್ತ ಹೂಡಿಕೆ ಆಗಿರುವುದು ಸಮಾಧಾನಕಾರ ಸಂಗತಿ.

ಇಟಿಎಫ್‌ನಲ್ಲಿ ಬಂಡವಾಳ ಹೂಡಿಕೆ ಕಡಿಮೆ ಆಗಲು ಚಿನ್ನದ ದರ ಏರುಮುಖ ಆಗಿರುವುದಷ್ಟೇ ಕಾರಣವಲ್ಲ. ಷೇರುಪೇಟೆಗಳ ಗಳಿಕೆ ಹೆಚ್ಚಾಗಿರುವುದು, ದೀರ್ಘಾವಧಿ ಬಂಡವಾಳ ಗಳಿಕೆ ಪ್ರಯೋಜನ ಕೈಬಿಟ್ಟಿರುವುದು ಸಹ ಹೂಡಿಕೆದಾರರು ಚಿನ್ನದ ಇಟಿಎಫ್‌ನಲ್ಲಿ ಹೂಡಿಕೆ ಪ್ರಮಾಣ ತಗ್ಗಿಸುವಂತೆ ಮಾಡಿವೆ.



ಕೋವಿಡ್ ಅವಧಿಯಲ್ಲಿ ಹೆಚ್ಚಾದ ಹೂಡಿಕೆ

ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕದ ಪ್ರಭಾವ ಹೆಚ್ಚು ತೀವ್ರವಾಗಿದ್ದ ಜಿಲ್ಲೆಗಳ ಜನರು ತಮ್ಮ ಉಳಿತಾಯದಲ್ಲಿ ಚಿನ್ನ ಖರೀದಿಗೆ ಹೆಚ್ಚು ಹಣ ತೊಡಗಿಸಿದ್ದಾರೆ ಎನ್ನುವ ಮಾಹಿತಿಯನ್ನು ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂಎ) ವರದಿ ತಿಳಿಸಿದೆ. ಭಾರತದ ಪ್ರತಿ ಕುಟುಂಬವೂ ತನ್ನ ಒಟ್ಟು ಹೂಡಿಕೆಯಲ್ಲಿ ಸರಾಸರಿ ಶೇ 11ರಷ್ಟನ್ನು ಚಿನ್ನದ ಮೇಲೆ ತೊಡಗಿಸುತ್ತಿದೆ ಎಂದು ವರದಿಯು ಹೇಳಿದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ, ಕುಟುಂಬವೊಂದರ ಹೂಡಿಕೆಯಲ್ಲಿ ಚಿನ್ನದ ಪಾಲು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೋವಿಡ್ ಸಾಂಕ್ರಾಮಿಕ ಹೆಚ್ಚು ವ್ಯಾಪಕವಾಗಿದ್ದ ಜಿಲ್ಲೆಗಳಲ್ಲಿ ಶೇ 6.9ರಷ್ಟು ಹೆಚ್ಚಿಗೆ ಇತ್ತು. ಕೋವಿಡ್‌ನಿಂದಾಗಿ ಹೆಚ್ಚಿನ ಆರ್ಥಿಕ ನಷ್ಟ ಅನುಭವಿಸದೇ ಇದ್ದ ಜಿಲ್ಲೆಗಳಿಗೆ ಹೋಲಿಸಿದರೆ, ಹೆಚ್ಚು ಆರ್ಥಿಕ ನಷ್ಟಕ್ಕೆ ಗುರಿಯಾದ ಜಿಲ್ಲೆಗಳಲ್ಲಿ ಚಿನ್ನದ ಮೇಲಿನ ಹೂಡಿಕೆಯು ಶೇ 2.9ರಷ್ಟು ಹೆಚ್ಚಾಗಿದೆ.

ಬ್ಯಾಂಕಿಂಗ್ ಸೇವೆ ಸುಲಭವಾಗಿ ಲಭ್ಯ ಇರುವ ಮತ್ತು ಆರೋಗ್ಯ ಮೂಲಸೌಕರ್ಯಗಳು ಚೆನ್ನಾಗಿ ಇರುವ ಜಿಲ್ಲೆಗಳಲ್ಲಿ ಕುಟುಂಬಗಳು ಚಿನ್ನದ ಮೇಲೆ ಮಾಡುವ ಹೂಡಿಕೆಯಲ್ಲಿ ಅಲ್ಪ ಹೆಚ್ಚಳವಷ್ಟೇ ಆಗಿದೆ. ಅಂದರೆ, ಅಭಿವೃದ್ಧಿಗೂ ಚಿನ್ನದ ಖರೀದಿಗೂ ಸಂಬಂಧವೊಂದು ಇದೆ ಎಂಬುದನ್ನು ಈ ವರದಿಯು ಸೂಚ್ಯವಾಗಿ ಹೇಳುತ್ತಿದೆ.

‘ಭಾರತದಲ್ಲಿ ಚಿನ್ನದ ದರ ಸದ್ಯ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಜನ ವೆಚ್ಚ ಮಾಡುವುದು ಕಡಿಮೆ ಆಗಿರುವ ಕಾರಣಗಳಿಂದಾಗಿ ಈ ವರ್ಷದುದ್ದಕ್ಕೂ ಚಿನ್ನದ ಬೇಡಿಕೆಯ ಬಗ್ಗೆ ಎಚ್ಚರಿಕೆಯಿಂದ ಇದ್ದೇವೆ. ಆದರೆ, ಮುಂಗಾರು ಎಲ್ಲೆಡೆಯೂ ವಾಡಿಕೆಯಂತೆ ಆದಲ್ಲಿ ದಿಪಾವಳಿ ಸಂದರ್ಭದಲ್ಲಿ ಬೇಡಿಕೆ ಚೇತರಿಸಿಕೊಳ್ಳುವ ಸಾಧ್ಯತೆ ಇರಲಿದೆ. 2023ರಲ್ಲಿ ಚಿನ್ನದ ವಾರ್ಷಿಕ ಬೇಡಿಕೆಯು 650–750 ಟನ್ ಇರಬಹುದೆಂದು ಅಂದಾಜು ಮಾಡಲಾಗಿದೆ’ ಎಂದು ವಿಶ್ವ ಚಿನ್ನ ಸಮಿತಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಪಿ.ಆರ್. ಸೋಮಸುಂದರಂ ಹೇಳಿದ್ದಾರೆ.

ಅನಂತ ನಾಗ್ ರಮೇಶ್ ಅರವಿಂದ್

ವೀಕೆಂಡ್ ವಿತ್ ಅನಂತ ನಾಗ್

‘ನಟನಾಗಿ ನಾನು ತೆರೆಯ ಮೇಲೆ ಯಶಸ್ವಿಯಾಗಿರಬಹುದು. ಆದರೆ ನನ್ನ ಹಿಂದೆ ಪಾತ್ರವನ್ನು ಬರೆದ ಬರಹಗಾರ, ಪಾತ್ರವನ್ನು ಕಲ್ಪಿಸಿದ ನಿರ್ದೇಶಕನಿಂದ ಹಿಡಿದು ಅನೇಕರ ಕೆಲಸವಿರುತ್ತದೆ. ಹೀಗಾಗಿ ನಾವಿಲ್ಲಿ ನಿಮಿತ್ತ ಮಾತ್ರ. ನಾವೇನೇ ಮಾಡಿದರೂ, ಅದನ್ನು ಮಾಡಿಸುವವನೊಬ್ಬ ಇರುತ್ತಾನೆ. ಪಾತ್ರಕ್ಕಾಗಿ ಎಷ್ಟೇ ಸಿದ್ಧತೆ ಮಾಡಿಕೊಂಡರೂ, ಕೊನೆಗೆ ಸ್ಥಳದಲ್ಲಿ, ಆ ಘಳಿಗೆಯಲ್ಲಿ ಅನ್ನಿಸಿದ್ದನ್ನು ನಟಿಸಿ ಬಂದಿರುತ್ತೇವೆ’ ಎಂದು ತಮ್ಮ ಸಿನಿಪಯಣದ ಕುರಿತು ಭಾವುಕರಾದರು ನಟ ಅನಂತ ನಾಗ್.

ಅನಂತ ನಾಗ್ ಕನ್ನಡ ಚಿತ್ರೋದ್ಯಮದಲ್ಲಿ ಐದು ದಶಕ ಪೂರೈಸಿದ ಸಂಭ್ರಮಕ್ಕಾಗಿ ರಾಘವೇಂದ್ರ ಚಿತ್ರವಾಣಿ ಸಂಸ್ಥೆ ಹಮ್ಮಿಕೊಂಡಿದ್ದ ‘ಅನಂತಲೋಕ ವಿತ್ ರಮೇಶ್’ ಕಾರ್ಯಕ್ರಮದಲ್ಲಿ ಅವರು ಮನಬಿಚ್ಚಿ ಮಾತನಾಡಿದರು.

ನಟ ರಮೇಶ ಅರವಿಂದ್ ತಮ್ಮ ಜನಪ್ರಿಯ ‘ವೀಕೆಂಡ್ ವಿತ್ ರಮೇಶ್’ ಮಾದರಿಯಲ್ಲಿಯೇ ಈ ಕಾರ್ಯಕ್ರಮ ನಡೆಸಿಕೊಟ್ಟರು. ಅನಂತ ನಾಗ್ ವೈಯಕ್ತಿಕ ಬದುಕಿನ ಸುತ್ತ ಹೆಣೆಯಲಾಗಿದ್ದ ಈ ಸಂವಾದದಲ್ಲಿ ಅನಂತ ನಾಗ್ ಅತ್ಯಂತ ಸಿಟ್ಟಾಗಿದ್ದು, ಖುಷಿಯಾಗಿದ್ದ ಕ್ಷಣಗಳು ಸೇರಿದಂತೆ ಸಾರ್ವಜನಿಕ ಜಗತ್ತಿಗೆ ಗೊತ್ತಿಲ್ಲದ ತಮ್ಮ ಬದುಕಿನ ಒಂದಷ್ಟು ಘಟನೆಗಳನ್ನು ಹಂಚಿಕೊಂಡರು.

‘ತಾವು ಕೋಪಗೊಳ್ಳುವುದು ಅತ್ಯಂತ ಕಡಿಮೆ’ ಎಂದು ಅನಂತ ನಾಗ್ ಮುಗುಳ್ನಕ್ಕರು. ಅವರ ಪಕ್ಕದಲ್ಲಿಯೇ ಕುಳಿತಿದ್ದ ಪತ್ನಿ ಗಾಯಿತ್ರಿ, ಅನಂತ ನಾಗ್ ಬದುಕಿನ ಸಿಟ್ಟಿನ ಘಟನೆಗಳು, ಅಡುಗೆ ಸರಿಯಿಲ್ಲದ್ದಕ್ಕೆ ರೇಗಾಡಿದ್ದನ್ನು ಮೆಲುಕು ಹಾಕಿ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿದರು.

‘ರಾಯಲ್ ಮೆಕ್’ ಎಂಜಿನಿಯರ್ ಕಥೆ

ಶ್ರಾವ್ಯ ರಾವ್

ಬಹುತೇಕ ಹೊಸಬರೇ ಸೇರಿ ನಿರ್ಮಿಸಿರುವ ‘ರಾಯಲ್ ಮೆಕ್’ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ಎಂಜಿನಿಯರ್ ಒಬ್ಬನ ಕಥೆ ಹೇಳುವ ಚಿತ್ರಕ್ಕೆ ಸ್ವತಃ ಎಂಜಿನಿಯರ್ ಆಗಿರುವ ಧನುಷ್ ಕಥೆ ಬರೆದು, ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಓಂಪ್ರಕಾಶ್ ರಾವ್ ಪುತ್ರಿ ಶ್ರಾವ್ಯ ರಾವ್ ಧನುಷ್‌ಗೆ ಜೋಡಿಯಾಗಿದ್ದಾರೆ.

ನಾಗಭೂಷಣ್.ಜೆ.ಎಚ್. ಎಂ ಮತ್ತು ಡಾ.ಜಯದೇವ-ಹಾಸನ್ ಚಿತ್ರದ ನಿರ್ದೇಶಕರು. ‘ಚಿತ್ರದ ನಾಯಕ ಎಂಜಿನಿಯರ್. ಮನೆಯಲ್ಲಿ ನಡೆಯುವ ಘಟನೆಗಳಿಂದ ವಿಚಲಿತನಾಗಿ ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿರುತ್ತಾನೆ. ನಿರ್ದೇಶಕನ ಪಾತ್ರದಲ್ಲಿ ರಾಘವೇಂದ್ರ-ರಾಜ್‌ಕುಮಾರ್ ಕೂಡ ನಟಿಸಿದ್ದಾರೆ’ ಎಂದರು ನಿರ್ದೇಶಕ ನಾಗಭೂಷಣ್.

ಕಾಲೇಜು ವಿದ್ಯಾರ್ಥಿಯಾಗಿ ಗೌತಮಿ ಜಯರಾಂ ಕಾಣಿಸಿಕೊಂಡಿದ್ದಾರೆ. ರಮೇಶ್ ಭಟ್, ವಿನಯ ಪ್ರಸಾದ್, ನೀನಾಸಂ ಅಶ್ವಥ್ ಮುಂತಾದವರು ನಟಿಸಿದ್ದಾರೆ. ರಿಜ್ವಾನ್ ಅಹ್ಮದ್ ಸಂಗೀತ, ಚಂದ್ರಮೌಳಿ ಛಾಯಾಗ್ರಹಣ, ಋತ್ವಿಕ್‌ಶೆಟ್ಟಿ-ನವೀನ್‌ಶೆಟ್ಟಿ ಸಂಕಲನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮುಸ್ಲಿಮರಂತೆ ಬಟ್ಟೆ ತೊಟ್ಟಿರುವ ಮಹಿಳೆಯರು, ಯುವತಿಯರು ಮತ್ತು ಮಕ್ಕಳು ಕಡಿದಾದ ಬೆಟ್ಟವೊಂದರ ದಾರಿಯನ್ನು ಹಾದುಹೋಗುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆ ವಿಡಿಯೊ ಜತೆಯಲ್ಲಿ, ‘ನೋಡಿ, ಮ್ಯಾನ್ಮಾರ್‌ನಿಂದ ಭಾರತದ ಮಣಿಪುರಕ್ಕೆ ಇರುವ ಕಳ್ಳದಾರಿ. ಈ ಜನರು ತಮ್ಮ ಜೀವಕ್ಕಿರುವ ಅಪಾಯವನ್ನೂ ಲೆಕ್ಕಿಸದೆ, ಭಾರತಕ್ಕೆ ನುಸುಳುತ್ತಾರೆ. ಮಣಿಪುರ ಹಿಂಸಾಚಾರಕ್ಕೆ ಈ ಜನರೇ ಜಾವಾಬ್ದಾರರು’ ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ತಿರುಚಲಾದ ಮಾಹಿತಿ.

ಇದು ಮ್ಯಾನ್ಮಾರ್‌ನಿಂದ ಮಣಿಪುರಕ್ಕೆ ಜನರು ಒಳನುಸುಳುತ್ತಿರುವ ದೃಶ್ಯವಲ್ಲ. ಬದಲಿಗೆ ಇರಾನ್‌ನ ದೇನಾ ಪರ್ವತ ಪ್ರದೇಶವನ್ನು ಖುರ್ದ್ ಅಲೆಮಾರಿ ಜನಾಂಗದ ಜನರು ಹಾದುಹೋಗುತ್ತಿರುವ ದೃಶ್ಯ. ಈ ವಿಡಿಯೊವನ್ನು ಸುಳ್ಳು ಮಾಹಿತಿಯೊಂದಿಗೆ ಮತ್ತು ದಾರಿ ತಪ್ಪಿಸುವ ರೀತಿಯಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನಮ್ಮ ನಾವು ಕಂಡುಕೊಳ್ಳುವುದೇ ನಿಜವಾದ ಸಾರ್ಥಕತೆ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಪ್ರಖ್ಯಾತ ಸೂಫಿ ಸಂತ ಮುಲ್ಲಾ ನಸಿರುದ್ದೀನನನ್ನು ಒಂದು ಧಾರ್ಮಿಕ ಪ್ರವಚನಕ್ಕೆ ಆಹ್ವಾನಿಸಲಾಯಿತು. ‘ನನಗೆ ಪ್ರವಚನ ನೀಡಲು ಬರುವುದಿಲ್ಲ’ ಎಂದು ಆತ ಹೇಳಿದರೂ ಆಯೋಜಕರು ಒತ್ತಾಯ ಮಾಡಿ ಕರೆದೊಯ್ದಿದ್ದರು. ವೇದಿಕೆಯನ್ನೇರಿದ ಮುಲ್ಲಾ ಸಭಿಕರನ್ನು ಉದ್ದೇಶಿಸಿ ‘ನಾನು ಇಂದು ಯಾವ ವಿಷಯ ಮಾತನಾಡುತ್ತೇನೆ ಎಂದು ನಿಮಗೆಲ್ಲಾ ಗೊತ್ತೇ’ ಎಂದು ಪ್ರಶ್ನಿಸಿದ. ಸಭಿಕರು ‘ಗೊತ್ತಿಲ್ಲ’ ಎಂದರು. ‘ಗೊತ್ತಿಲ್ಲದವರಿಗೆ ಹೇಳಿ ಏನು ಪ್ರಯೋಜನ?’ ಎಂದು ಮುಲ್ಲಾ ನಿರ್ಗಮಿಸಿದ.

ಕಾರ್ಯಕ್ರಮದ ಆಯೋಜಕರು ಮುಲ್ಲಾನನ್ನು ಬಿಡದೆ ಎರಡನೇ ಬಾರಿ ಪ್ರವಚನಕ್ಕೆ ಕರೆತಂದರು. ಈ ಬಾರಿಯೂ ಮುಲ್ಲಾ ಸಭಿಕರನ್ನು ಉದ್ದೇಶಿಸಿ ‘ನಾನು ಯಾವ ವಿಷಯದ ಬಗ್ಗೆ ಮಾತನಾಡುತ್ತೇನೆಂದು ನಿಮಗೆಲ್ಲ ಗೊತ್ತೇ’ ಎಂದು ಪ್ರಶ್ನಿಸಿದ. ಈ ಬಾರಿ ಸಭಿಕರು ‘ಗೊತ್ತು’ ಎಂದು ಉತ್ತರಿಸಿದರು. ‘ಗೊತ್ತಿರುವವರಿಗೆ ಹೇಳಿ ಏನು ಪ್ರಯೋಜನ?’ ಎಂದು ಮುಲ್ಲಾ ಮತ್ತೆ ನಿರ್ಗಮಿಸಿದ!

ಕಾರ್ಯಕ್ರಮದ ಆಯೋಜಕರು ಛಲ ಬಿಡದ ತ್ರಿವಿಕ್ರಮನಂತೆ ಮೂರನೇ ಬಾರಿ ಮುಲ್ಲಾನನ್ನು ಕರೆತಂದರು. ಈ ಬಾರಿಯೂ ಮುಲ್ಲಾನದು ಅದೇ ಪ್ರಶ್ನೆ ‘ನಾನು ಯಾವ ವಿಷಯದ ಬಗ್ಗೆ ಮಾತನಾಡುತ್ತೇನೆ ಎಂದು ಗೊತ್ತೇ?’ ಜನರೂ ಈ ಬಾರಿ ಹೇಗಾದರೂ ಮಾಡಿ ಮುಲ್ಲಾನನ್ನು ಮಾತನಾಡಿಸಲೇಬೇಕೆಂದು ನಿರ್ಧರಿಸಿದ್ದರು. ಹೀಗಾಗಿ ಅರ್ಧ ಮಂದಿ ‘ಗೊತ್ತು’ ಎಂದರು, ಇನ್ನರ್ಧ ಮಂದಿ ‘ಗೊತ್ತಿಲ್ಲ’ ಎಂದರು! ಆಗ ಮುಲ್ಲಾ ನಸುನಗುತ್ತಾ ‘ಗೊತ್ತಿರುವವರು ಗೊತ್ತಿಲ್ಲದವರಿಗೆ ಹೇಳಿ’ ಎಂದು ಅಲ್ಲಿಂದ ನಿರ್ಗಮಿಸಿದ!

ನಮ್ಮ ಸ್ಥಿತಿಯೂ ಹೀಗೆಯೇ. ಎಷ್ಟೋ ವಿಷಯಗಳು ನಮಗೆ ಗೊತ್ತಿದ್ದರೂ ಅವು ನಮಗೆ ಗೊತ್ತಿದೆ ಎಂಬುದೇ ನಮಗೆ ಗೊತ್ತಿರುವುದಿಲ್ಲ! ವ್ಯಕ್ತಿತ್ವದ ವಿಸ್ತಾರದ ಅರಿವು ನಮಗೆ ಇರುವುದಿಲ್ಲ.

ಕವಿ ಎಸ್.ವಿ.ಪರಮೇಶ್ವರ ಭಟ್ಟ ಅವರು ‘ಬೆಳ್ಳಿಯ ಬಾಗಿಲು ಚಿನ್ನದ ದೇಗುಲ ಒಳಗಡೆ ಬಹು ಮುತ್ತುರತ್ನ ಬೀಗದ ಕೈ ತಂದು ಬಾಗಿಲನ್ನು ತೆಗೆಯಲು ನೀನೊಮ್ಮೆ ಮಾಡು ಪ್ರಯತ್ನ’ ಎಂಬುದಾಗಿ ನಮ್ಮಾಳದ ವ್ಯಕ್ತಿತ್ವವನ್ನು ವರ್ಣಿಸುತ್ತಾರೆ. ನಮ್ಮ ಒಳಗಡೆ ಬೆಳ್ಳಿಯ ಬಾಗಿಲನ್ನು ಹೊಂದಿರುವ ಚಿನ್ನದ ದೇಗುಲವಿದೆ. ಅದರೊಳಗೆ ವ್ಯಕ್ತಿತ್ವವೆಂಬ ಮುತ್ತುರತ್ನಗಳ ಸಂಪತ್ತಿದೆ. ಅವನ್ನು ಪಡೆದುಕೊಳ್ಳಲು ನಾವು ನಮ್ಮಲ್ಲಿಯೇ ಇರುವ ಜ್ಞಾನ, ಆತ್ಮವಿಶ್ವಾಸ, ಗುರಿ, ಪ್ರೀತಿ, ಮಾನವೀಯತೆಯ ಬೀಗದಕೈ ಬಳಸುವ ಪ್ರಯತ್ನವನ್ನು ನಿರಂತರವಾಗಿ ಮಾಡಬೇಕು.

ಮನುಷ್ಯ ಸುಖ ನೆಮ್ಮದಿಗಳಿಗಾಗಿ ನಿರಂತರ ಹುಡುಕಾಡುತ್ತಲೇ ಇದ್ದಾನೆ. ಆದರೆ ಅವನ ಸ್ಥಿತಿ ತಿಳಿದು ತಿಳಿದೂ ಏನೂ ಗೊತ್ತಿಲ್ಲ ಎನ್ನುವಂತೆ ಆಗಿದೆ. ಅದಕ್ಕೇ ಶರಣರು ಅರಿವೇ ಗುರು ಎಂದು ಹೇಳಿದ್ದು. ನಮ್ಮ ಒಳ ಆಳದ ಅರಿವೇ ಗಳಿಸಬೇಕಾದ ಸಂಪತ್ತು.

‘ನಿನ್ನೊಳಗೆ ನೀ ಹೊಕ್ಕು ನಿನ್ನನ್ನೇ ನೀ ಕಂಡು ನೀನೇ ನೀನಾಗು ಗೆಳೆಯ’ ಎಂಬ ಬೇಂದ್ರೆ ಅವರ ಸಾಲುಗಳಂತೆ ನಮ್ಮನ್ನು ನಾವು ಕಂಡುಕೊಳ್ಳುವುದೇ ಬದುಕಿನ ನಿಜವಾದ ಸಾರ್ಥಕತೆ.

ಲೇಖಕ: ವ್ಯಕ್ತಿತ್ವ ವಿಕಸನ ತರಬೇತುದಾರ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ತ್ರಯೋದಶಿ ಗಂ. 10-26 ನಕ್ಷತ್ರ: ಪುನರ್ವಸು ಗಂ. 11-07 ಯೋಗ: ಸಿದ್ಧಿ (ಆಸ್ರಿಕ್) ಗಂ. 16-40 ಕರಣ: ವಣಿಜ ಗಂ. 10-26, ಕರ್ಕಾಟಕ ಮಾಸದ 28 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4. ರಾಹುಕಾಲ : ಬೆಳಿಗ್ಗೆ 07-30 - 09-00

ಸೂರ್ಯೋದಯ : 06-21 ಸೂರ್ಯಾಸ್ತ : 06-49

ಮುಸ್ಲಿಂ ದಿನಾಂಕ : 25 ಮೊಹರಮ್

ಅದೃಷ್ಟ ಸಂಖ್ಯೆ : 10, 3

ಮೇಷ: ಕೋರ್ಟು ವ್ಯವಹಾರಗಳ ಓಡಾಟಕ್ಕೆ ಮುಕ್ತಾಯ ಸಿಗಲಿದೆ. ಕಂಪ್ಯೂಟರ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳ ಲಭ್ಯವಾಗುವುದು. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ವೃಷಭ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು; ಅದರಿಂದ ನೆಮ್ಮದಿ ಸಿಗಲಿದೆ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವಿರಿ. ದೇವತಾ ಕಾರ್ಯಗಳತ್ತ ಗಮನ ನೀಡಿ.

ಮಿಥುನ: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ. ಸಹೋದರಿಯರಲ್ಲಿ ಸ್ವ-ಪ್ರಯತ್ನದಿಂದ ಸಂಬಂಧ ಉತ್ತಮ ಪಡಿಸಿಕೊಳ್ಳಿ. ಜಮೀನು ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಾಗಲಿದೆ.

ಕರ್ಕಾಟಕ: ಋಣಬಾಧೆ, ಖರ್ಚು-ವೆಚ್ಚ, ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸಿರಿ. ಬಟ್ಟೆ ಉದ್ಯಮದವರಿಗೆ ಈ ದಿನ ಅತಿಯಾದ ಲಾಭ ಬರುವುದು. ನಿಮ್ಮ ಆರೋಗ್ಯವು ಸುಧಾರಿಸುವುದು.

ಸಿಂಹ: ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತಾಗಲಿದೆ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ. ಉದ್ಯೋಗ ವಾಸಸ್ಥಾನ ಬದಲಾಗುವಂತೆ ಆಗಲಿದೆ.

ಕನ್ಯಾ: ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಸರಿಯಾದ ಮಾರ್ಗ. ದಿನಾಂತ್ಯದಲ್ಲಿ ಅಧಿಕವಾಗಿ ದೇಹಾಯಾಸವಿರುವುದು. ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ದೂರಾಗುವುವು.

ತುಲಾ: ಅಭಿರುಚಿಗೆ ಹೊಂದುವಂಥ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವುದರಿಂದ ನೆಮ್ಮದಿ ಸಿಗುತ್ತದೆ. ನೀವು ಇತರರೆಲ್ಲರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರಗಳನ್ನು ತಗೆದುಕೊಳ್ಳುವಿರಿ.

ವೃಶ್ಚಿಕ: ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗಲಿದೆ. ಕೆಲಸದ ಪ್ರದೇಶಗಳು ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಕೃಷಿಕರಿಗೆ ಕಾಡು ಪ್ರಾಣಿಗಳ ಲೂಟಿಯಂತಹ ತೊಂದರೆಗಳು ಎದುರಾಗಬಹುದು.

ಧನು: ವಿವಾದ ಗೊಡವೆಗಳಿಂದ ದೂರ ಉಳಿಯುವಂಥ ನಿರ್ಧಾರ ಗೌರವ ಕಾಪಾಡಿಕೊಳ್ಳುವಲ್ಲಿ ಅನುಕೂಲವಾಗುತ್ತದೆ. ಬಿಡುವಿಲ್ಲದ ಕೆಲಸದಿಂದ ಬಳಲಿದ ನಿಮಗೆ ವಿಶ್ರಾಂತಿಗೆ ಸೂಕ್ತವಾದ ಸಮಯ ಸಿಗುವುದು.

ಮಕರ: ಮಹಿಳೆಯರಿಗೆ ಆದರ ಮನ್ನಣೆ ಹೆಚ್ಚಲಿದ್ದು ರಾಜಕೀಯ ಲಾಭ ಪಡೆದುಕೊಳ್ಳುವಿರಿ. ವೈಯಕ್ತಿಕ ಕೆಲಸವೊಂದಕ್ಕಾಗಿ ಸಮಯ ಮೀಸಲಿಡುವುದು ಉತ್ತಮ. ವೈವಾಹಿಕ ಮಾತುಕತೆ ಪ್ರಗತಿ ಪಥದತ್ತ ಸಾಗುವುದು.

ಕುಂಭ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ಗೃಹ ಕೃತ್ಯಗಳಿಗಾಗಿ ಮಾಡಿದ ಸಾಲಬಾಧೆ ಸ್ವಲ್ಪ ಮಟ್ಟಿಗೆ ತೀರಲಿದೆ.

ಮೀನ: ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿರುವವರು ಈ ದಿನ ನಿಮ್ಮ ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ರೂಢಿಸಿಕೊಳ್ಳ ಬೇಕಾಗುತ್ತದೆ. ತೆರಿಗೆಗೆ ಸಂಬಂಧದ ಕೆಲಸಗಳೆಲ್ಲವೂ ಪೂರ್ಣಗೊಳಿಸಲು ಪ್ರಯತ್ನಿಸಿ.

ಪದಬಂಧ 5410

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರೇಮಿಗಳ ಅಗಲಿಕೆಯ ನೋವು (3)
3.ಹಿಂದಿಯವನಿಗೆ ಬಂದಿರುವ ತೊಂದರೆ (4)
5.ರಸ ಒಸರುತ್ತಿರುವ ಜಿಹ್ವೆ (3)
7.ಕನ್ನಡಿಗನಾಡಿದ ‘ಚೆಸ್’ (4)
9.ಚಾರನ ಒಳ್ಳೆಯ ನಡತೆ (4)
12.ಲೋಹ ದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)
14.ಹಾರ ಹಿಡಿದು ಬಾಗಿಲು ಕಾಯುವವನು! (4)
15. ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ (3)

ಮೇಲಿಂದ ಕೆಳಕ್ಕೆ

1.ಹೆಂಡತಿಯನ್ನು ಕಳೆದುಕೊಂಡವನು (3)
2.ವನದ ಕೊನೆಗೆ ಮಾಡಿದ ಯಜ್ಞ (3)
3.ಈ ತರ ಸಿದ್ಧತೆಯ ಜರೂರು ಆಗಿದೆ (4)
4.ವ್ಯಾಕರಣದಲ್ಲಿ ಪುರುಷವಾಚಕ ಲಿಂಗ (3)
6.ಸೂಕ್ತವಾದುದನ್ನು ಹೀಗೆನ್ನಿ (4)
7.ಚರ್ಮದ ಕೆಲಸಗಾರನಿವನು (3)
8.ಬೇರೆಯ ಉಪಾಯವಿದು (4)
10.ಪಿಸುಣನನ್ನು ಹೀಗೂ ಕರೆವರು (4)
11.ಏಳ್ಗೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
12.ಎಡಚರು ಮಾಡಿರುವ ಅಡಚಣೆ! (3)
13.ಸಾಲ ಪಡೆದು ನೋಡಿರುವ ಸಮುದ್ರ (3)



5409ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹತ್ಯಾಕಾಂಡ 3.ಉಪೋದ್ಘಾತ
5.ಕೆಸರು 7.ದುಮ್ಮಾನ
9.ಮಧುರ 10.ಶರಣ
11.ಅಂಗದ1 5.ಕರವಾಲ
16.ಕಾರಬಾರು

ಮೇಲಿಂದ ಕೆಳಕ್ಕೆ:
1.ಹರಕೆ 2.ಡಬ್ಬು
3.ಉಮೇದುವಾರ
4.ತಖ್ತೆ 6.ಸದವಕಾಶ
8.ನರೆದಲೆಗ
9.ಮರಣಕಾಲ 12.ದರ್ಬಾರು
13.ಬಿಂಕ 14.ಕಾಕಾ

ಸುಡೊಕು 5796

	7			2		3		
3		6	5		8			
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5795 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಜಯಲಕ್ಷ್ಮಮ್ಮ (ನಿಧನ: 14-08-2021)
ದಿ. ಕೆ. ಎಸ್. ರಾಮೇಗೌಡರು
ನಿರ್ದೇಶಕರು ದಿ ಸಿಟಿಜನ್ ಕೋ. ಆಪರೇಟಿವ್ ಬ್ಯಾಂಕ ಲಿ.,
ನಿರ್ದೇಶಕರು ಸತ್ಯನಾರಾಯಣ ಹೌಸಿಂಗ್ ಸೊಸೈಟಿ
(ನಿವೃತ್ತ ಹಿರಿಯ ಟೆಕ್ನಿಕಲ್ ಅಧಿಕಾರಿ ಸಿಎಮ್‌ಟಿಐ)
(ನಿಧನ: 22-10-2021)
ಅಮ್ಮ, ಅಪ್ಪ ಕಳೆದ ಅನುದಿನವೂ, ಅನುಕ್ಷಣವೂ ನಿಮ್ಮ ನೆನಪಿಗೆ ಅರ್ಪಣೆ.
ಮಿಡಿದ ಪ್ರತಿ ಕಂಬನಿಯೂ ನಿಮ್ಮ ಪ್ರೀತಿ ವಾತ್ಸಲ್ಯಕ್ಕೆ ಸಮರ್ಪಣೆ.
ಇಂತಿ ದುಃಖತಪ್ತರು: ಶ್ರೀಮತಿ ಕೆ.ಆರ್. ನಾಗರತ್ನ ಮತ್ತು ಶ್ರೀ ಕೆ. ಶಿವಣ್ಣ
ಶ್ರೀಮತಿ ಕೆ.ಆರ್. ಭಾರತಿ ಮತ್ತು ಶ್ರೀ ಜಿ.ಎಸ್. ಲೋಕೇಶ್
ಶ್ರೀಮತಿ ಕೆ.ಆರ್. ಭಾಮಿನಿ ಮತ್ತು ಶ್ರೀ ಎಸ್. ಆರ್. ಪ್ರಕಾಶ್ ಹಾಗೂ ಮೊಮ್ಮಕ್ಕಳು.

ಸವಿನೆನಪು

ಪೈಲ್ವಾನ್ ಪಿ. ನಂಜುಂಡಪ್ಪ
ಕೊಡಿಗೇಹಳ್ಳಿ
ಸದಾ ನಿಮ್ಮನ್ನು ನೆನೆಯುತ್ತಿರುವ
ಕೆ.ಎನ್. ಚಕ್ರಪಾಣಿ
ಬಿಜೆಪಿ ಮುಖಂಡರು, ನಗರಸಭಾ ಮಾಜಿ ಸದಸ್ಯರು
ಅಧ್ಯಕ್ಷರು, ಚಕ್ರಪಾಣಿ ಫೌಂಡೇಶನ್.
ಧರ್ಮಪತ್ನಿ ಶ್ರೀಮತಿ ಜಯಮ್ಮ, ಮಕ್ಕಳು, ಮೊಮ್ಮಕ್ಕಳು,
ಕುಟುಂಬ ವರ್ಗ, ಸ್ನೇಹಿತರು ಮತ್ತು ಅಪಾರ ಬಂಧು-ಬಳಗ.
ಕೊಡಿಗೇಹಳ್ಳಿ, ವಿರುಪಾಕ್ಷಪುರ, ಬೆಂಗಳೂರು- 560097

ಹಿಂಡನ್‌ಬರ್ಗ್ ವರದಿ: ಬಾಹ್ಯ ತನಿಖೆ ಬಯಸಿದ್ದ ಡೆಲಾಯ್ಟ್

ನವದೆಹಲಿ (ಪಿಟಿಐ): ಅದಾನಿ ಸಮೂಹಕ್ಕೆ ಸೇರಿದ ಕಂಪನಿಯೊಂದರ ಲೆಕ್ಕಪರಿಶೋಧಕ ಸ್ಥಾನಕ್ಕೆ ರಾಜೀನಾಮೆ ನೀಡುವ ಮೊದಲು ಡೆಲಾಯ್ಟ್ ಕಂಪನಿಯು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಮಾಡಿರುವ ಆರೋಪಗಳ ಬಗ್ಗೆ ಬಾಹ್ಯ ತನಿಖೆ ನಡೆಸುವಂತೆ ಒತ್ತಾಯಿಸಿತ್ತು.

ಹಿಂಡನ್‌ಬರ್ಗ್ ಸಂಸ್ಥೆಯ ಆರೋಪಗಳು ತನ್ನ ಆರ್ಥಿಕ ಲೆಕ್ಕಪತ್ರಗಳ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂದು ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ (ಎಪಿಎಸ್‌ಇಜೆಡ್) ಕಂಪನಿ ಹೇಳಿದೆ. ಲೆಕ್ಕಪರಿಶೋಧಕ ಸ್ಥಾನಕ್ಕೆ ರಾಜೀನಾಮೆ ನೀಡಲು ಡೆಲಾಯ್ಟ್ ನೀಡಿರುವ ಕಾರಣಗಳು ಒಪ್ಪುವಂತಹದ್ದಾಗಿಲ್ಲ ಎಂದು ಎಪಿಎಸ್‌ಇಜೆಡ್ ಹೇಳಿದೆ.

ಡೆಲಾಯ್ಟ್ ಸ್ಥಾನಕ್ಕೆ ಲೆಕ್ಕಪರಿಶೋಧಕ ಸಂಸ್ಥೆಯಾಗಿ ಎಂಎಸ್‌ಕೆಎ ಆ್ಯಂಡ್ ಅಸೋಸಿಯೇಟ್ಸ್ ಅನ್ನು ಅದಾನಿ ಪೋರ್ಟ್ಸ್ ನೇಮಿಸಿದ್ದು, 2024ರಲ್ಲಿ ನಡೆಯಲಿರುವ ವಾರ್ಷಿಕ ಸಾಮಾನ್ಯ ಸಭೆಯವರೆಗೂ ಸಂಸ್ಥೆಯು ಲೆಕ್ಕಪರಿಶೋಧಕ ಆಗಿ ಕೆಲಸ ಮಾಡಲಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹515
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹265-568
ದ್ವಿತಳಿ (ಬಿ.ವಿ) ₹325-656

ಹಣಕಾಸು ಯೋಜನೆಗೆ 3 ಲೆಕ್ಕಾಚಾರ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹಣಕಾಸು ಯೋಜನೆ ರೂಪಿಸುವಾಗ ಬೆಲೆ ಏರಿಕೆ, ಹೂಡಿಕೆ ಮೇಲಿನ ಗಳಿಕೆ ಮತ್ತು ನಿವೃತ್ತಿ ನಂತರದ ಬದುಕನ್ನು ಗಣನೆಗೆ ತೆಗೆದುಕೊಳ್ಳುವುದು ಮುಖ್ಯ. ಮೂರು ಲೆಕ್ಕಾಚಾರಗಳನ್ನು ಆಧರಿಸಿ ಹಣಕಾಸು ಯೋಜನೆಯನ್ನು ಹೆಚ್ಚು ವಾಸ್ತವಿಕವಾಗಿ ರೂಪಿಸುವುದು ಹೇಗೆ ಎಂಬುದನ್ನು ತಿಳಿಯೋಣ.

ಬೆಲೆ ಏರಿಕೆ: ಹೂಡಿಕೆ ಮಾಡುವಾಗ ಪರಿಗಣಿಸಲೇಬೇಕಾದ ಪ್ರಮುಖ ಅಂಶ ಬೆಲೆ ಏರಿಕೆ ಅಥವಾ ಹಣದುಬ್ಬರ. ಸುಮಾರು 15 ವರ್ಷಗಳ ಹಿಂದೆ ಜಾಮೂನ್ ಬಾಕ್ಸ್ ಬೆಲೆ ಸುಮಾರು ₹60ರಿಂದ ₹70 ಇತ್ತು. ಇಂದು ಅದರ ಬೆಲೆ ₹150ರಿಂದ ₹250 ಆಗಿದೆ. ಬೆಲೆ ಏರಿಕೆಯಿಂದಾಗಿ ವರ್ಷದಿಂದ ವರ್ಷಕ್ಕೆ ಹಣ ಮೌಲ್ಯ ಕಳೆದುಕೊಳ್ಳುತ್ತದೆ ಎನ್ನುವುದನ್ನು ಇದು ಸರಳವಾಗಿ ತಿಳಿಸುತ್ತದೆ. ಸದ್ಯ ಹಣದುಬ್ಬರ ದರ ಶೇ 6ರಷ್ಟಿದೆ ಎಂದು ಭಾವಿಸೋಣ. ನಿಮ್ಮ ತಿಂಗಳ ಖರ್ಚು ₹50,000 ಎಂದುಕೊಳ್ಳೋಣ. ಈ ಲೆಕ್ಕಾಚಾರದ ಪ್ರಕಾರ, 20 ವರ್ಷದ ಬಳಿಕ ತಿಂಗಳ ಖರ್ಚು ₹1.60 ಲಕ್ಷ ಆಗುತ್ತದೆ. ನಿವೃತ್ತಿಗಾಗಿ ಹೂಡಿಕೆ ಮಾಡುವಾಗ ಸರಾಸರಿ ಶೇ 6ರಷ್ಟು ಬೆಲೆ ಏರಿಕೆಯನ್ನು ಪರಿಗಣಿಸುವುದು ಸೂಕ್ತ. ಆದರೆ ಮಕ್ಕಳ ಶಿಕ್ಷಣಕ್ಕೆ ಹೂಡಿಕೆ ಮಾಡುವಾಗ ಸರಾಸರಿ ಶೇ 10ರಿಂದ ಶೇ 12ರಷ್ಟು ಹಣದುಬ್ಬರ ಪರಿಗಣಿಸಬೇಕಾಗುತ್ತದೆ.

ಉದಾಹರಣೆಗೆ, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಶುಲ್ಕವು 16 ವರ್ಷಗಳಲ್ಲಿ ವಾರ್ಷಿಕ ಸರಾಸರಿ ಶೇ 12.7ರಷ್ಟು ಹೆಚ್ಚಾಗಿದೆ. ಇದೇ ವೇಗದಲ್ಲಿ ಶುಲ್ಕ ಹೆಚ್ಚಳ ಮುಂದುವರಿದರೆ 2040ರಲ್ಲಿ ಅಲ್ಲಿ ವ್ಯಾಸಂಗಕ್ಕೆ ₹2.5 ಕೋಟಿ ಬೇಕಾಗುತ್ತದೆ. ನೀವು 'ಇವತ್ತು ನಿವೃತ್ತಿ ಹೊಂದಿದರೆ ನಿವೃತ್ತಿ ಜೀವನಕ್ಕೆ ₹2 ಕೋಟಿಯ ಇಡುಗಂಟು ಬೇಕು ಎಂದು ಭಾವಿಸಿ. ಇದೇ ಲೆಕ್ಕಾಚಾರದಲ್ಲಿ 25 ವರ್ಷಗಳ ಬಳಿಕ ನಿಮ್ಮ ನಿವೃತ್ತಿ ಜೀವನ ನಿರ್ವಹಣೆಗೆ ₹8.58 ಕೋಟಿ ಬೇಕಾಗುತ್ತದೆ. ಮಕ್ಕಳ ಶಿಕ್ಷಣಕ್ಕೆ ಇಂದಿನ ಲೆಕ್ಕಾಚಾರದಲ್ಲಿ ₹20 ಲಕ್ಷ ಬೇಕು ಎಂದಾದಲ್ಲಿ 15 ವರ್ಷಗಳ ಬಳಿಕ ₹83.54 ಲಕ್ಷ ಬೇಕಾಗುತ್ತದೆ.

ಹೂಡಿಕೆ ಮೇಲಿನ ಗಳಿಕೆ: ಹೂಡಿಕೆ ಗುರಿ ನಿಗದಿಯಾದ ಮೇಲೆ ಪರಿಗಣಿಸಬೇಕಿರುವ ಮತ್ತೊಂದು ಮುಖ್ಯ ಅಂಶ ಹೂಡಿಕೆ ಮೇಲಿನ ಗಳಿಕೆ. ನಾವು ಹೂಡಿಕೆ ಮಾಡುವ ಮೊತ್ತದ ಮೇಲೆ ಸಿಗುವ ಲಾಭವು ಹೂಡಿಕೆ ಮೇಲಿನ ಗಳಿಕೆ. ಹೆಚ್ಚು ಲಾಭಾಂಶ ಇರುವ ಹೂಡಿಕೆಗಳನ್ನು ಪರಿಗಣಿಸಿದಾಗ ನೀವು ಹೂಡಿಕೆ ಮಾಡಬೇಕಿರುವ ಮಾಸಿಕ ಮೊತ್ತದ ಹಣ ತಗ್ಗುತ್ತದೆ. ಅದೇ ರೀತಿ ಕಡಿಮೆ ಲಾಭಾಂಶ ಇರುವ ಹೂಡಿಕೆಗಳನ್ನು ಆಯ್ಕೆ ಮಾಡಿಕೊಂಡಾಗ ನೀವು ಹೂಡಿಕೆ ಮಾಡಬೇಕಿರುವ ಮಾಸಿಕ ಹಣದ ಪ್ರಮಾಣ ಹೆಚ್ಚಾಗುತ್ತದೆ. ಷೇರು ಅಥವಾ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ದೀರ್ಘಾವಧಿಯಲ್ಲಿ ಶೇ 12ರಿಂದ ಶೇ 13ರಷ್ಟು ಲಾಭಾಂಶ ನಿರೀಕ್ಷೆ ಮಾಡಬಹುದು. ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಿಗೆ ಬೆಲೆ ಏರಿಕೆ ಪ್ರಮಾಣವನ್ನು ಮೀರಿದ ಲಾಭ ತಂದುಕೊಡುವ ಸಾಮರ್ಥ್ಯವಿದೆ.

ಉಳಿದಂತೆ ಡೆಟ್ ಮ್ಯೂಚುವಲ್ ಫಂಡ್, ನಿಶ್ಚಿತ ಠೇವಣಿಗಳು ಮತ್ತು ಪಿಪಿಎಫ್ ಹೂಡಿಕೆಗಳಲ್ಲಿ ಶೇ 6.5ರಿಂದ ಶೇ 7.5ರವರೆಗೆ ಬಡ್ಡಿ ಲಾಭ ನಿರೀಕ್ಷೆ ಮಾಡಬಹುದು.

ಜೀವಿತಾವಧಿಯ ಲೆಕ್ಕಾಚಾರ: ಹಣಕಾಸು ಯೋಜನೆ ರೂಪಿಸುವಾಗ ನಿವೃತ್ತಿಯ ನಂತರದ ಜೀವಿತಾವಧಿ ಎಷ್ಟು ಎನ್ನುವುದು ಪರಿಗಣಿಸಬೇಕಿರುವುದು ಮತ್ತೊಂದು ಪ್ರಮುಖ ಅಂಶ. ಜನಗಣತಿ ದತ್ತಾಂಶದ ಪ್ರಕಾರ ಭಾರತದಲ್ಲಿ ಸರಾಸರಿ ಜೀವಿತಾವಧಿ 69 ವರ್ಷಗಳು. ಆದರೆ ವೈದ್ಯಕೀಯ ಸೇವೆಗಳ ಉನ್ನತೀಕರಣದಿಂದಾಗಿ ಜೀವಿತಾವಧಿ ಸರಾಸರಿ 75ರಿಂದ 80 ವರ್ಷಗಳವರೆಗೆ ಏರಿಕೆಯಾಗಿದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ನಿವೃತ್ತಿಯ ನಂತರದ ಬದುಕಿಗೆ ಎಷ್ಟು ಹಣ ಬೇಕಾಗುತ್ತದೆ?

ನಿರೀಕ್ಷಿತ ಜೀವಿತಾವಧಿ (ವರ್ಷಗಳಲ್ಲಿ)	ನಿವೃತ್ತಿಯ ನಂತರದ ವರ್ಷಗಳು	ನಿವೃತ್ತಿ ಜೀವನಕ್ಕೆ ಬೇಕಾಗುವ ಹಣ	ಮಾಡಬೇಕಿರುವ ಮಾಸಿಕ ಹೂಡಿಕೆ
80	20	₹4.33 ಕೋಟಿ	₹23,085
85	25	₹5.19 ಕೋಟಿ	₹27,629
90	30	₹5.96 ಕೋಟಿ	₹31,767

(ಗಮನಿಸಿ: ಇಲ್ಲಿ ವಾರ್ಷಿಕ ಹಣದುಬ್ಬರ ದರ ಶೇ 6, ನಿವೃತ್ತಿಗೂ ಮೊದಲಿನ ಹೂಡಿಕೆ ಮೇಲಿನ ನಿರೀಕ್ಷಿತ ಲಾಭಾಂಶ ಶೇ 12, ನಿವೃತ್ತಿ ನಂತರದಲ್ಲಿ ಹೂಡಿಕೆ ಮೇಲಿನ ನಿರೀಕ್ಷಿತ ಲಾಭಾಂಶ ಶೇ 8 ಮತ್ತು ನಿವೃತ್ತಿ ಹೊಂದುವ ವ್ಯಕ್ತಿಯ ಸದ್ಯದ ಮಾಸಿಕ ವೆಚ್ಚ ₹50 ಸಾವಿರ ಎಂದು ಭಾವಿಸಲಾಗಿದೆ.)

ಹಣ ಹೇಗೆ ಮೌಲ್ಯ ಕಳೆದುಕೊಳ್ಳುತ್ತದೆ?

ಗುರಿ	ಗುರಿಗೆ ಈಗ ಬೇಕಾಗುವ ಮೊತ್ತ	ಹಣದುಬ್ಬರ ದರ	ಗುರಿಗೆ ಇರುವ ವರ್ಷಗಳು	ಗುರಿಗೆ ಭವಿಷ್ಯದಲ್ಲಿ ಬೇಕಾಗುವ ಮೊತ್ತ
ನಿವೃತ್ತಿ	₹2 ಕೋಟಿ	ಶೇ 6	25	₹8.58 ಕೋಟಿ
ಮಕ್ಕಳ ಶಿಕ್ಷಣ	₹20 ಲಕ್ಷ	ಶೇ 10	15	₹83.54 ಲಕ್ಷ

ಷೇರುಪೇಟೆ

ಮೂರನೇ ವಾರವೂ ಕುಸಿತ

ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಕುಸಿತ ದಾಖಲಿಸಿವೆ. ಆಗಸ್ಟ್ 11ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಇಳಿಕೆಯಾಗಿವೆ. 65,322 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.60ರಷ್ಟು ಇಳಿದಿದೆ. 19,428 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.45ರಷ್ಟು ಕುಸಿದಿದೆ. ಮಾರುಕಟ್ಟೆಯಲ್ಲಿ ಒಂದು ರೀತಿಯ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯ ತೀರ್ಮಾನಗಳು, ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳ, ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರ ಹೆಚ್ಚಳ ಪ್ರಕ್ರಿಯೆಯನ್ನು ನಿಲ್ಲಿಸಬಹುದು ಎಂಬ ನಿರೀಕ್ಷೆ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕಗಳು ತಲಾ ಶೇ 1.5ರಷ್ಟು ಕುಸಿದಿವೆ. ನಿಫ್ಟಿ ಎಫ್‌ಎಂಸಿಜಿ ಸೂಚ್ಯಂಕ ಕೂಡ ಶೇ 1ರಷ್ಟು ಇಳಿದಿದೆ. ಆದರೆ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 7ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 3ರಷ್ಟು ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.2ರಷ್ಟು ಗಳಿಕೆ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,702.06 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹2,224.3 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 0.5ರಷ್ಟು ಕುಸಿದಿದ್ದು, ಇನ್ಫೊ ಎಜ್ ಇಂಡಿಯಾ, ಬ್ರಿಟಾನಿಯಾ ಇಂಡಸ್ಟ್ರೀಸ್, ಏಷ್ಯನ್ ಪೇಂಟ್ಸ್, ಅದಾನಿ ಗ್ರೀನ್ ಎನರ್ಜಿ, ಅದಾನಿ ವಿಲ್ಮರ್, ವೇದಾಂತ ಮತ್ತು ಐಸಿಐಸಿಐ ಪ್ರೂಡೆನ್ಶಿಯಲ್ ಕಂಪನಿಗಳು ಕುಸಿತ ದಾಖಲಿಸಿವೆ. ಪೇಟಿಎಂ, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ, ಮಹಿಂದ್ರ ಆ್ಯಂಡ್ ಮಹೀಂದ್ರ, ಅದಾನಿ ಟ್ರಾನ್ಸ್‌ಮಿಷನ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಬಜಾಜ್ ಹೆಲ್ತ್ ಕೇರ್, ಬಾಲಕೃಷ್ಣ ಪೇಪರ್ ಮಿಲ್ಸ್, ಕಾಫಿ ಡೇ, ವೋಡಾಫೋನ್ ಐಡಿಯಾ, ಐಟಿಸಿ, ಪಿಸಿ ಜ್ಯುವೆಲರ್, ಕೋಹಿನೂರ್ ಫುಡ್ಸ್ ಲಿ. ಸೇರಿ ಹಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಹಬ್ಬದ ಋತು: 10 ಲಕ್ಷ ಪ್ರಯಾಣಿಕ ವಾಹನ ಮಾರಾಟ ನಿರೀಕ್ಷೆ

ನವದೆಹಲಿ (ಪಿಟಿಐ): ಈ ವರ್ಷದ ಹಬ್ಬದ ಋತುವಿನಲ್ಲಿ ಪ್ರಯಾಣಿಕ ವಾಹನಗಳ ದೇಶಿ ಮಾರಾಟವು 10 ಲಕ್ಷವನ್ನು ದಾಟುವ ನಿರೀಕ್ಷೆ ಇದೆ ಎಂದು ಮಾರುತಿ ಸುಜುಕಿ ಇಂಡಿಯಾದ ಮಾರುಕಟ್ಟೆ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಾಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಒಟ್ಟಾರೆ ಬೇಡಿಕೆ ಉತ್ತಮವಾಗಿದೆ. ಅದರಲ್ಲಿಯೂ ಯುಟಿಲಿಟಿ ವಾಹನಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಮಾರಾಟ ಹೆಚ್ಚಾಗುವ ಸಾಧ್ಯತೆ ಇದೆ ಎಂದಿದ್ದಾರೆ.

ಆಗಸ್ಟ್ 17ರಿಂದ ನವೆಂಬರ್ 14ರವರೆಗೆ ಹಬ್ಬದ ಋತು ಇರಲಿದೆ. ವರ್ಷದ ಒಟ್ಟು ಮಾರಾಟದಲ್ಲಿ ಹಬ್ಬದ ಅವಧಿ ಮಾರಾಟದ ಪ್ರಮಾಣವು ಶೇ 22ರಿಂದ ಶೇ 26ರವರೆಗೆ ಇರುತ್ತದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಪ್ರಯಾಣಿಕ ವಾಹನಗಳ ಮಾರಾಟವು 40 ಲಕ್ಷ ಆಗುವ ಅಂದಾಜು ಮಾಡಲಾಗಿದ್ದು, ಹಬ್ಬದ ಋತುವಿನ ಅವಧಿಯಲ್ಲಿ ಮಾರಾಟವು 10 ಲಕ್ಷ ಆಗುವ ನಿರೀಕ್ಷೆ ಇದೆ ಎಂದಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಉತ್ತಮ ಮಾರಾಟ ಆಗಿದೆ. ಜುಲೈನಲ್ಲಿ 3.52 ಲಕ್ಷ ಮಾರಾಟ ಆಗಿದ್ದು, ತಿಂಗಳೊಂದರಲ್ಲಿ ಎರಡನೇ ಗರಿಷ್ಠ ಮಾರಾಟ ಇದಾಗಿದೆ ಎಂದಿದ್ದಾರೆ.

ವಾಹನ ಸಾಲದ ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದು ಆತಂಕಕಾರಿ ವಿಷಯವಾಗಿದೆ. ಏಕೆಂದರೆ ಕಾರು ಖರೀದಿಸುವವರಲ್ಲಿ ಶೇ 83ರಷ್ಟು ಮಂದಿ ಸಾಲ ಮಾಡುತ್ತಾರೆ ಎಂದು ಅವರು ಹೇಳಿದ್ದಾರೆ.

'ಆದಿವಾಸಿಗಳನ್ನು ಕಾಡಿಗೆ ಸೀಮಿತಗೊಳಿಸಲು ಯತ್ನ'

ಬಿಜೆಪಿಯಿಂದ ವನವಾಸಿ ಪದ ಬಳಕೆ: ರಾಹುಲ್ ಆರೋಪ

ವಯನಾಡ್ (ಕೇರಳ) (ಪಿಟಿಐ): ಕೇಂದ್ರದ ಆಡಳಿತಾರೂಢ ಬಿಜೆಪಿಯು ಬುಡಕಟ್ಟು ಸಮುದಾಯಗಳನ್ನು ಅರಣ್ಯಕ್ಕೆ ಸೀಮಿತಗೊಳಿಸಲು ಮತ್ತು ಅವರನ್ನು ಆದಿವಾಸಿಗಳು ಎನ್ನುವ ಬದಲು 'ವನವಾಸಿ'ಗಳೆಂದು ಕರೆಯುವ ಮೂಲಕ ಭೂಮಿಯ ಮೂಲ ಮಾಲೀಕರ ಸ್ಥಾನ ಕಸಿದುಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದ್ದಾರೆ.

ವಯನಾಡು ಜಿಲ್ಲೆಯ ಮಾನಂದವಾಡಿ ಪ್ರದೇಶದ ನಲ್ಲೂರ್ನಾಡ್‌ನಲ್ಲಿರುವ ಡಾ. ಅಂಬೇಡ್ಕರ್ ಜಿಲ್ಲಾ ಸ್ಮಾರಕ ಕ್ಯಾನ್ಸರ್ ಕೇಂದ್ರದಲ್ಲಿ ಎಚ್‌ಟಿ ಸಂಪರ್ಕ ಉದ್ಘಾಟಿಸಿ ಅವರು ಮಾತನಾಡಿದರು.

'ಆದಿವಾಸಿಗಳನ್ನು ವನವಾಸಿಗಳು ಎಂದು ಕರೆಯುವುದರ ಹಿಂದೆ 'ವಿಕೃತ ತರ್ಕ' ಇದೆ. 'ನೀವು (ಆದಿವಾಸಿಗಳು) ಭೂಮಿಯ ಮೂಲ ಮಾಲೀಕರು ಎಂಬುದನ್ನು ಅಲ್ಲಗಳೆಯಲು ಮತ್ತು ನಿಮ್ಮನ್ನು ಕಾಡಿಗೆ ಸೀಮಿತಗೊಳಿಸುವುದು ಈ ತರ್ಕದ ಉದ್ದೇಶವಾಗಿದೆ. ನೀವು ಕಾಡಿನಲ್ಲಿದ್ದೀರಿ, ನೀವು ಕಾಡು ತೊರೆಯಬಾರದೆಂಬ ಕಲ್ಪನೆಯೂ ಅವರದು' ಎಂದು ರಾಹುಲ್ ಆರೋಪಿದರು.

ಕೇರಳದ ವಯನಾಡು ಜಿಲ್ಲೆಯ ಮಾನಂದವಾಡಿ ಪ್ರದೇಶದ ನಲ್ಲೂರ್ನಾಡ್‌ನಲ್ಲಿ ಇರುವ ಟ್ರೈಬಲ್ ಸ್ಪೆಷಾಲಿಟಿ ಆಸ್ಪತ್ರೆಯ ಡಾ. ಅಂಬೇಡ್ಕರ್ ಜಿಲ್ಲಾ ಸ್ಮಾರಕ ಕ್ಯಾನ್ಸರ್ ಕೇಂದ್ರದಲ್ಲಿ ಎಚ್‌ಟಿ ಸಂಪರ್ಕವನ್ನು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಉದ್ಘಾಟಿಸಿದರು – ಪಿಟಿಐ ಚಿತ್ರ

'ವನವಾಸಿ ಪದವು ಬುಡಕಟ್ಟು ಸಮುದಾಯಗಳ ಇತಿಹಾಸ ಮತ್ತು ಸಂಪ್ರದಾಯಗಳನ್ನು ವಿರೂಪಗೊಳಿಸುತ್ತದೆ. ಅಲ್ಲದೆ, ದೇಶದೊಂದಿಗಿನ ಅವರ ಸಂಬಂಧದ ಮೇಲಿನ ದಾಳಿಯೂ ಆಗಿದೆ. ನಮಗೆ (ಕಾಂಗ್ರೆಸ್) ನೀವು ಆದಿವಾಸಿಗಳು, ಭೂಮಿಯ ಮೂಲ ಮಾಲೀಕರು. ಈ ಸಿದ್ಧಾಂತವು ಆ ಪಕ್ಷಕ್ಕೆ (ಬಿಜೆಪಿ) ರುಚಿಸುವುದಿಲ್ಲ' ಎಂದರು.

ಕೋಯಿಕ್ಕೋಡ್ ವರದಿ: ಈಶಾನ್ಯ ರಾಜ್ಯ ಮಣಿಪುರದಲ್ಲಿ ಹಿಂಸಾಚಾರ ಮುಂದುವರಿದಿರುವುದು ಆಘಾತ ಉಂಟು ಮಾಡಿದೆ. ಇದು ತಕ್ಷಣ ನಿಲ್ಲಬೇಕಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭಾನುವಾರ ಹೇಳಿದ್ದಾರೆ.

'ದ್ವೇಷ ಮತ್ತು ವಿಭಜನೆಯ ರಾಜಕೀಯದಿಂದಾಗಿ ಈ ಗಲಭೆ ನಡೆದಿದೆ' ಎಂದಿರುವ ಅವರು, 'ಎಲ್ಲರೂ ಒಂದೇ ಕುಟುಂಬದಂತೆ ಜೊತೆಯಾಗಿ ನಿಲ್ಲುವ ಅಗತ್ಯವಿದೆ' ಎಂದಿದ್ದಾರೆ.

ನೂಹ್: 28ರಂದು ವಿಎಚ್‌ಪಿ ಯಾತ್ರೆ ಪುನರಾರಂಭ

ಗುರುಗ್ರಾಮ/ಪಲ್ವಾಲ್ (ಪಿಟಿಐ): ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ಬ್ರಜ್ ಮಂಡಲ್ ಯಾತ್ರೆಯನ್ನು ಇದೇ 28 ರಂದು ನೂಹ್‌ನಿಂದ ಪುನರಾರಂಭಿಸುವುದಾಗಿ ಹರಿಯಾಣದ ಪಲ್ವಾಲ್ ಸಮೀಪ ಭಾನುವಾರ ಹಮ್ಮಿಕೊಂಡಿದ್ದ ಮಹಾಪಂಚಾಯತ್‌ನಲ್ಲಿ ಘೋಷಿಸಲಾಗಿದೆ.

ಜುಲೈ 31ರಂದು ಯಾತ್ರೆ ಮೇಲೆ ನಡೆದ ದಾಳಿ ಕುರಿತು ಎನ್‌ಐಎ ತನಿಖೆ ನಡೆಸಬೇಕು ಮತ್ತು ಗೋ ಹತ್ಯಾ ಮುಕ್ತ ಜಿಲ್ಲೆ ನೂಹ್ ಎಂದು ಘೋಷಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟಿದೆ. ಹಿಂದೂ ಸಂಘಟನೆಗಳ ನೇತೃತ್ವದಲ್ಲಿ ನಡೆದ ಮಹಾಪಂಚಾಯತ್‌ನಲ್ಲಿ ಪಲ್ವಾಲ್, ಗುರುಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶದ ಜನರು ಪಾಲ್ಗೊಂಡಿದ್ದರು ಎಂದು ಮೂಲಗಳು ಹೇಳಿವೆ.

ಯಾತ್ರೆಯು ಫಿರೋಜ್‌ಪುರ ಜಿರ್ಕಾ ಬಳಿಯ ದೇವಾಲಯಗಳನ್ನು ಹಾದು ಹೋಗಲಿದೆ ಎಂದು ವಿಎಚ್‌ಪಿ ಮುಖಂಡ ದೇವೇಂದರ್ ಸಿಂಗ್ ತಿಳಿಸಿದ್ದಾರೆ.

ಶರದ್–ಅಜಿತ್ ಪವಾರ್ ರಹಸ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ಮುಂಬೈ: ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ವು ಮೂರನೇ ಸಭೆಯನ್ನು ಮುಂಬೈನಲ್ಲಿ ನಡೆಸಲು ಸಿದ್ಧತೆ ನಡೆಸುತ್ತಿರುವ ನಡುವೆಯೇ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಪುಣೆಯಲ್ಲಿ ರಹಸ್ಯ ಮಾತುಕತೆ ನಡೆಸಿರುವುದು ಮಹಾರಾಷ್ಟ್ರದ ರಾಜಕೀಯ ವಲಯದಲ್ಲಿ ಸಂಚಲನ ಸೃಷ್ಟಿಸಿದೆ.

ಕೈಗಾರಿಕೋದ್ಯಮಿ ಅತುಲ್ ಚೋರ್ಡಿಯಾ ಅವರ ಪುಣೆಯ ಕೋರೆಗಾಂವ್ ಪಾರ್ಕ್‌ನಲ್ಲಿರುವ ನಿವಾಸದಲ್ಲಿ ಶರದ್ ಪವಾರ್ ಮತ್ತು ಅಜಿತ್ ಪವಾರ್ ಅವರು ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಮಾತುಕತೆಯು 'ಮಹಾ ವಿಕಾಸ್ ಅಘಾಡಿ'ಯಲ್ಲಿ ಗೊಂದಲ ಸೃಷ್ಟಿಸಿದೆ ಎಂದೂ ಹೇಳಿವೆ. ರಹಸ್ಯ ಮಾತುಕತೆಯ ಬಗ್ಗೆ ಅಜಿತ್ ಪವಾರ್ ಅವರು ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ.

ರಹಸ್ಯ ಮಾತುಕತೆಯ ಬಗ್ಗೆ ಸೊಲ್ಲಾಪುರದಲ್ಲಿ ಪ್ರತಿಕ್ರಿಯಿಸಿರುವ ಶರದ್ ಪವಾರ್, 'ಅಜಿತ್ ಪವಾರ್ ನನ್ನ ಸಂಬಂಧಿ. ನಾವು ಪರಸ್ಪರ ಭೇಟಿಯಾದರೆ ತಪ್ಪೇನು?' ಎಂದು ಪ್ರಶ್ನಿಸಿದ್ದಾರೆ. ಕುಟುಂಬದ ಹಿರಿಯ ವ್ಯಕ್ತಿ ಇನ್ನೊಬ್ಬ ಕುಟುಂಬ ಸದಸ್ಯನನ್ನು ಭೇಟಿಯಾಗುವುದರಲ್ಲಿ ತಪ್ಪಿಲ್ಲ ಎಂದಿದ್ದಾರೆ.

'ಎನ್‌ಸಿಪಿಯು ಬಿಜೆಪಿ ಜೊತೆ ಹೋಗುವುದಿಲ್ಲ. ಬಿಜೆಪಿ ಜೊತೆಗಿನ ಯಾವುದೇ ರೀತಿಯ ಸಂಬಂಧವು ಪಕ್ಷದ ರಾಜಕೀಯ ನೀತಿಗೆ ಹೊಂದಾಣಿಕೆಯಾಗದು' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೊಹಾನಸ್‌ಬರ್ಗ್‌ನಲ್ಲಿ 'ಇಂಡಿಯಾ ಡೇ' ಸಂಭ್ರಮ

ಜೊಹಾನಸ್‌ಬರ್ಗ್ (ಪಿಟಿಐ): ಭಾರತದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಇಲ್ಲಿನ ವಾಂಡರರ್ಸ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಇಂಡಿಯಾ ಡೇ'ನಲ್ಲಿ 15,000ಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು.

ದಕ್ಷಿಣ ಆಫ್ರಿಕಾದ ಆರ್ಥಿಕ ಕೇಂದ್ರವಾದ ಜೊಹಾನ್ಸ್‌ಬರ್ಗ್‌ನಲ್ಲಿ ನೆಲೆಸಿರುವ ವಲಸಿಗ ಭಾರತೀಯರನ್ನು ಒಳಗೊಂಡಿರುವ 'ಇಂಡಿಯಾ ಕ್ಲಬ್' ಈ ಕಾರ್ಯಕ್ರಮ ಆಯೋಜಿಸಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಸಂಘಗಳನ್ನು ಕಟ್ಟಿಕೊಂಡಿರುವ ಭಾರತದ ಮೂಲದವರ ಮನರಂಜನೆಗೆ ಈ ಸಮಾರಂಭ ಸಾಕ್ಷಿಯಾಯಿತು. ಇದರಲ್ಲಿ ದಕ್ಷಿಣ ಆಫ್ರಿಕಾದ ಸ್ಥಳೀಯ ಕಲಾವಿದರೂ ಭಾಗವಹಿಸಿದ್ದರು. ದಕ್ಷಿಣ ಆಫ್ರಿಕಾದ ಹಲವಾರು ಭಾರತೀಯ ಕಂಪನಿಗಳು ತಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ಒಳಗೊಂಡ ಮಳಿಗೆಗಳನ್ನು ಸಮಾರಂಭದಲ್ಲಿ ತೆರೆದಿದ್ದವು. ಭಾರತ ಮತ್ತು ದಕ್ಷಿಣ ಆಫ್ರಿಕಾದ ಆಹಾರ ಮಳಿಗೆಗಳ ಎದುರು ಜನ ಸರತಿಯಲ್ಲಿ ನಿಂತಿದ್ದರು.

ಲೂನಾ–25 ರವಾನಿಸಿದ ದತ್ತಾಂಶ ವಿಶ್ಲೇಷಣೆ: ರಷ್ಯಾ

ಮಾಸ್ಕೊ (ರಾಯಿಟರ್ಸ್): 'ಲೂನಾ -25' ಗಗನ ನೌಕೆಯಲ್ಲಿನ ವೈಜ್ಞಾನಿಕ ಉಪಕರಣಗಳು ಕಾರ್ಯಾರಂಭ ಮಾಡಿದ ಬಳಿಕ ಲಭ್ಯವಾದ ಮೊದಲ ದತ್ತಾಂಶಗಳನ್ನು ವಿಜ್ಞಾನಿಗಳು ವಿಶ್ಲೇಷಿಸಲು ಆರಂಭಿಸಿದ್ದಾರೆ ಎಂದು ರಷ್ಯಾದ ಬಾಹ್ಯಾಕಾಶ ಸಂಸ್ಥೆ 'ರೊಸ್ಕೋಸ್ಮಾಸ್' ಭಾನುವಾರ ತಿಳಿಸಿದೆ.

'ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ ಚಂದ್ರನತ್ತ 'ಲೂನಾ–25' ಗಗನ ನೌಕೆ ಪಯಣಿಸುತ್ತಿದೆ. ಅದರಲ್ಲಿನ ಸ್ವಯಂ ಚಾಲಿತ ಕೇಂದ್ರದ ಎಲ್ಲಾ ವ್ಯವಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದರೊಂದಿಗಿನ ಸಂವಹನ ಸ್ಥಿರವಾಗಿದೆ ಹಾಗೂ ಇಂಧನವೂ ಸಮತೋಲನವಾಗಿದೆ' ಎಂದು ರೊಸ್ಕೊಸ್ಮೊಸ್ ಹೇಳಿಕೆ ತಿಳಿಸಿದೆ.

ಚಂದ್ರನ ದಕ್ಷಿಣ ಧ್ರುವದ ಮೇಲೆ ಸಾಫ್ಟ್ ಲ್ಯಾಂಡ್ ಮಾಡಿದ ಮೊದಲ ರಾಷ್ಟ್ರವಾಗಬೇಕು ಎಂಬ ನಿಟ್ಟಿನಲ್ಲಿ ರಷ್ಯಾ, ಶುಕ್ರವಾರ ಚಂದ್ರನತ್ತ ರಾಕೆಟ್ ಉಡಾಯಿಸಿತ್ತು. ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು ಘನೀಕರಣಗೊಂಡು ಶೇಖರಣೆ ಆಗಿರುವುದಾಗಿ ನಂಬಲಾಗಿದೆ.

ಹವಾಯಿ ಕಾಳ್ಗಿಚ್ಚು: ಮೃತರ ಸಂಖ್ಯೆ 93ಕ್ಕೆ ಏರಿಕೆ

ಲಾಯಿನಾ (ಎಪಿ): ಹವಾಯಿಯ ಮಾಯಿ ಕೌಂಟಿಯಲ್ಲಿ ಕಾಳ್ಗಿಚ್ಚಿನ ಪರಿಣಾಮ ಈವರೆಗೆ 93 ಮಂದಿ ಮೃತಪಟ್ಟಿದ್ದಾರೆ.

'ಮೃತಪಟ್ಟವರ ಗುರುತು ಪತ್ತೆ ಕಾರ್ಯ ಇನ್ನೂ ಆರಂಭಿಕ ಹಂತದಲ್ಲಿದೆ. ಶ್ವಾನಗಳನ್ನು ಬಳಸಿ ಮೃತದೇಹಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಇಬ್ಬರ ಗುರುತು ಮಾತ್ರ ಪತ್ತೆ ಮಾಡಲಾಗಿದೆ. ಸಿಬ್ಬಂದಿ ಮತ್ತು ಶ್ವಾನ ದಳ ಇಲ್ಲಿಯವರೆಗೆ ಘಟನಾ ಸ್ಥಳದ ಒಟ್ಟು ಪ್ರದೇಶದಲ್ಲಿ ಕೇವಲ ಶೇಕಡ 3ರಷ್ಟು ಭಾಗದಲ್ಲಿ ಹುಡುಕಾಟ ನಡೆಸಿವೆ' ಎಂದು ಮಾಯಿ ಪಟ್ಟಣದ ಪೊಲೀಸ್ ಅಧಿಕಾರಿ ಜಾನ್ ಪಲ್ಲೆಟಿಯರ್ ಮಾಹಿತಿ ನೀಡಿದ್ದಾರೆ.

'ಹುಡುಕಾಟ ನಡೆಸಬೇಕಿರುವ ಪ್ರದೇಶ ಒಟ್ಟು ಐದು ಚದರ ಮೈಲುಗಳಷ್ಟಿದೆ. ಕಾಳ್ಗಿಚ್ಚಿನಲ್ಲಿ ಸಾವಿಗೀಡಾದವರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಅವರು ತಿಳಿಸಿದ್ದಾರೆ.

ಇದೇ 9 ರಂದು ಹವಾಯಿಯಲ್ಲಿ ಕಾಳ್ಗಿಚ್ಚು ಸಂಭವಿಸಿತ್ತು. ಅವಘಡದಿಂದಾಗಿ 2,200 ಕಟ್ಟಡಗಳು ಹಾನಿಗೀಡಾಗಿದ್ದವು. ಅಲ್ಲದೇ, 4,500 ಮಂದಿ ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,00020,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರವಾಸ
Pilgrimage Tours
ಸುವರ್ಣ ಯಾತ್ರ ಕಾಶಿ ಪ್ರವಾಸ 7ದಿನಗಳು 30.08.23 ಕಾಶಿ ವಿಶ್ವನಾಥ, ಬಾಬಾ ಬೈದ್ಯನಾಥ, 2ಜ್ಯೋತಿರ್ಲಿಂಗ, ಬುದ್ಧಗಯ, ಗಯಾ, ಅಯೋಧ್ಯ, ನೈಮಿಷಾರಣ್ಯ.9019462508, 9008381022

Travel
ದೆಹಲಿ ಯಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 27.09.2023 02.10.2023 04.10.2023 ರಿಂದ 14 ದಿನಗಳು. ಪುರಿ,ಕೋನಾರ್ಕ್ ಕಾಶಿ,ಗಯಾ, ಪ್ರಯಾಗ,ನೈಮಿಶಾರಣ್ಯ 27.09.202302.10.2023 04.10.2023 26.10.2023 ರಿಂದ 10 ದಿನಗಳು. ಸೋಮನಾಥ್,ದ್ವಾರಕಾ ಉಜ್ಜಯಿನಿ,ಓಂಕಾರೇಶ್ವರ ಮಾತೃಗಯಾ,ಬೀಮಾಶಂಕರ್ ತ್ರಯಂಬಕೇಶ್ವರ 02.10.2023 26.10.2023 22.11.2023 ರಿಂದ 15/10 ದಿನಗಳು. ವಿಜಯವಾಡ,ವಾಸವಿಪೆನುಗೊಂಡ ಅನ್ನಾವರಂ,ಬುರ್ರಾಕೇವ್ಸ್ ವಿಶಾಖಪಟ್ಟಣ 01.10.202330.10.2023 22.11.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

20.09.2023 17.11.2023 02.12.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ 5 ದಿನಗಳು. 21.09.2023 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು. 18.09.2023 06.10.2023 02.12.2023 ಕಾಶಿ,ಗಯಾ,ಅಲಹಾಬಾದ್ 8 ದಿನಗಳು. 07.10.2023 04.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು.03 9448402248 7022547922

10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ದಗಯಾ ಅಯೋಧ್ಯ ಅಲಹಾಬದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

★21.09.2023 12ದಿನಗಳು★ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ಹರಿದ್ವಾರ. 16.11.2023 14ದಿನಗಳು ಮಧ್ಯಪ್ರದೇಶ, ರಾಜಸ್ಥಾನ,ಗುಜರಾತ್. ಶ್ರೀಗಂಗಾ ಟೂರಿಸ್ಟ್.ಬೆಂಗಳೂರು. 9480253807/ 8105522123

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ವಜನಿಕ ಪ್ರಕಟಣೆ

PUBLIC NOTICE

My client proposes to develop the property more particularly described in the schedule hereunder from its present owners
(1) MR SIRAJ.,aged about 54 years, son of Mr.Abdul Basith,
(2) MRS.HEENA KOWSER, aged about 44 years, wife of Mr.Siraj,
(3) MR.ABDUL SALIK, aged about 24 years, son of Mr.Siraj and
(4)MS.SABURA TAJ, aged about 20 years, daughter of Mr.Siraj, all Residing at S.S.Mansion, No.23, Berlie Street, Langford Town, Shanthinagar, Bengaluru – 560 025.
It is represented by the present owners that they have a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.
SCHEDULE PROPERTY
All that piece and parcel of the residentially converted land measuring an extent of about 4 Acres 33 Guntas or about 19601.13 sq.mtrs (out of 5 Acres 9 Gunts) comprised in Old Sy.No.30/1A2,New Sy.No.30/25, situated at Chikkanagamangala Village, Sarjapura Hobli, Anekal Taluk, Bangalore District (converted vide Revised Official Memorandum bearing No.ALN(ASH)SR.06/2011-12, dated:02/07/2015 issued by the Special Deputy Commissioner, Bangalore District, Bangalore)presently bearing Property No.150200100500420044 assigned by the Panchayat Development Officer, Department of Rural Development and Panchayat Raj, Shanthipura, Anekal with a Road presently running East to West through the middle of the property connecting Doddanagamangala Village to Chikkanagamangala Village with a present width of 9.5 mtrs and proposed width of 24 mtrs and bounded on the
East by : Sy.No.30/1A1A1 of Chikkanagamangala Village
West by : Sy.No.30/1A1B 1A1C of Chikkanagamangala Village
North by : Sy.No.30/1A1AS of Chikkanagamangala Village
South by : Village boundary of Veerasandra Village
ARVIND RAGHAVAN
Advocate
No.48, "ISHITHA", 2ND Floor, 2nd Main Road, Vyalikaval, Bangalore – 560 003. Mob: 98450 04419
Bangalore Dated:14/08/2023

DH ಪ್ರಜಾವಾಣಿ
Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಚರ್ಚೆಗೆ ಒಳಪಡಿಸದೇ ಕಾನೂನು ರೂಪ ನೀಡಲು ಬಿಜೆಪಿ ಯತ್ನ: ಕಾಂಗ್ರೆಸ್ ಟೀಕೆ

‘ಮಸೂದೆಯಲ್ಲಿ ಹೊಸದೇನೂ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಗುಂಪು ಹಲ್ಲೆ-ಹತ್ಯೆ, ದ್ವೇಷ ಭಾಷಣ, ಝೀರೊ ಎಫ್‌ಐಆರ್, ಇ–ಎಫ್‌ಐಆರ್ ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಡಿಸಿರುವ ಹೊಸ ಮಸೂದೆಗಳಲ್ಲಿ ಹೊಸದೇನೂ ಇಲ್ಲ. ಈ ಬಗ್ಗೆ ಅವರು ಸುಳ್ಳು ಹೇಳಿದ್ದಾರೆ ಹಾಗೂ ಸಂಸತ್ ಅನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ.

ಬ್ರಿಟಿಷರ ಕಾಲದಲ್ಲಿ ಜಾರಿಗೆ ತಂದಿದ್ದ ಅಪರಾಧ ಕಾನೂನುಗಳಿಗೆ ಬದಲಾಗಿ ಹೊಸ ಕಾನೂನುಗಳನ್ನು ಜಾರಿಗೆ ತರುವ ಸಂಬಂಧ ಕೆಳಮನೆಯಲ್ಲಿ ಕೇಂದ್ರ ಸರ್ಕಾರವು ಮೂರು ಹೊಸ ಮಸೂದೆಗಳನ್ನು ಮಂಡಿಸಿದೆ. ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಶಿಕ್ಷೆಯ ಪ್ರಮಾಣ ಹೆಚ್ಚಿಸಿರುವುದಾಗಿ ಶಾ ಅವರು

ಮುಖ್ಯಾಂಶಗಳು
- ಅಮಿತ್ ಶಾ ಅವರಿಂದ ಸುಳ್ಳು ಮಾಹಿತಿ: ಆರೋಪ
- ಯುಪಿಎ ಅವಧಿಯಲ್ಲಿಯೇ ಝೀರೊ ಎಫ್‌ಐಆರ್, ಇ–ಎಫ್‌ಐಆರ್ ಜಾರಿ
- ಸಂಸತ್ ದಿಕ್ಕು ತಪ್ಪಿಸಿದ ಕೇಂದ್ರ ಸರ್ಕಾರ

ಹೇಳಿದ್ದಾರೆ. ಆದರೆ, ಜಾರಿಯಲ್ಲಿರುವ ಕಾನೂನುಗಳಲ್ಲಿಯೇ ಅಪರಾಧಿಗಳಿಗೆ ಗರಿಷ್ಠ ಪ್ರಮಾಣದ ಶಿಕ್ಷೆ ವಿಧಿಸಲಾಗುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಹೇಳಿದ್ದಾರೆ.

‘ಹೊಸ ಮಸೂದೆಗಳನ್ನು ಸಾರ್ವಜನಿಕವಾಗಿ ಸುದೀರ್ಘ ಚರ್ಚೆಗೆ ಒಳಪಡಿಸಬೇಕು. ಆದರೆ, ಬಿಜೆಪಿಯು ಕ್ರಿಮಿನಲ್ ಮಸೂದೆಗಳ ಪ್ರಕ್ರಿಯೆಯ ಸ್ವರೂಪವನ್ನು ಚರ್ಚೆಗೆ ಒಳಪಡಿಸದೆ ಬುಡಮೇಲು ಮಾಡಲು ಹೊರಟಿದೆ. ಈ ಪ್ರವೃತ್ತಿಯು ಬಿಜೆಪಿ ಸರ್ಕಾರದ ಡಿಎನ್‌ಎನಲ್ಲಿಯೇ ಅಂತರ್ಗತವಾಗಿದೆ’ ಎಂದು ದೂರಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ ಮಸೂದೆಯಲ್ಲಿ ಗುಂಪು ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಶಿಕ್ಷೆ ಪ್ರಮಾಣವನ್ನು ಉಲ್ಲೇಖಿಸಿರುವ ಅವರು, ‘ಇಂತಹ ಪ್ರಕರಣಕ್ಕೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302ರ (ಕೊಲೆ) ಅಡಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವ ಅವಕಾಶವಿದೆ. ಆದರೆ, ಈ ಬಗ್ಗೆ ಅಮಿತ್ ಶಾ ಸುಳ್ಳು ಹೇಳಿದ್ದಾರೆ. ಪ್ರಸ್ತಾವಿತ ಮಸೂದೆಯಲ್ಲಿ ಏಳು ವರ್ಷ ಶಿಕ್ಷೆಯನ್ನಷ್ಟೇ ನಿಗದಿಪಡಿಸಲಾಗಿದೆ ಎಂದಿದ್ದಾರೆ.

ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆಯೂ ಅಮಿತ್ ಶಾ ದಾರಿ ತಪ್ಪಿಸಿದ್ದಾರೆ. ಈ ಬಗ್ಗೆ 1961ರಲ್ಲಿ ಜವಾಹರ ಲಾಲ್ ನೆಹರೂ ಪ್ರಧಾನಿಯಾಗಿದ್ದ ಅವಧಿಯಲ್ಲಿಯೇ ಐಪಿಸಿ ಸೆಕ್ಷನ್‌ಗೆ ತಿದ್ದುಪಡಿ ತರಲಾಗಿದೆ ಎಂದಿದ್ದಾರೆ.

‘2013ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದಾದ್ಯಂತ ‘ಝೀರೊ ಎಫ್‌ಐಆರ್’ ದಾಖಲಿಸುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ. ಅದೇ ವರ್ಷದಲ್ಲಿ ‘ಇ–ಎಫ್‌ಐಆರ್’ ದಾಖಲಿಸುವ ಬಗ್ಗೆಯೂ ಆದೇಶ ಹೊರಡಿಸಲಾಗಿದೆ. ಆದರೆ, ಇದನ್ನು 2017ರಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮರು ಜಾರಿಗೊಳಿಸಿದರು. ಈಗ ಅಮಿತ್ ಶಾ ಅವರು ಮೂರನೇ ಬಾರಿಗೆ ಮರುಜಾರಿಗೆ ಮುಂದಾಗಿದ್ದಾರೆ’ ಎಂದು ಹೇಳಿದ್ದಾರೆ.

ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರ ವಿಡಿಯೊ ಚಿತ್ರೀಕರಣಕ್ಕೆ ಸಿಆರ್‌ಪಿಸಿಯಲ್ಲಿಯೇ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ಹೊಸ ಮಸೂದೆಯಲ್ಲಿ ಇದನ್ನು ಒಂದು ಆಯ್ಕೆಯನ್ನಾಗಿ ಪರಿಗಣಿಸಲಾಗಿದೆ. ಆ ಮೂಲಕ ವಿಡಿಯೊ ಪ್ರಕ್ರಿಯೆಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ ಎಂದು ಹೇಳಿದ್ದಾರೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಎಸಗಿದರೆ ಮರಣದಂಡನೆ ವಿಧಿಸುವ ಬಗ್ಗೆ ಹೊಸ ಮಸೂದೆಯಲ್ಲಿ ಬದಲಾವಣೆ ಮಾಡಿರುವುದಾಗಿ ಎಂದು ಶಾ ಹೇಳಿದ್ದಾರೆ. ಆದರೆ, ಇಂತಹ ಕೃತ್ಯ ಎಸಗಿದ ಅಪರಾಧಿಗೆ ಮರಣದಂಡನೆ ವಿಧಿಸಲು ಪೋಕ್ಸೊ ಕಾಯ್ದೆಯಡಿ ಅವಕಾಶವಿದೆ. ಆದರೆ, ಐಪಿಸಿ, ಸಿಆರ್‌ಪಿಸಿ ಹಾಗೂ ಇಂಡಿಯನ್ ಎವಿಡೆನ್ಸ್ ಆ್ಯಕ್ಟ್‌ನಲ್ಲಿ ಇರುವ ಶಿಕ್ಷೆಯ ಪ್ರಮಾಣವನ್ನು ಹೊಸ ಮಸೂದೆಗಳಲ್ಲಿ ಮರುಜೋಡಿಸುವ ಕೆಲಸ ಮಾಡಿದ್ದಾರಷ್ಟೇ ಎಂದು ಹೇಳಿದ್ದಾರೆ.

ಕೈಕೋಳ ಯಾರಿಗೆ ತೊಡಿಸಬೇಕು? ಮಸೂದೆಯಲ್ಲೇನಿದೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಅಪರಾಧ ಪ್ರಕರಣಗಳಲ್ಲಿ ಬಂಧಿತರಾಗುವ ವ್ಯಕ್ತಿಗಳಿಗೆ ಕೈಕೋಳ ತೊಡಿಸುವುದಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಎದುರಾಗಿದ್ದ ಗೊಂದಲಕ್ಕೆ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿರುವ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮಸೂದೆಯಲ್ಲಿ ಪರಿಹಾರ ಸಿಕ್ಕಿದೆ.

ಸಂಸತ್‌ನ ಕೆಳಮನೆಯಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್ (ಅಪರಾಧ ಪ್ರಕ್ರಿಯಾ ಸಂಹಿತೆ) ಬದಲಿಗೆ ಈ ಹೊಸ ಮಸೂದೆಯನ್ನು ಮಂಡಿಸಲಾಗಿದೆ. ಅಪರಾಧದ ಸ್ವರೂಪ ಮತ್ತು ಅದರ ತೀವ್ರತೆ ಆಧರಿಸಿ ಬಂಧನಕ್ಕೆ ಒಳಗಾದವರಿಗೆ ಕೈಕೋಳ ತೊಡಿಸಬೇಕು ಎಂದು ಮಸೂದೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಅಪರಾಧ ಕೃತ್ಯ ಎಸಗಿದವರಿಗೆ ಕೈಕೋಳ ತೊಡಿಸುವುದಕ್ಕೂ ಮೊದಲು ಪೊಲೀಸರು ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಅನುಮತಿ ಪಡೆಯಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಹಲವು ಸಂದರ್ಭಗಳಲ್ಲಿ ಪೊಲೀಸರು ಇದನ್ನು ಉಲ್ಲಂಘಿಸಿ ತೊಂದರೆಗೆ ಸಿಲುಕುತ್ತಿದ್ದರು.

ಅಪರಾಧ ಕೃತ್ಯವನ್ನು ಅಭ್ಯಾಸ ಮಾಡಿಕೊಂಡವರು, ಬಂಧನದಿಂದ ತಪ್ಪಿಸಿಕೊಂಡು ಪದೇ ಪದೇ ಅಪರಾಧ ಕೃತ್ಯ ಎಸಗುವವರು, ಸಂಘಟಿತ ಅಪರಾಧ ಗುಂಪಿನ ಸದಸ್ಯ, ಭಯೋತ್ಪಾದನಾ ಕೃತ್ಯ ಎಸಗಿದ ಆರೋಪಿ, ಮಾದಕ ವಸ್ತು ಕಳ್ಳಸಾಗಣೆದಾರ, ಕೊಲೆಗಾರ, ಅತ್ಯಾಚಾರಿ, ಖೋಟಾನೋಟು ಪ್ರಕರಣದ ಆರೋಪಿ, ಶಿಶುಕಾಮಿ ಹಾಗೂ ಆರ್ಥಿಕ ಅಪರಾಧಿಗಳಿಗೆ ಕೈಕೋಳ ತೊಡಿಸಬಹುದು ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು ಸಂಗ್ರಹಿಸಿದವರು, ಸಾರ್ವಜನಿಕರ ಮೇಲೆ ಆಸಿಡ್ ಎರಚಿದ ಆರೋಪಿ, ರಾಜ್ಯದ ವಿರುದ್ಧ ಅಪರಾಧ ಕೃತ್ಯ ಎಸಗಿದವರು, ಭಾರತದ ಒಗ್ಗಟ್ಟು, ಸಾರ್ವಭೌಮತೆ ಮತ್ತು ಏಕತೆಗೆ ಧಕ್ಕೆ ತಂದವರು ಅಥವಾ ಆರ್ಥಿಕ ಅಪರಾಧ ಕೃತ್ಯ ಎಸಗಿದವರಿಗೆ ಕೈಕೋಳ ತೊಡಿಸಬಹುದು ಎಂದು ಮಸೂದೆಯ ಸೆಕ್ಷನ್ 43(3) ಅಡಿ ತಿಳಿಸಲಾಗಿದೆ.

ನ್ಯಾಯಾಲಯ ಹೇಳಿದ್ದೇನು?: ಕೈಕೋಳ ತೊಡಿಸುವುದಕ್ಕೆ ಸಂಬಂಧಿಸಿದಂತೆ ಕಳೆದ ಜೂನ್‌ನಲ್ಲಿ ಕರ್ನಾಟಕ ಹೈಕೋರ್ಟ್ ಕೂಡ ಮಹತ್ವದ ಆದೇಶ ಹೊರಡಿಸಿತ್ತು.

ಆರೋಪಿ, ವಿಚಾರಣಾಧೀನ ಕೈದಿ ಅಥವಾ ಅಪರಾಧಿಗೆ ಬಲವಾದ ಕಾರಣವಿಲ್ಲದೆ ಕೈಕೋಳ ತೊಡಿಸಬಾರದು. ಒಂದು ವೇಳೆ ಕೈಕೋಳ ತೊಡಿಸಿದ್ದರೆ ಈ ಬಗ್ಗೆ ಕೇಸ್ ಡೈರಿ ಅಥವಾ ಸಂಬಂಧಪಟ್ಟ ದಾಖಲೆಯಲ್ಲಿ ಈ ಬಗ್ಗೆ ಸ್ಪಷ್ಟವಾಗಿ ನಮೂದಿಸಬೇಕು ಎಂದು ನಿರ್ದೇಶನ ನೀಡಿತ್ತು.

2016ರಲ್ಲಿ ಪತ್ರಿಕೆಯೊಂದರ ಸಂಪಾದಕರೊಬ್ಬರನ್ನು ಸಾರ್ವಜನಿಕ ಸ್ಥಳದಲ್ಲಿ ಬಂಧಿಸಿ ಅಕ್ರಮವಾಗಿ ಕೈಕೋಳ ತೊಡಿಸಿ ರಸ್ತೆಯಲ್ಲಿ ಮೆರವಣಿಗೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ವ್ಯಕ್ತಿಗೆ ₹ 4 ಲಕ್ಷ ಪರಿಹಾರ ನೀಡುವಂತೆ ಕೇಂದ್ರಾಡಳಿತ ಪ್ರದೇಶವಾದ ದಮನ್ ಮತ್ತು ದಿಯು ಹಾಗೂ ದಾದ್ರ ಮತ್ತು ನಗರ್ ಹವೇಲಿ ಆಡಳಿತಕ್ಕೆ ಬಾಂಬೆ ಹೈಕೋರ್ಟ್ ನಿರ್ದೇಶಿಸಿತ್ತು.

ಅಲ್ಲದೇ, ಚೆಕ್ ಅಮಾನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನುರಹಿತ ಬಂಧನದ ವಾರಂಟ್ ಮೇಲೆ ಕಾನೂನು ವಿದ್ಯಾರ್ಥಿ ಈಶ್ವರ್ ದೈವತೆ ಎಂಬುವರಿಗೆ ಪೊಲೀಸರು ಕೈಕೋಳ ತೊಡಿಸಿದ್ದರು. ಸಂತ್ರಸ್ತ ವಿದ್ಯಾರ್ಥಿಗೆ ₹ 4 ಲಕ್ಷ ಪರಿಹಾರ ನೀಡುವಂತೆಯೂ ಹೈಕೋರ್ಟ್ ಸೂಚಿಸಿತ್ತು.

ಕೈಕೋಳ ತೊಡಿಸುವುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಗಾಗಲೇ ಹಲವು ಬಾರಿ ನಿರ್ದೇಶನ ನೀಡಿದೆ.

ಅಜಾಗರೂಕವಾಗಿ ಕೈಕೋಳ ತೊಡಿಸುವುದು ಹಾಗೂ ಸಾರ್ವಜನಿಕವಾಗಿ ಕೈಕೋಳ ತೊಡಿಸಿ ಅವಮಾನಿಸುವುದು ನಮ್ಮ ಸೂಕ್ಷ್ಮ ಸಂವೇದನೆಯನ್ನು ಅವಮಾನಿಸಿದಂತಾಗುತ್ತದೆ. ಜೊತೆಗೆ, ಇದು ಸಂಸ್ಕೃತಿಗೂ ಕಳಂಕ ತರುತ್ತದೆ ಎಂದು 1978ರಲ್ಲಿಯೇ ಸ್ಪಷ್ಟಪಡಿಸಿದೆ.

‘ಒಬ್ಬ ವ್ಯಕ್ತಿಯನ್ನು ಸಾರ್ವಜನಿಕವಾಗಿ ಬಂಧಿಸಿ, ಹಿಂಸಿಸುವುದು ಆತನ ಗೌರವಕ್ಕೆ ಚ್ಯುತಿ ತರುತ್ತದೆ. ಇದು ನಾಗರಿಕ ಸಮಾಜಕ್ಕಷ್ಟೇ ಅಸಹ್ಯಕರವಲ್ಲ; ಸಂವಿಧಾನದ ಆತ್ಮಕ್ಕೂ ಧಕ್ಕೆ ತರುತ್ತದೆ’ ಎಂದು ಮತ್ತೊಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ.

ನವದೆಹಲಿಯ ಕೆಂಪುಕೋಟೆಯಲ್ಲಿ 77ನೇ ಸ್ವಾತಂತ್ರ್ಯೋತ್ಸವ ದಿನದ ಕಾರ್ಯಕ್ರಮಕ್ಕಾಗಿ ದೆಹಲಿ ಪೊಲೀಸರು ಭಾನುವಾರ ತಾಲೀಮು ನಡೆಸಿದರು –ಪಿಟಿಐ ಚಿತ್ರ

ಸಂಭ್ರಮದ 77ನೇ ಸ್ವಾತಂತ್ರ್ಯೋತ್ಸವ

ದೆಹಲಿಯ ಕೆಂಪುಕೋಟೆ ಸಜ್ಜು

ನವದೆಹಲಿ (ಪಿಟಿಐ): ಆಗಸ್ಟ್ 15ರಂದು ನಡೆಯಲಿರುವ 77ನೇ ಸ್ವಾತಂತ್ರ್ಯ ದಿನಾಚರಣೆಗೆ ಐತಿಹಾಸಿಕ ಕೆಂಪು ಕೋಟೆಯು ಸಜ್ಜಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸಂಭ್ರಮಾಚರಣೆಯ ಕಾರ್ಯಕ್ರಮಗಳು ನಡೆಯಲಿವೆ.

ದೇಶದಾದ್ಯಂತ ವಿವಿಧ ವೃತ್ತಿಗಳ ಸುಮಾರು 1,800 ಜನರನ್ನು ‘ವಿಶೇಷ ಅತಿಥಿ’ಗಳನ್ನಾಗಿ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗಿದೆ. ಕೆಂಪುಕೋಟೆಗೆ ಬರುವ ಪ್ರಧಾನಿ ಅವರನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಖಾತೆಯ ರಾಜ್ಯ ಸಚಿವ ಅಜಯ್ ಭಟ್ ಮತ್ತು ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರ್ಮಾನೆ ಅವರು ಬರಮಾಡಿಕೊಳ್ಳಲಿದ್ದಾರೆ. ಮೋದಿ ಅವರು ರಾಷ್ಟ್ರ ಧ್ವಜಾರೋಹಣ ಮಾಡಿ ಬಳಿಕ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುವರು’ ಎಂದು ರಕ್ಷಣಾ ಸಚಿವಾಲಯವು ಭಾನುವಾರ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದೆ.

ಕೆಂಪುಕೋಟೆಯಲ್ಲಿ ಸುಮಾರು 10 ಸಾವಿರ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದ್ದು, ಒಂದು ಸಾವಿರ ಫೇಷಿಯಲ್ ರೆಕಗ್ನಿಷಿನ್ ಕ್ಯಾಮೆರಾಗಳು, ಡ್ರೋನ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಅಹಮದಾಬಾದ್‌ನ ಸಾಬರಮತಿ ಆಶ್ರಮದಿಂದ 2021ರ ಮಾರ್ಚ್ 12ರಂದು ಪ್ರಧಾನಿ ಅವರು ಚಾಲನೆ ನೀಡಿದ ‘ಸ್ವಾತಂತ್ರ್ಯೋತ್ಸವದ ಅಮೃತದ ಮಹೋತ್ಸವ’ವು ಇದೇ ಆಗಸ್ಟ್ 15ಕ್ಕೆ ಮುಕ್ತಾಯವಾಗಲಿದ್ದು, ಅದನ್ನು ‘ಅಮೃತ ಕಾಲ’ ಎನ್ನುವ ಹೆಸರಿನಲ್ಲಿ ನವೀಕರಿಸಿ, 2047ರ ವೇಳೆಗೆ ದೇಶವನ್ನು ಅಭಿವೃದ್ಧಿ ರಾಷ್ಟ್ರವನ್ನಾಗಿ ರೂಪಿಸುವ ಹುರುಪು ತುಂಬುವ ಕಾರ್ಯವೂ ನಡೆಯಲಿದೆ ಎಂದೂ ಸಚಿವಾಲಯವು ಹೇಳಿದೆ.

ಸರ್ಕಾರ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಯುದ್ಧ ಸ್ಮಾರಕ, ಇಂಡಿಯಾ ಗೇಟ್, ವಿಜಯ್ ಚೌಕ, ನವದೆಹಲಿ ರೈಲ್ವೆ ನಿಲ್ದಾಣ, ಪ್ರಗತಿ ಮೈದಾನ, ರಾಜ್ ಘಾಟ್, ಜಮಾ ಮಸೀದಿ ಮೆಟ್ರೊ ನಿಲ್ದಾಣ, ರಾಜೀವ್ ಚೌಕ್ ಮೆಟ್ರೊ ನಿಲ್ದಾಣ, ದೆಹಲಿ ಗೇಟ್ ಮೆಟ್ರೊ ನಿಲ್ದಾಣ, ಐಟಿಒ ಮೆಟ್ರೊ ಗೇಟ್, ನೌಬತ್ ಖಾನಾ ಮತ್ತು ಶೀಶ್ ಗಂಜ್ ಗುರುದ್ವಾರಗಳಲ್ಲಿ ‘ಸೆಲ್ಫಿ ಪಾಯಿಂಟ್ಸ್’ ಸ್ಥಾಪಿಸಲಾಗಿದೆ ಎಂದಿದೆ.

ಸ್ವಾತಂತ್ರ್ಯೋತ್ಸವ ಆಚರಣೆಯ ಭಾಗವಾಗಿ ರಕ್ಷಣಾ ಸಚಿವಾಲಯವು mygov ಪೋರ್ಟಲ್‌ನಲ್ಲಿ ಆಗಸ್ಟ್ 15ರಿಂದ 20ರವರೆಗೆ ಆನ್‌ಲೈನ್ ಸೆಲ್ಫಿ ಸ್ಪರ್ಧೆಯನ್ನು ನಡೆಸಲಿದೆ.

‘ಡಿಪಿಯನ್ನು ತ್ರಿವರ್ಣ ಧ್ವಜಕ್ಕೆ ಬದಲಿಸಿ’

‘ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ದೇಶದ ಜನರು ತಮ್ಮ ಸಾಮಾಜಿಕ ಮಾಧ್ಯಮಗಳ ಪ್ರೊಫೈಲ್ ಚಿತ್ರವನ್ನು ತ್ರಿವರ್ಣ ಧ್ವಜಕ್ಕೆ ಬದಲಾಯಿಸಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕರೆ ನೀಡಿದ್ದಾರೆ.

ಮೋದಿ ಅವರೂ ತಮ್ಮ ಸಾಮಾಜಿಕ ಮಾಧ್ಯಮಗಳ ಪ್ರೊಫೈಲ್ ಚಿತ್ರವನ್ನು ತ್ರಿವರ್ಣ ಧ್ವಜಕ್ಕೆ ಬದಲಾಯಿಸಿದ್ದಾರೆ.

ಆಗಸ್ಟ್ 13ರಿಂದ 15ರವರೆಗಿನ ಹರ್ ಘರ್ ತಿರಂಗಾ ಅಭಿಯಾನದಲ್ಲಿ ಜನರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಮೋದಿ ಅವರು ಶುಕ್ರವಾರ ಕರೆ ನಿಡಿದ್ದರು. ತ್ರಿವರ್ಣ ಧ್ವಜದೊಡನಿರುವ ತಮ್ಮ ಫೋಟೊಗಳನ್ನು www.harghartiranga.comಗೆ ಅಪ್‌ಲೋಡ್ ಮಾಡಿ ಎಂದೂ ಮೋದಿ ಅವರು ಸಾರ್ವಜನಿಕರನ್ನು ಒತ್ತಾಯಿಸಿದ್ದಾರೆ.

ರಾಷ್ಟ್ರಪತಿ ಮುರ್ಮು ಭಾಷಣ

77ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಆಗಸ್ಟ್ 14ರ ಸಂಜೆ 7 ಗಂಟೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಗೋಹತ್ಯೆ ನಿಷೇಧ ಕಾಯ್ದೆ ರದ್ದು ಬೇಡ: ಮಠಾಧೀಶರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಜನರು ಶಾಂತಿ, ಸಾಮರಸ್ಯ ಹಾಗೂ ಸೌಹಾರ್ದತೆಯಿಂದ ಬದುಕಬೇಕಾದರೆ ‘ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣಾ ಕಾಯ್ದೆ 2022’ ಮತ್ತು ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು (ಮತಾಂತರ ನಿಷೇಧ) ಕಾಯ್ದೆ’ಯನ್ನು ಹಿಂಪಡೆಯಬಾರದು ಎಂದು ಮಠಾಧೀಶರು ನಿರ್ಣಯ ಕೈಗೊಂಡಿದ್ದಾರೆ.

ವಿಶ್ವ ಹಿಂದೂ ಪರಿಷತ್ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ಸಂತ ಸಮ್ಮೇಳನ’ದಲ್ಲಿ 10ಕ್ಕೂ ಅಧಿಕ ಮಠಾಧೀಶರು ಭಾಗವಹಿಸಿ, ಎರಡು ನಿರ್ಣಯಗಳನ್ನು ಕೈಗೊಂಡರು.

ಮೇಲುಕೋಟೆ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಗೋ ಹತ್ಯೆ, ಮಂತಾಂತರ, ಲವ್ ಜಿಹಾದ್, ಹಿಂದೂ ಅವಿಭಕ್ತ ಕುಟುಂಬ ಪದ್ಧತಿ, ಪರಿಸರ, ಸಾಮರಸ್ಯ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಗೋಕಾಕದ ಮಹಾಲಿಂಗೇಶ್ವರ ಮಠದ ರವಿಶಂಕರ ಶಿವಾಚಾರ್ಯ ಸ್ವಾಮೀಜಿ, ಭಾರತ ಮಾತಾ ಮಂದಿರದ ಸಾಧು ರಂಗರಾಜನ್, ರಾಮಕೃಷ್ಣ ಮಿಷನ್‌ನ ಚಂದ್ರೇಶಾನಂದಜೀ, ಗೀತ ಆಶ್ರಮದ ಯೋಗಾನಂದ ಸ್ವಾಮಿ, ಅಜ್ಜಯ್ಯ ಆಶ್ರಮದ ಇ. ಈರಣ್ಣ, ಚಂದಾಪುರದ ಶಾರದಾ ಆಶ್ರಮದ ಯತೀಶ್ವರಿ ರಾಮ ಪ್ರಿಯಾಂಬ, ಆದಿಮುನಿ ಲಿಂಗೇಶ್ವರ ಸಂಸ್ಥಾನದ ನಾಗಲಾಂಬ ಶಿವಾಚಾರ್ಯ, ಧಾರವಾಡ ಪರಮಾತ್ಮ ಜಿ. ಮಹಾರಾಜ್, ಬೆಂಗಳೂರಿನ ಆರೂಢ ಭಾರತೀ ಸ್ವಾಮೀಜಿ, ದೇವನಹಳ್ಳಿಯ ನಾರಾಯಣ ಸರಸ್ವತಿ, ಸಿದ್ಧಾರೂಢದ ಉಮಾ ಭಾರತಿ, ಚಿನ್ಮಯ ಮಿಷನ್‌ನ ಅಭಯ ಚೈತನ್ಯ ಹಾಗೂ ಕೆಂಗೇರಿಯ ರಮಣಾನಂದನಾಥ ಸ್ವಾಮೀಜಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಮಠಾಧೀಶರು

ಗೋಹತ್ಯೆ ನಿಷೇಧ, ಮತಾಂತರ ನಿಷೇಧ ಕಾನೂನನ್ನು ಹಿಂಪಡೆಯಬಾರದೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇವೆ. ಈ ಸರ್ಕಾರ ಸ್ಪಂದಿಸುವ ವಿಶ್ವಾಸವಿದೆ.

ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಮೇಲುಕೋಟೆ ಯತಿರಾಜ ಮಠ

ಕಾಯ್ದೆಗಳನ್ನು ವಾಪಸ್ ಪಡೆದರೆ ಸಂತರು ವಿಧಾನ ಸೌಧಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಕಾಯ್ದೆಗಳನ್ನು ವಾಪಸ್ ಪಡೆಯಬಾರದು.

ಪರಮಾತ್ಮ ಜಿ. ಮಹಾರಾಜ್, ರಾಷ್ಟ್ರೀಯ ಸಂತ ಸಂಘದ ನಿರ್ದೇಶಕ

‘ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಗೋ ಹತ್ಯೆ ಆಗಬಾರದು ಎಂಬುದು ಸರ್ವ ಸಮ್ಮತ ಸಂಸ್ಕೃತಿಯಾಗಿತ್ತು. ಸ್ವಾತಂತ್ರ್ಯ ಬಳಿಕ ರಾಜ್ಯದಲ್ಲಿ ಗೋವಂಶಗಳ ವಧೆಯನ್ನು ಸಂಪೂರ್ಣ ನಿಷೇಧಿಸಿ, ಕಾಯ್ದೆ ಜಾರಿ ಮಾಡಲಾಯಿತು. 1964ರಲ್ಲಿ ಅಂದಿನ ಸರ್ಕಾರ ಈ ಕಾಯ್ದೆ ದುರ್ಬಲಗೊಳಿಸಿತ್ತು. ಹಿಂದಿನ ಸರ್ಕಾರವು ಉನ್ನತ ಮಟ್ಟದ ಸಮಿತಿ ರಚಿಸಿ, ಗೋ ವಂಶ ರಕ್ಷಣೆಗೆ ‘ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣಾ ಕಾಯ್ದೆ’ಯನ್ನು ಜಾರಿ ಮಾಡಿದೆ. ಯಾವುದೇ ಕಾರಣಕ್ಕೂ ಈ ಕಾಯ್ದೆಯನ್ನು ಹಿಂಪಡೆಯುವ ಅಥವಾ ದುರ್ಬಲಗೊಳಿಸುವ ಕೆಲಸ ಮಾಡಬಾರದು’ ಎಂದು ಸ್ವಾಮೀಜಿಗಳು ಆಗ್ರಹಿಸಿದರು.

‘ಹಿಂದೂ ಸಮಾಜದಲ್ಲಿ ಎಲ್ಲ ಪ್ರಮುಖ ಜಾತಿಗಳ ಹೆಣುಮಕ್ಕಳು ಇಂದು ಗೊತ್ತಿಲ್ಲದಂತೆ ಲವ್ ಜಿಹಾದ್‌ಗೆ ಬಲಿಯಾಗುತ್ತಿದ್ದಾರೆ. ಅನ್ಯಕೋಮಿನವರು ವಿವಿಧ ಆಮಿಷವೊಡ್ಡಿ, ಹತ್ಯೆ ಮಾಡುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ’ ಎಂದು ಒತ್ತಾಯಿಸಿದರು.

ಜಾತಿ ನಿಂದನೆ ಪದ ಬಳಕೆ ಆರೋಪ

ಉಪೇಂದ್ರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ನೇರ ಪ್ರಸಾರದಲ್ಲಿ ಮಾತನಾಡುವ ವೇಳೆ ಜಾತಿ ನಿಂದನೆಯ ಪದ ಬಳಸಿದ್ದಾರೆ ಎಂಬ ಆರೋಪದಡಿ ನಟ ಉಪೇಂದ್ರ ವಿರುದ್ಧ ನಗರದ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

‘ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಆಧರಿಸಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಧುಸೂದನ್ ಕೆ.ಎನ್. ಅವರು ದೂರು ನೀಡಿದ್ದಾರೆ. ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಉಪೇಂದ್ರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರ ಸಮ್ಮುಖದಲ್ಲಿ ಮಹಜರು ಪ್ರಕ್ರಿಯೆ ನಡೆಸಬೇಕಿದೆ. ಇದಾದ ನಂತರ, ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಅವರು ನೀಡುವ ಹೇಳಿಕೆ ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ತಿಳಿಸಿವೆ.

‘ಜಾತಿ ನಿಂದನೆ ಮಾಡಿರುವ ವಿಡಿಯೊ ನೋಡಿದ್ದ ಹಲವು ಸಂಘಟನೆಗಳ ಪದಾಧಿಕಾರಿಗಳು, ಉಪೇಂದ್ರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದಾರೆ. ನಾನು ಕೂಡಾ ವಿಡಿಯೊ ನೋಡಿದ್ದು, ಜಾತಿ ನಿಂದನೆ ಅಂಶ ಕಂಡು ಬಂದಿದೆ. ಹೀಗಾಗಿ, ಉಪೇಂದ್ರ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಮಧುಸೂದನ್ ದೂರಿನಲ್ಲಿ ತಿಳಿಸಿದ್ದಾರೆ.

‘ನಟನಾಗಿ ಹೆಸರು ಮಾಡಿರುವ ಉಪೇಂದ್ರ, ಸಾರ್ವಜನಿಕ ಜೀವನದಲ್ಲಿ ಎಲ್ಲರಿಗೂ ಮಾದರಿಯಾಗಿ ನಡೆದುಕೊಳ್ಳಬೇಕು. ಈ ನಟನನ್ನು ಅನುಕರಣೆ ಮಾಡುವವರು ಇದೇ ರೀತಿ ಮಾತನಾಡಿದರೆ, ಸಾರ್ವಜನಿಕರ ಶಾಂತಿಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಇಷ್ಟೊಂದು ದ್ವೇಷ ಏಕೆ?– ಉಪೇಂದ್ರ

ಜಾತಿ ನಿಂದನೆ ಆರೋಪಕ್ಕೆ ಸಂಬಂಧಪಟ್ಟಂತೆ ಪ್ರತಿಕ್ರಿಯೆ ನೀಡಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಉಪೇಂದ್ರ ಅವರು , ‘ನನ್ನ ಮೇಲೆ ಏಕೆ ಇಷ್ಟೊಂದು ದ್ವೇಷ’ ಎಂದು ಪ್ರಶ್ನಿಸಿದ್ದಾರೆ.

‘ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮ್ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ನೇರಪ್ರಸಾರದ ಸಂದರ್ಭದಲ್ಲಿ ಬಾಯಿತಪ್ಪಿ ಗಾದೆ ಮಾತು ಬಳಸಿದೆ. ಅದರಿಂದ ಹಲವರ ಭಾವನೆಗಳಿಗೆ ಧಕ್ಕೆ ಉಂಟಾಗಿರುವುದು ಕಂಡುಬಂದ ತಕ್ಷಣ ಆ ವಿಡಿಯೊ ಅಳಿಸಿ ಹಾಕಿದ್ದೇನೆ. ನನ್ನ ಈ ಮಾತಿಗೆ ಕ್ಷಮೆ ಇರಲಿ’ ಎಂದಿದ್ದಾರೆ.

‘ಇಂದು ನನ್ನ ವಿರುದ್ಧ ಮಾತನಾಡುತ್ತಿರುವ ಹಲವರು, ಅಂದು ಹುಟ್ಟೇ ಇರಲಿಲ್ಲ. 50 ವರ್ಷಗಳ ಹಿಂದೆ ಬಾಲ್ಯದಲ್ಲಿ ನಾನು ಕಂಡ ಆ ಕ್ರೂರ ಬಡತನ, ನನ್ನ ಕಣ್ಣ ಮುಂದೆಯೇ ಬೆಂಕಿ ಹಚ್ಚಿಕೊಂಡು ಆದ ಆತ್ಮಹತ್ಯೆಗಳು, ಹಸಿವು .. ಎಲ್ಲವನ್ನೂ ಅನುಭವಿಸಿದ್ದೇನೆ. ಇಂಥ ಪರಿಸರದಲ್ಲಿ ಬೆಳೆದ ನಾನು ಒಂದು ವರ್ಗದ ಜನರ ಬಗ್ಗೆ ಅವಮಾನಕಾರಿಯಾಗಿ ಮಾತನಾಡುತ್ತೇನೆಯೇ? ನನಗೆ ಹುಚ್ಚೆ? ಇಷ್ಟಕ್ಕೂ ಕ್ಷಮೆ ಸ್ವೀಕರಿಸುವ ದೊಡ್ಡತನವೂ ಇಲ್ಲವೇ?’ ಎಂದೂ ಅವರು ಹೇಳಿದ್ದಾರೆ.

ಪಿಎಫ್‌ಐ ಸಂಚು: ಐದು ರಾಜ್ಯಗಳಲ್ಲಿ ಎನ್‌ಐಎ ದಾಳಿ

ನವದೆಹಲಿ (ಪಿಟಿಐ): ದೇಶದ ಜನರಲ್ಲಿ ಕೋಮುದ್ವೇಷ ಕೆರಳಿಸಿ, ಶಾಂತಿ ಕದಡುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಸಂಚನ್ನು ವಿಫಲಗೊಳಿಸುವ ತನ್ನ ನಿರಂತರ ಪ್ರಯತ್ನದ ಭಾಗವಾಗಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಭಾನುವಾರ ಐದು ರಾಜ್ಯಗಳಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಬಿಹಾರದ 14 ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ನಡೆದಿದ್ದು, ವಿವಿಧ ಡಿಜಿಟಲ್ ಸಾಧನಗಳು ಹಾಗೂ ಕೆಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಎನ್‌ಐಎ ವಕ್ತಾರ ಮಾಹಿತಿ ನೀಡಿದ್ದಾರೆ.

ಕೇರಳದ ಕಣ್ಣೂರು, ಮಲಪ್ಪುರ ಜಿಲ್ಲೆಗಳು, ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ, ಮಹಾರಾಷ್ಟ್ರದ ನಾಸಿಕ್, ಕೊಲ್ಹಾಪುರ, ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಮತ್ತು ಬಿಹಾರದ ಕಟಿಹಾರ್‌ನಲ್ಲಿ ಎನ್‌ಐಎ ದಾಳಿ ನಡೆಸಿದೆ.

‘ಭಯೋತ್ಪಾದನೆ, ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳನ್ನು ನಡೆಸುವ ಮೂಲಕ 2047ರ ವೇಳೆಗೆ ಭಾರತದಲ್ಲಿ ಇಸ್ಲಾಮಿಕ್ ಪ್ರಭುತ್ವ ಸ್ಥಾಪಿಸಲು ಪಿಎಫ್‌ಐ ಪ್ರಯತ್ನಿಸುತ್ತಿದೆ. ಈ ಸಂಘಟನೆಯ ಉನ್ನತ ನಾಯಕತ್ವವು ಸಶಸ್ತ್ರ ಕೇಡರ್ ರಚಿಸಿ, ಪಿಎಫ್‌ಐ ಸೈನ್ಯವನ್ನು ಬೆಳೆಸಲು ಪ್ರಯತ್ನಿಸುತ್ತಿದೆ. ಇದನ್ನು ವಿಫಲಗೊಳಿಸಲು ಎನ್‌ಐಎ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ಭಾರತ ವಿರೋಧಿ ಕಾರ್ಯಸೂಚಿಯನ್ನು ಮುಂದುವರಿಸುವ ಪ್ರಯತ್ನದಲ್ಲಿ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲು ಕೂಡಾ ಪಿಎಫ್‌ಐ ಪಿತೂರಿ ನಡೆಸುತ್ತಿದೆ’ ಎಂದೂ ವಕ್ತಾರರು ಹೇಳಿದ್ದಾರೆ.

ಪಿಎಫ್‌ಐನ ಹಲವು ಏಜೆಂಟರು ಮಾಸ್ಟರ್ ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದಾಗಿಯೂ ಎನ್‌ಐಎ ಶಂಕಿಸಿದೆ.

‘ಎನ್‌ಐಎ ಕಳೆದ ಹಲವು ತಿಂಗಳುಗಳಿಂದ ಪಿಎಫ್‌ಐ ಕಾರ್ಯಕರ್ತರನ್ನು ಗುರುತಿಸಿ, ಬಂಧಿಸಲು ವಿವಿಧ ರಾಜ್ಯಗಳ ಅನೇಕ ಸ್ಥಳಗಳಲ್ಲಿ ದಾಳಿ ನಡೆಸಿದೆ’ ಎಂದೂ ಎನ್‌ಐಎ ಎಂದು ವಕ್ತಾರ ತಿಳಿಸಿದ್ದಾರೆ.

ದಕ್ಷಿಣ ಕನ್ನಡ: ಐವರು ಶಂಕಿತರ ಮನೆಗಳಲ್ಲಿ ಶೋಧ

ಮಂಗಳೂರು/ ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐವರು ಶಂಕಿತ ವ್ಯಕ್ತಿಗಳ ಮನೆಗಳಿಗೆ ಭಾನುವಾರ ಎನ್‌ಐಎ ಪೊಲೀಸರ ತಂಡ ಭೇಟಿ ನೀಡಿ ದಾಖಲೆಗಳನ್ನು ವಶಪಡಿಸಿಕೊಂಡಿದೆ.

‘ಬಂಟ್ವಾಳ ತಾಲ್ಲೂಕಿನ ನಂದಾವರ ಸಮೀಪದ ಬೋಗೊಡಿ ನಿವಾಸಿ ಇಬ್ರಾಹಿಂ ನಂದಾವರ ಮತ್ತು ಕುಂಪಣಮಜಲು ನಿವಾಸಿ, ಪ್ರಸ್ತುತ ವಳಚ್ಚಿಲ್‌ನಲ್ಲಿ ವಾಸವಾಗಿರುವ ಮುಷ್ತಾಕ್ ಎಂಬುವರ ಮನೆಗಳಲ್ಲೂ ಶೋಧ ನಡೆಸಿದೆ. ಕೇರಳದಲ್ಲಿ ಧಾರ್ಮಿಕ ಶಿಕ್ಷಣ ಶಿಕ್ಷಕನಾಗಿರುವ ಇಬ್ರಾಹಿಂ ಪಿಎಫ್‌ಐ ನಿಷೇಧದ ಬಳಿಕ ತಲೆ ಮರೆಸಿಕೊಂಡಿದ್ದ. ಎನ್‌ಐಎ ಪೊಲೀಸರು ಮನೆಗೆ ಭೇಟಿ ನೀಡಿದಾಗಲೂ ಆತ ಮನೆಯಲ್ಲಿರಲಿಲ್ಲ. ಉಳ್ಳಾಲದ ಕಿನ್ಯದ ಮನೆಯೊಂದಕ್ಕೂ ಎನ್‌ಐಎ ಅಧಿಕಾರಿಗಳು ಭೇಟಿ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರ್ಕಾರಿ ಆಸ್ಪತ್ರೆಯಲ್ಲಿ 18 ರೋಗಿಗಳ ಸಾವು

ಒಂದನೇ ಪುಟದಿಂದ...

ಈ ಘಟನೆಯ ಕುರಿತು ತನಿಖೆ ನಡೆಸಲು ಉನ್ನತಮಟ್ಟದ ಸಮಿತಿಯೊಂದನ್ನು ಮಹಾರಾಷ್ಟ್ರ ಸರ್ಕಾರವು ರಚಿಸಿದೆ. ಪ್ರತಿ ಸಾವಿನ ಹಿಂದಿರುವ ವೈದ್ಯಕೀಯ ಕಾರಣ ತಿಳಿಯುವ ನಿಟ್ಟಿನಲ್ಲಿ ಈ ಸಮಿತಿ ತನಿಖೆ ನಡೆಸಲಿದೆ. ಜೊತೆಗೆ, ಚಿಕಿತ್ಸೆಯಲ್ಲಿ ಲೋಪ ಅಥವಾ ನಿರ್ಲಕ್ಷ್ಯ ಉಂಟಾಗಿರುವ ಕುರಿತೂ ಪರಿಶೀಲನೆ ನಡೆಸಲಿದೆ.

ಘಟನೆ ಕುರಿತು ಪ್ರತಿಕ್ರಿಯೆ ನೀಡಿರುವ ಶಿಂದೆ ಅವರು, ‘ಈ ಘಟನೆಯು ದುರದೃಷ್ಟಕರ. ಇದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ’ ಎಂದು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಠಾಣೆ ನಗರ ಪಾಲಿಕೆ ಆಯುಕ್ತ ಅಭಿಜಿತ್ ಬಂಗಾರ್, ಮುಖ್ಯಮಂತ್ರಿ ಶಿಂಧೆ ಅವರು ಘಟನೆಯ ವಿವರ ಪಡೆದಿದ್ದು ಸ್ವತಂತ್ರ ತನಿಖಾ ಸಮಿತಿಯಿಂದ ತನಿಖೆಗೆ ಆದೇಶಿಸಿದ್ದಾರೆ. ಆರೋಗ್ಯ ಸೇವೆಗಳ ಆಯುಕ್ತರ ನೇತೃತ್ವದ ಸಮಿತಿಯಲ್ಲಿ ಜಿಲ್ಲಾಧಿಕಾರಿ, ಆರೋಗ್ಯ ಸೇವೆಗಳ ನಿರ್ದೇಶಕ ಸೇರಿದಂತೆ ತಜ್ಞರು ಇರುತ್ತಾರೆ ಎಂದು ಹೇಳಿದ್ದಾರೆ.

ಮೃತರಲ್ಲಿ 10 ಮಂದಿ ಮಹಿಳೆಯರು ಮತ್ತು ಎಂಟು ಮಂದಿ ಪುರುಷರಿದ್ದಾರೆ. 12 ಮಂದಿ 50 ವರ್ಷ ಮೇಲ್ಪಟ್ಟವರಾಗಿದ್ದಾರೆ. ಅವರು ಮೂತ್ರಪಿಂಡದಲ್ಲಿ ಕಲ್ಲು, ಪಾರ್ಶ್ವವಾಯು, ಅಲ್ಸರ್, ಸೀಮೆಎಣ್ಣೆ ಸೇವನೆಯಿಂದ ನಂಜು, ನ್ಯುಮೋನಿಯಾದಂಥ ರೋಗಗಳಿಂದ ಬಳಲುತ್ತಿದ್ದವರು ಸಾವಿಗೀಡಾಗಿದ್ದಾರೆ. ಹೀಗಾಗಿ ಅವರಿಗೆ ನೀಡಲಾಗಿರುವ ಚಿಕಿತ್ಸೆ ಕುರಿತೂ ತನಿಖೆ ನಡೆಸಲಾಗುವುದು. ಮೃತರ ಕುಟುಂಬ ಸದಸ್ಯರಿಂದ ಹೇಳಿಕೆ ತೆಗೆದುಕೊಳ್ಳಲಾಗುವುದು ಎಂದು ಆಯುಕ್ತ ಬಂಗಾರ್ ಅವರು ಹೇಳಿದ್ದಾರೆ.

‘ಮೃತಪಟ್ಟಿರುವ ರೋಗಿಗಳಲ್ಲಿ 13 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಘಟನೆ ಎರಡು ದಿನಗಳಲ್ಲಿ ವರದಿ ನೀಡುವಂತೆ ಆಸ್ಪತ್ರೆಯ ಆಡಳಿತಾಧಿಕಾರಿಗೆ ಸೂಚಿಸಲಾಗಿದೆ. ಅವರು ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಮಹಾರಾಷ್ಟ್ರದ ಆರೋಗ್ಯ ಸಚಿವ ತಾನಾಜಿ ಸಾವಂತ್ ತಿಳಿಸಿದ್ದಾರೆ.

ಆಸ್ಪತ್ರೆ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಈ ಸಾವುಗಳು ಸಂಭವಿಸಿವೆ ಎಂದು ಮೃತರ ಕುಟುಂಬಸ್ಥರು ಆರೋಪಿಸಿದ್ದಾರೆ.

ಆಸ್ಪತ್ರೆಗೆ ದಾಖಲಾಗುವ ವೇಳೆಗಾಗಲೇ ಹಲವು ರೋಗಿಗಳ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು, ಹಾಗಾಗಿ ಚಿಕಿತ್ಸೆ ವೇಳೆ ಅವರು ಮೃತಪಟ್ಟರು. ಇನ್ನೂ ಹಲವು ರೋಗಿಗಳು ವಯೋವೃದ್ಧರಾಗಿದ್ದರು ಎಂದು ಆಸ್ಪತ್ರೆ ಮಂಡಳಿ ತಿಳಿಸಿದೆ. ಆಸ್ಪತ್ರೆ ಬಳಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ ಎಂದು ಅಲ್ಲಿಯ ಡಿಸಿಪಿ ತಿಳಿಸಿದ್ದಾರೆ.

ಠಾಣೆ ನಗರಪಾಲಿಕೆ ಮೇಲ್ವಿಚಾರಣೆಯಲ್ಲಿರುವ ಸಿಎಸ್‌ಎಂಎಚ್‌ನಲ್ಲಿ ಪ್ರತಿದಿನ 5–6 ಮರಣಗಳು ವರದಿಯಾಗುತ್ತವೆ ಎನ್ನಲಾಗಿದೆ.

ಆಸ್ಪತ್ರೆಯ ಕೆಲ ವೈದ್ಯರು ಡೆಂಗಿಯಿಂದ ಬಳಲುತ್ತಿದ್ದರು. ಹೀಗಾಗಿ ರೋಗಿಗಳ ನಿರ್ವಹಣೆಯಲ್ಲಿ ಲೋಪವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ವಿರೋಧ ಪಕ್ಷಗಳ ಒಕ್ಕೂಟ ಮಹಾ ವಿಕಾಸ ಅಘಾಡಿಯ (ಎಂವಿಎ) ನಾಯಕರು ಘಟನೆಯನ್ನು ಖಂಡಿಸಿದ್ದಾರೆ ಮತ್ತು ಸರ್ಕಾರವನ್ನು ಇದಕ್ಕೆ ಹೊಣೆಯನ್ನಾಗಿಸಿದ್ದಾರೆ.

ಕಲ್ಲಿದ್ದಲು ಕೊರತೆ, ತಾಂತ್ರಿಕ ಕಾರಣದಿಂದ ವಿದ್ಯುತ್ ಉತ್ಪಾದನೆ ಕಡಿಮೆ

ವಿದ್ಯುತ್ ಕಣ್ಣಾಮುಚ್ಚಾಲೆ: ಗ್ರಾಹಕರು ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಸೇರಿದಂತೆ ರಾಜ್ಯದ ಹಲವೆಡೆ ಅನಿಯಮಿತ ವಿದ್ಯುತ್ ಕಡಿತದಿಂದಾಗಿ ಗ್ರಾಹಕರು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ.

ಕೆಲವೆಡೆ ದುರಸ್ತಿ ನೆಪದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದರೆ, ಮತ್ತೆ ಕೆಲವಡೆ ಮಳೆ, ಗಾಳಿ ಇಲ್ಲದಿದ್ದರೂ ಪದೇ ಪದೇ ವಿದ್ಯುತ್ ವ್ಯತ್ಯಯ ಸಾಮಾನ್ಯವಾಗಿದೆ. ವಿದ್ಯುತ್ ಸಮಸ್ಯೆಯಿಂದ ಬೆಳೆಗಳಿಗೆ ನೀರುಣಿಸುವುದು ಕಷ್ಟವಾಗಿದೆ ಎಂದು ರೈತರು ಹೇಳಿದ್ದಾರೆ.

‘ಕಲ್ಲಿದ್ದಲು ಕೊರತೆ ಹಾಗೂ ತಾಂತ್ರಿಕ ಕಾರಣದಿಂದ ರಾಜ್ಯದ ಶಾಖೋತ್ಪನ್ನ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ. ಹೀಗಾಗಿ ಮೆಸ್ಕಾಂ ಸೇರಿದಂತೆ ರಾಜ್ಯದ ಎಲ್ಲ ವಿದ್ಯುತ್ ಶಕ್ತಿ ಕಂಪನಿಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಲೋಡ್ ಶೆಡ್ಡಿಂಗ್ ಶುರುವಾಗಿದೆ. ಇನ್ನೂ ನಾಲ್ಕೈದು ದಿನ ಇದೇ ಪರಿಸ್ಥಿತಿ ಮುಂದುವರಿಯಬಹುದು’ ಎಂದು ಶಿವಮೊಗ್ಗದ ಮೆಸ್ಕಾಂ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಖ್ಯಾಂಶಗಳು
- ನಿತ್ಯ ಬೆಳಿಗ್ಗೆ, ಸಂಜೆ ವಿದ್ಯುತ್ ಕಡಿತ
- ಲೋಡ್‌ಶೆಡ್ಡಿಂಗ್ ವಿರೋಧಿಸಿ ಹೋರಾಟಕ್ಕೆ ರೈತರು ಸಜ್ಜು
- ಹಲವರಿಂದ ಸಹಾಯವಾಣಿಗೆ ಕರೆ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಳೆ ಕಡಿಮೆಯಾಗಿ ಸೆಖೆ ಹೆಚ್ಚುತ್ತಿರುವ ಮಧ್ಯೆಯೇ ಅನಿಯಮಿತ ವಿದ್ಯುತ್ ಕಡಿತ ಹೆಚ್ಚಾಗಿದೆ. ಕಲಬುರಗಿ, ರಾಯಚೂರು, ಬೀದರ್, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ ಹೀಗೆ ಮನಸ್ಸಿಗೆ ಬಂದಂತೆ 10ರಿಂದ 15 ನಿಮಿಷ, ಒಮ್ಮೊಮ್ಮೆ ಒಂದರಿಂದ ಎರಡು ಗಂಟೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗುತ್ತಿದೆ.

ಎರಡು ದಿನಗಳಿಂದ ರಾಯಚೂರು ನಗರದಲ್ಲಿ ನಿತ್ಯ ಸಂಜೆ ಒಂದೂವರೆ ತಾಸು ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಜೆಸ್ಕಾಂ ಅಧಿಕಾರಿಗಳು ಯಾವುದೇ ಮುನ್ಸೂಚನೆಯನ್ನೂ ನೀಡುತ್ತಿಲ್ಲ.

ಬೇಡಿಕೆಯಷ್ಟು ಉತ್ಪಾದನೆ: ಆರ್‌ಟಿಪಿಎಸ್‌ನ ಒಟ್ಟು 8 ವಿದ್ಯುತ್ ಘಟಕಗಳ ಪೈಕಿ 5 ವಿದ್ಯುತ್ ಘಟಕಗಳಿಂದ ಉತ್ಪಾದನೆ ಆಗುತ್ತಿದೆ. ಒಟ್ಟು 1,720 ಮೆಗಾವಾಟ್ ಉತ್ಪಾದನೆ ಆಗಬೇಕಿರುವಲ್ಲಿ 600 ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ.



ಪವನ ಶಕ್ತಿ ಮತ್ತು ಜಲ ವಿದ್ಯುತ್ ಘಟಕಗಳಲ್ಲಿ ಹೆಚ್ಚು ಉತ್ಪಾದನೆ ಆಗುತ್ತಿದೆ. ಇದರಿಂದಾಗಿ, ಆರ್‌ಟಿಪಿಎಸ್ ವಿದ್ಯುತ್ ಘಟಕಗಳಲ್ಲಿ ಬೇಡಿಕೆಗೆ ತಕ್ಕಂತೆ ಉತ್ಪಾದನೆ ಮಾಡಲಾಗುತ್ತದೆ ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

ಯಾದಗಿರಿ, ಕೊಪ್ಪಳ, ಕಲಬುರಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲೆಯಲ್ಲಿ ಪವನ ಮತ್ತು ಸೌರವಿದ್ಯುತ್ ಉತ್ಪಾದನೆಯಲ್ಲಿ ಕುಂಠಿತವಾಗಿಲ್ಲ. ಆದರೂ ದುರಸ್ತಿ ನೆಪದಲ್ಲಿ ಆಗಾಗ ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಅನಧಿಕೃತವಾಗಿ ಬೆಳಿಗ್ಗೆ ಎರಡು ತಾಸು ಹಾಗೂ ಸಂಜೆ ಎರಡು ತಾಸು ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ.

ಮೆಸ್ಕಾಂ ವ್ಯಾಪ್ತಿಯ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ವಾರದಿಂದ ಈಚೆಗೆ ಹೆಚ್ಚಿದೆ.

ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮೂರ್ನಾಲ್ಕು ದಿನಗಳಿಂದ ಮುನ್ಸೂಚನೆ ನೀಡದೆ ಪದೇ ಪದೇ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಲೋಡ್ ಶೆಡ್ಡಿಂಗ್ ವಿರೋಧಿಸಿ ರೈತರು ಮತ್ತು ರೈತ ಸಂಘಟನೆಗಳು ಬೀದಿಗಿಳಿದು ಹೋರಾಟಕ್ಕೂ ಸಜ್ಜಾಗಿದ್ದಾರೆ.

ಯಾವ ಸಮಯದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತದೆ ಎಂದು ಸುಳಿವು ನೀಡದೆ ದಿನಕ್ಕೆ ಮೂರ್ನಾಲ್ಕು ತಾಸು ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಯಾವ ಹೊತ್ತಿನಲ್ಲಿ ವಿದ್ಯುತ್ ಕೈ ಕೊಡುತ್ತದೆ ಎಂದು ಗೊತ್ತಾಗದೆ ಜನರು, ರೈತರು, ಉದ್ಯಮಿಗಳು ಹೈರಾಣಾಗಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಮೂರ್ನಾಲ್ಕು ದಿನಗಳಿಂದ ಗಂಟೆಗೊಮ್ಮೆ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಪ್ರಮುಖವಾಗಿ ಬೆಳಿಗ್ಗೆ 6ರಿಂದ 9 ಗಂಟೆ ಸಮಯದಲ್ಲಿ ಹಾಗೂ ಸಂಜೆ 4ರಿಂದ 6 ಗಂಟೆ ಇಲ್ಲವೆ, ಸಂಜೆ 6ರಿಂದ ರಾತ್ರಿ 9 ಗಂಟೆ ನಡುವೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ನಿತ್ಯ ಒಂದೂವರೆಯಿಂದ ಮೂರು ತಾಸು ವಿದ್ಯುತ್ ಕಡಿತಗೊಳಿಸಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಗಸ್ಟ್ ಮೊದಲ ವಾರದಿಂದ ದುರಸ್ತಿ ಹೆಸರಲ್ಲಿ ಪ್ರತಿ ದಿನ ಸಂಜೆ ಎರಡು ತಾಸು ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಬೆಸ್ಕಾಂ ಸಹಾಯವಾಣಿಗೆ ಕರೆ ಮಾಡಿ ವಿದ್ಯುತ್ ಕಡಿತ ಮಾಡಿರುವ ಬಗ್ಗೆ ವಿಚಾರಣೆ ಮಾಡಿದರೆ ದುರಸ್ತಿ ನೆಪ ಹೇಳುತ್ತಾರೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರೆ ಯಾವುದೇ ದುರಸ್ತಿ ನಡೆಯುತ್ತಿರುವುದಿಲ್ಲ ಎಂದು ದೊಡ್ಡಬಳ್ಳಾಪುರದ ನೇಕಾರ ಲಕ್ಷ್ಮಿನಾರಾಯಣ ಅಸಮಾಧಾನ ವ್ಯಕ್ತಪಡಿಸಿದರು.

ಟಿ20: ಮಿಂಚಿದ ಬ್ರೆಂಡನ್ ಕಿಂಗ್; ಅಂತಿಮ ಪಂದ್ಯದಲ್ಲಿ ಎಡವಿದ ಭಾರತ

ಸರಣಿ ಗೆದ್ದ ವೆಸ್ಟ್ ಇಂಡೀಸ್

ಲಾಡರ್‌ಹಿಲ್, ಅಮೆರಿಕ (ಪಿಟಿಐ): ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಸರಣಿ ಗೆಲ್ಲಬೇಕೆಂಬ ಭಾರತ ತಂಡದ ಕನಸಿಗೆ ಬ್ರೆಂಡನ್ ಕಿಂಗ್ ಅಡ್ಡಿಯಾದರು.

ಭಾನುವಾರ ನಡೆದ ಕೊನೆಯ ಟಿ20 ಪಂದ್ಯವನ್ನು 8 ವಿಕೆಟ್‌ಗಳಿಂದ ಗೆದ್ದುಕೊಂಡ ವಿಂಡೀಸ್ ತಂಡ ಐದು ಪಂದ್ಯಗಳ ಸರಣಿಯನ್ನು 3–2 ರಿಂದ ತನ್ನದಾಗಿಸಿಕೊಂಡಿತು.

ಸರಣಿಯ ನಿರ್ಣಾಯಕ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಹಾರ್ದಿಕ್ ಪಾಂಡ್ಯ ಬಳಗ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 165 ರನ್ ಗಳಿಸಿತು. ವಿಂಡೀಸ್ ತಂಡ 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 171 ರನ್ ಗಳಿಸಿ ಸಂಭ್ರಮಿಸಿತು.

55 ಎಸೆತಗಳಲ್ಲಿ 5 ಬೌಂಡರಿ ಮತ್ತು 6 ಸಿಕ್ಸರ್‌ಗಳ ನೆರವಿನಿಂದ ಅಜೇಯ 85 ರನ್ ಗಳಿಸಿದ ಬ್ರೆಂಡನ್ ಕಿಂಗ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಗುರಿ ಬೆನ್ನಟ್ಟಿದ ವೆಸ್ಟ್ ಇಂಡೀಸ್ ತಂಡ ಕೈಲ್ ಮೇಯರ್ಸ್ (10) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಬ್ರೆಂಡನ್ ಮತ್ತು ನಿಕೊಲಸ್ ಪೂರನ್ (47 ರನ್, 35 ಎ., 4X1, 6X4) ಅವರು ಎರಡನೇ ವಿಕೆಟ್‌ಗೆ 107 ರನ್‌ಗಳನ್ನು ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು.

ಟೆಸ್ಟ್ ಮತ್ತು ಏಕದಿನ ಸರಣಿಗಳಲ್ಲಿ ನಿರಾಸೆ ಅನುಭವಿಸಿದ್ದ ವಿಂಡೀಸ್, ಟಿ20 ಸರಣಿ ಗೆದ್ದು ಅಲ್ಪ ಸಮಾಧಾನಪಟ್ಟುಕೊಂಡಿತು. 2017ರ ಬಳಿಕ ವಿಂಡೀಸ್ ತಂಡ ಭಾರತದ ವಿರುದ್ಧ ಟಿ20 ಸರಣಿ ಗೆದ್ದದ್ದು ಇದೇ ಮೊದಲು.

ವೆಸ್ಟ್ ಇಂಡೀಸ್ ತಂಡದ ಬ್ರೆಂಡನ್ ಕಿಂಗ್ ಅವರ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಸೂರ್ಯಕುಮಾರ್ ಆಸರೆ: ಇದಕ್ಕೂ ಮುನ್ನ ಭಾರತ ತಂಡ ಸೂರ್ಯಕುಮಾರ್ ಯಾದವ್ (61; 45ಎ, 4X4, 6X3) ಅವರ ಅರ್ಧಶತಕದ ಬಲದಿಂದ ಹೋರಾಟದ ಮೊತ್ತ ಗಳಿಸಿತು.

ಆತಿಥೇಯ ತಂಡದ ಅಕಿಲ್ ಹುಸೇನ್ ಮೊದಲ ಓವರ್‌ನಲ್ಲಿಯೇ ಯಶಸ್ವಿ ಜೈಸ್ವಾಲ್ ವಿಕೆಟ್ ಗಳಿಸಿದರು. ಮೂರನೇ ಓವರ್‌ನಲ್ಲಿ ಅಕಿಲ್ ಬೌಲಿಂಗ್‌ನಲ್ಲಿ ಶುಭಮನ್ ಗಿಲ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಸೂರ್ಯ ಅವರೊಂದಿಗೆ ಸೇರಿದ ತಿಲಕ್ ವರ್ಮಾ (27; 18ಎ, 4X3, 6X2) ತಂಡಕ್ಕೆ ತುಸು ಚೇತರಿಕೆ ನೀಡಿದರು.

ರಾಷ್ಟನ್ ಚೇಸ್ ಎಂಟನೇ ಓವರ್‌ನಲ್ಲಿ ವರ್ಮಾ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ನಂತರ ಬಂದ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಇರಲಿಲ್ಲ. ಆದರೆ ಸೂರ್ಯ ಮಾತ್ರ ಅಬ್ಬರಿಸಿದರು. ಮೂರನೇ ಪಂದ್ಯದಲ್ಲಿಯೂ ಸೂರ್ಯ ಅರ್ಧಶತಕ ಬಾರಿಸಿದ್ದರು. ಈ ಪಂದ್ಯದಲ್ಲಿ ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಸೂರ್ಯ ಮಾತ್ರ ದಿಟ್ಟತನದಿಂದ ಬ್ಯಾಟ್ ಬೀಸಿದರು. ತಮ್ಮ ವಿಶಿಷ್ಟ ಶೈಲಿಯ ಪಾದಚಲನೆ ಮತ್ತು ಹೊಡೆತಗಳಿಂದ ಗಮನ ಸೆಳೆದರು. ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು. 19ನೇ ಓವರ್‌ನಲ್ಲಿ ಜೇಸನ್ ಹೋಲ್ಡರ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಕೊನೆಯ ಹಂತದಲ್ಲಿ ಅಕ್ಷರ್ ಪಟೇಲ್ 10 ಎಸೆತಗಳಲ್ಲಿ 13 ರನ್ ಗಳಿಸಿದರು. ಇದರಿಂದಾಗಿ ಮೊತ್ತ ತುಸು ಹೆಚ್ಚಿತು.

ನಾಯಕ ಹಾರ್ದಿಕ್ ಪಾಂಡ್ಯ 18 ಎಸೆತಗಳಲ್ಲಿ 14 ರನ್ ಗಳಿಸಿದರು. ಅದರಲ್ಲಿ ಒಂದು ಸಿಕ್ಸರ್ ಸೇರಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 165 (ಸೂರ್ಯಕುಮಾರ್ ಯಾದವ್ 61, ತಿಲಕ್ ವರ್ಮಾ 27, ಅಕಿಲ್ ಹುಸೇನ್ 24ಕ್ಕೆ2, ಜೇಸನ್ ಹೋಲ್ಡರ್ 36ಕ್ಕೆ2, ರೊಮೆರಿಯೊ ಶೇಫರ್ಡ್ 31ಕ್ಕೆ4)
ವೆಸ್ಟ್ ಇಂಡೀಸ್: 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 171 (ಬ್ರೆಂಡನ್ ಕಿಂಗ್ ಅಜೇಯ 85, ಕೈಲ್ ಮೇಯರ್ಸ್ 10, ನಿಕೊಲಸ್ ಪೂರನ್ 47, ಶೈ ಹೋಪ್ ಔಟಾಗದೆ 22) ಫಲಿತಾಂಶ: ವಿಂಡೀಸ್‌ಗೆ 8 ವಿಕೆಟ್ ಗೆಲುವು

ಗುಲ್ಬರ್ಗ ಮಿಸ್ಟಿಕ್ಸ್ ಶುಭಾರಂಭ

ಮಹಾರಾಜ ಟ್ರೋಫಿ: ಅಭಿಲಾಷ್ ಅಮೋಘ ಬೌಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಲಾಷ್ ಶೆಟ್ಟಿಯ ಅಮೋಘ ಬೌಲಿಂಗ್ ನೆರವಿನಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಭಾನುವಾರ ಆರಂಭವಾದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ಎದುರು ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಗುಲ್ಬರ್ಗ ಮಿಸ್ಟಿಕ್ಸ್ ತಂಡದ ನಾಯಕ ವೈಶಾಖ ವಿಜಯಕುಮಾರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅಭಿಲಾಷ್ ಶೆಟ್ಟಿ (17ಕ್ಕೆ3) ಕೊಟ್ಟ ಆರಂಭಿಕ ಪೆಟ್ಟಿನಿಂದಾಗಿ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಮಧ್ಯಮ ಕ್ರಮಾಂಕದ ಬ್ಯಾಟರ್ ಸೂರಜ್ ಅಹುಜಾ (ಅಜೇಯ 62; 46ಎ, 4X5, 6X2) ಅರ್ಧಶತಕದ ಬಲದಿಂದ ಬೆಂಗಳೂರು ತಂಡವು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದು ತಪ್ಪಿತು. ಗುರಿ ಬೆನ್ನಟ್ಟಿದ ಗುಲ್ಬರ್ಗ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 15 ಎಸೆತಗಳು ಬಾಕಿಯಿದ್ದಾಗಲೇ 4 ವಿಕೆಟ್‌ಗಳಿಗೆ 138 ರನ್ ಗಳಿಸಿ ಜಯಿಸಿತು.

ಹುಬ್ಬಳ್ಳಿ ಟೈಗರ್ಸ್ ಶುಭಾರಂಭ: ಮಿತ್ರಕಾಂತ್ ಸಿಂಗ್ ಯಾದವ್ (17ಕ್ಕೆ3) ಅಮೋಘ ಬೌಲಿಂಗ್ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು 9 ವಿಕೆಟ್‌ಗಳಿಂದ ಮೈಸೂರು ವಾರಿಯರ್ಸ್ ವಿರುದ್ಧ ಜಯಿಸಿ, ಶುಭಾರಂಭ ಮಾಡಿತು.

ಟಾಸ್ ಗೆದ್ದ ಹುಬ್ಬಳ್ಳಿ ಟೈಗರ್ಸ್ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೌಲರ್‌ಗಳು ಅಮೋಘ ದಾಳಿ ಸಂಘಟಿಸಿದರು. ಇದರಿಂದಾಗಿ ಮೈಸೂರು ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 111 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಪ್ರಸಿದ್ಧಕೃಷ್ಣ ಆಘಾತ ನೀಡಿದರು. ದೀರ್ಘ ಸಮಯದ ನಂತರ ಕಣಕ್ಕಿಳಿದ ಪ್ರಸಿದ್ಧ ಎರಡನೇ ಎಸೆತದಲ್ಲಿಯೇ ಲವನಿತ್ ಸಿಸೊಡಿಯಾ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಆದರೆ ಮೊಹಮ್ಮದ್ದ ತಾಹ (ಔಟಾಗದೆ 61; 30ಎ) ಹಾಗೂ ಶ್ರೀಜಿತ್ (ಔಟಾಗದೆ 17) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 (ಜೆಸ್ವಂತ್ ಆಚಾರ್ಯ 29, ಸೂರಜ್ ಅಹುಜಾ 62, ಅಭಿಲಾಷ್ ಶೆಟ್ಟಿ 17ಕ್ಕೆ3, ಶರಣ್ ಗೌಡ 24ಕ್ಕೆ2)

ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಅಭಿಲಾಷ್ ಶೆಟ್ಟಿ –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 138 (ಎಲ್.ಆರ್. ಚೇತನ್ 36, ಆದರ್ಶ್ ಪ್ರಜ್ವಲ್ 31, ಕೆ.ವಿ. ಅನೀಶ್ ಔಟಾಗದೆ 29, ಅಮಿತ್ ವರ್ಮಾ 28, ಶುಭಾಂಗ್ ಹೆಗಡೆ 25ಕ್ಕೆ3, ಸರ್ಫರಾಜ್ ಅಶ್ರಫ್ 21ಕ್ಕೆ1) ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್‌ಗೆ 5 ವಿಕೆಟ್‌ಗಳ ಜಯ.
ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 111 (ಆರ್. ಸಮರ್ಥ್ 21, ರಾಹುಲ್ ರಾವತ್ 12, ಜೆ. ಸುಚಿತ್ 20, ಭರತ್ ಧೂರಿ 16, ಎಂ. ವೆಂಕಟೇಶ್ ಔಟಾಗದೆ 16, ವಿದ್ವತ್ ಕಾವೇರಪ್ಪ 20ಕ್ಕೆ2, ಲವಿಶ್ ಕೌಶಲ್ 23ಕ್ಕೆ2, ಮಿತ್ರಕಾಂತ್ ಸಿಂಗ್ 17ಕ್ಕೆ3) ಹುಬ್ಬಳ್ಳಿ ಟೈಗರ್ಸ್: 8.1 ಓವರ್‌ಗಳಲ್ಲಿ 1 ವಿಕೆಟ್‌ಗೆ 82 (ಮೊಹಮ್ಮದ್ ತಾಹ ಅಜೇಯ 61, ಕೃಷ್ಣನ್ ಶ್ರೀಜಿತ್ ಔಟಾಗದೆ 17, ಪ್ರಸಿದ್ಧಕೃಷ್ಣ 13ಕ್ಕೆ1) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 9 ವಿಕೆಟ್‌ಗಳ ಜಯ (ಮಳೆಯಿಂದಾಗಿ ಗುರಿ ಪರಿಷ್ಕರಣೆ)

ಇಂದಿನ ಪಂದ್ಯಗಳು; ಮಂಗಳೂರು ಡ್ರ್ಯಾಗನ್ಸ್–ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ 1ರಿಂದ)
ಗುಲ್ಬರ್ಗ ಮಿಸ್ಟಿಕ್ಸ್–ಹುಬ್ಬಳ್ಳಿ ಟೈಗರ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್

ಡುರಾಂಡ್ ಕಪ್: ಶಿಲ್ಲಾಂಗ್, ಗೋಕುಲಂಗೆ ಗೆಲುವು

ಬಿಎಫ್‌ಸಿ–ಏರ್‌ಫೋರ್ಸ್ ಸೆಣಸು

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಸೋಮವಾರ ಆರಂಭಿಸಲಿದ್ದಾರೆ.

ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರಿನ ತಂಡ, ಇಂಡಿಯನ್ ಏರ್‌ಫೋರ್ಸ್ ತಂಡದ ಸವಾಲನ್ನು ಎದುರಿಸಲಿದೆ.

ಕೆಲವು ಹೊಸ ಆಟಗಾರರನ್ನು ಸೇರಿಸಿಕೊಂಡಿರುವ ಬಿಎಫ್‌ಸಿ ತಂಡ ಯಾವ ರೀತಿಯ ಪ್ರದರ್ಶನ ನೀಡಲಿದೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಗೋಲ್‌ಕೀಪರ್ ಅಮೃತ್ ಗೋಪ, ಸೆಂಟರ್ ಡಿಫೆಂಡರ್ ಶಂಕರ್ ಸಂಪಂಗಿರಾಜ್ ಮತ್ತು ಫಾರ್ವರ್ಡ್ ಆಟಗಾರ ಆಶೀಶ್ ಜಾ ಅವರು ಬಿಎಫ್‌ಸಿ ತಂಡವನ್ನು ಸೇರಿಕೊಂಡಿದ್ದಾರೆ.

ಏರ್‌ಫೋರ್ಸ್ ತಂಡ ಮೊದಲ ಪಂದ್ಯದಲ್ಲಿ 0–2 ಗೋಲುಗಳಿಂದ ಗೋಕುಲಂ ಕೇರಳ ಎಫ್‌ಸಿ ಕೈಯಲ್ಲಿ ಸೋತಿತ್ತು.

ಸೋಮವಾರ ಗುವಾಹಟಿಯಲ್ಲಿ ನಡೆಯಲಿರುವ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಮತ್ತು ತ್ರಿಭುವನ್ ಆರ್ಮಿ ಎಫ್‌ಸಿ ತಂಡಗಳು ಹಣಾಹಣಿ ನಡೆಸಲಿವೆ.

ಗೋಕುಲಂಗೆ ಗೆಲುವು: ಕೋಲ್ಕತ್ತದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಗೋಕುಲಂ ಕೇರಳ ಎಫ್‌ಸಿ ತಂಡ 4–3 ಗೋಲುಗಳಿಂದ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಆಘಾತ ನೀಡಿತು. ಸತತ ಎರಡನೇ ಗೆಲುವು ಪಡೆದ ಗೋಕುಲಂ ತಂಡ 'ಸಿ' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಬೌಬಾ ಅಮಿನೌ (17ನೇ ನಿ.), ಶ್ರೀಕುಟ್ಟನ್ (43), ಅಲೆಕ್ಸ್ ಸ್ಯಾಂಚೆಜ್ (45 + 1) ಮತ್ತು ಕೆ.ಅಭಿಜಿತ್ (47) ಅವರು ವಿಜಯಿ ತಂಡದ ಪರ ಗೋಲು ಗಳಿಸಿದರು.

ಕೋಕ್ರಝಾರ್‌ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಶಿಲ್ಲಾಂಗ್ ಲಜಾಂಗ್ ತಂಡ 2–1 ಗೋಲುಗಳಿಂದ ಡೌನ್‌ಟೌನ್ ಹೀರೋಸ್ ತಂಡವನ್ನು ಪರಾಭವಗೊಳಿಸಿತು. ರೋನಿ ವಿಲ್ಸನ್ ಅವರು 36 ಮತ್ತು 52ನೇ ನಿಮಿಷಗಳಲ್ಲಿ ಗೋಲು ಗಳಿಸಿ ಶಿಲ್ಲಾಂಗ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಿಲ್ಸನ್ ಅವರು 23ನೇ ನಿಮಿಷದಲ್ಲಿ ಎದುರಾಳಿ ತಂಡಕ್ಕೆ 'ಉಡುಗೊರೆ' ಗೋಲು ನೀಡಿದ್ದರು. ಆ ಬಳಿಕ ತಂಡ ಮರುಹೋರಾಟ ನಡೆಸಿ ಗೆಲುವು ತನ್ನದಾಗಿಸಿಕೊಂಡಿತು.

ಶಿಲ್ಲಾಂಗ್ ಮತ್ತು ಡೌನ್‌ಟೌನ್ ಹೀರೋಸ್ ತಂಡಗಳ ಆಟಗಾರರ ಪೈಪೋಟಿ

'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್:

ಬೀಗಲ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಅಚಿಂತ್ಯಾ ಮತ್ತು ಪುನೀತ್ ಅವರ ಉತ್ತಮ ಆಟದ ನೆರವಿನಿಂದ ಬೀಗಲ್ಸ್ ಕ್ಲಬ್ ತಂಡದವರು ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಪಂದ್ಯದಲ್ಲಿ ಜಯ ಸಾಧಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೀಗಲ್ಸ್ 74–68 ರಿಂದ ಬಿಎಸ್‌ಎನ್‌ಎಲ್ ತಂಡವನ್ನು ಮಣಿಸಿತು. ಅಚಿಂತ್ಯಾ 29 ಹಾಗೂ ಪುನೀತ್ 18 ಪಾಯಿಂಟ್ಸ್ ತಂದಿತ್ತರು. ಬಿಎಸ್‌ಎನ್‌ಎಲ್ ಪರ ಸೂರಜ್ (26) ಗಮನ ಸೆಳೆದರು.

ಇನ್ನೊಂದು ಪಂದ್ಯದಲ್ಲಿ ಅರವಿಂದ್ (23) ಅವರ ಚುರುಕಿನ ಆಟದ ಬಲದಿಂದ ಬ್ಯಾಂಕ್ ಆಫ್ ಬರೋಡ 79–64 ರಿಂದ ಭಾರತ್ ಎಸ್‌.ಯು ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ಐಬಿಬಿಸಿ 71–69 ರಿಂದ ಮಂಗಳೂರು ಬಿ.ಸಿ ವಿರುದ್ಧ; ಯಂಗ್ ಓರಿಯನ್ಸ್ 84–61 ರಿಂದ ಡಿವೈಇಎಸ್ ಬೆಂಗಳೂರು ವಿರುದ್ಧ ಹಾಗೂ ಜಿಎಸ್‌ಟಿ ಮತ್ತು ಕಸ್ಟಮ್ಸ್ 87–58 ರಿಂದ ಎಸ್‌ಬ್ಲ್ಯೂಸ್ ಎದುರೂ ಗೆದ್ದವು.

ಫೈನಲ್‌ಗೆ ವಿವೇಕ್ಸ್, ಜೆಎಸ್‌ಸಿ: ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ಮತ್ತು ಜೆಎಸ್‌ಸಿ ತಂಡಗಳು 'ಬಿ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದವು.

ಸೆಮಿಫೈನಲ್ ಪಂದ್ಯಗಳಲ್ಲಿ ವಿವೇಕ್ಸ್ 83–70 ರಿಂದ ಕೆಎಸ್‌ಪಿ ವಿರುದ್ಧ ಗೆದ್ದರೆ, ಜೆಎಸ್‌ಸಿ 78–64 ರಿಂದ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ವಿಶ್ವ ಬ್ಯಾಡ್ಮಿಂಟನ್ ಪದಕದತ್ತ ಲಕ್ಷ್ಯ ಕಣ್ಣು

ಗುವಾಹಟಿ (ಪಿಟಿಐ): ಇದೇ ತಿಂಗಳು ನಡೆಯಲಿರುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮತ್ತು ಮುಂದಿನ ತಿಂಗಳು ನಡೆಯುವ ಏಷ್ಯನ್ ಗೇಮ್ಸ್‌ನಲ್ಲಿ ಪದಕ ಜಯಿಸುವುದು ತಮ್ಮ ಮುಂದಿರುವ ಎರಡು ಪ್ರಮುಖ ಗುರಿಗಳು ಎಂದು ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಹೇಳಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಟೂರ್ನಿಯು ಇದೇ 21ರಿಂದ ಡೆನ್ಮಾರ್ಕ್‌ನ ಕೊಪನ್‌ಹೇಗನ್‌ನಲ್ಲಿ ನಡೆಯಲಿದೆ.

'ವಿಶ್ವ ಟೂರ್ನಿಗೆ ಇನ್ನೊಂದು ವಾರ ಮಾತ್ರ ಉಳಿದಿದೆ. ಇತ್ತೀಚೆಗೆ ನಾನು ಆಡಿರುವ ಟೂರ್ನಿಗಳ ಅನುಭವ ಮತ್ತು ಕಲಿಕೆಯು ನೆರವಾಗಲಿದೆ. ವಿಶ್ವ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡುವ ಭರವಸೆ ಇದೆ' ಎಂದು ಲಕ್ಷ್ಯ ಹೇಳಿದ್ದಾರೆ. ಅವರು ಇಲ್ಲಿ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಆರಂಭಿಸಿದ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದ ಉದ್ಘಾಟನೆ ಸಮಾರಂಭದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಲಕ್ಷ್ಯ ಸೇನ್

'ಇಲ್ಲಿಯವರೆಗೆ ಮಾಡಿಕೊಂಡಿರುವ ಸಿದ್ಧತೆಯು ಉತ್ತಮವಾಗಿದೆ. ಕಳೆದ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿದ್ದೇನೆ. ಇನ್ನು ಕೆಲವು ವಿಷಯಗಳಲ್ಲಿ ಕಲಿಯುವುದು ಮತ್ತು ಸುಧಾರಣೆ ಮಾಡಿಕೊಳ್ಳುವುದು ಇದೆ. ಅದರ ಮೇಲೆ ಚಿತ್ತ ನೆಟ್ಟಿದ್ದೇನೆ. ಇನ್ನೊಂದು ವಾರದಲ್ಲಿ ಮತ್ತಷ್ಟು ಉತ್ತಮವಾದ ಅಭ್ಯಾಸ ಮಾಡಿಕೊಂಡು ಸಿದ್ಧವಾಗುವ ವಿಶ್ವಾಸವಿದೆ ' ಎಂದು ಲಕ್ಷ್ಯ ಹೇಳಿದರು.

'ಏಷ್ಯನ್ ಗೇಮ್ಸ್ ಬಹುದೊಡ್ಡ ಕ್ರೀಡಾಕೂಟ. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕೂಟ ಇದು. ಆದ್ದರಿಂದ ವಿಶೇಷವಾಗಿದೆ. ಈ ಹಿಂದೆಯೂ ಎರಡು ಬಾರಿ ಈ ಟೂರ್ನಿಯಲ್ಲಿ ಆಡಿದ್ದೇನೆ. ಯೂತ್ ಒಲಿಂಪಿಕ್ ಮತ್ತು ಕಾಮನ್‌ವೆಲ್ತ್ ಕ್ರಿಡಾಕೂಟದಲ್ಲಿ ಆಡಿರುವೆ. ಬೇರೆ ಕ್ರೀಡೆಗಳನ್ನು ನೋಡುವ ಮತ್ತು ಆ ಕ್ರೀಡೆಯ ಆಟಗಾರರನ್ನು ಭೇಟಿಯಾಗುವ ಸದವಕಾಶ ಇದು' ಎಂದು 21 ವರ್ಷದ ಲಕ್ಷ್ಯ ಹೇಳಿದರು.

ಒನ್ ಡೇ ಕಪ್: ಪೃಥ್ವಿ ಶಾ ಶತಕ

ಪೃಥ್ವಿ ಶಾ

ಚೆಸ್ಟರ್ ಲಿ ಸ್ಟ್ರೀಟ್ (ಪಿಟಿಐ): ಭಾರತದ ಬ್ಯಾಟರ್ ಪೃಥ್ವಿ ಶಾ ಅವರು ಇಂಗ್ಲೆಂಡ್‌ನ ಒನ್ ಡೇ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೆ ಮಿಂಚಿದ್ದಾರೆ.

ನಾರ್ಥಾಂಪ್ಟನ್‌ಶೈರ್ ತಂಡವನ್ನು ಪ್ರತಿನಿಧಿಸುತ್ತಿರುವ ಅವರು ಭಾನುವಾರ ಡರ್ಹಮ್ ವಿರುದ್ಧದ ಪಂದ್ಯದಲ್ಲಿ 76 ಎಸೆತಗಳಲ್ಲಿ 125 ರನ್ ಗಳಿಸಿದರು. ಕಳೆದ ಪಂದ್ಯದಲ್ಲಿ ಅವರು ಭರ್ಜರಿ ದ್ವಿಶತಕ (244) ಗಳಿಸಿ ಗಮನ ಸೆಳೆದಿದ್ದರು.

ಪೃಥ್ವಿ ಅವರ ಶತಕದ ನೆರವಿನಿಂದ ನಾರ್ಥಾಂಪ್ಟನ್‌ಶೈರ್ ತಂಡ ಆರು ವಿಕೆಟ್‌ಗಳ ಜಯ ಸಾಧಿಸಿತು. ಮೊದಲು ಬ್ಯಾಟ್ ಮಾಡಿದ ಡರ್ಹಮ್ 43.2 ಓವರ್‌ಗಳಲ್ಲಿ 198 ರನ್‌ಗಳಿಗೆ ಆಲೌಟಾಯಿತು. ನಾರ್ಥಾಂಪ್ಟನ್‌ಶೈರ್ 25.4 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಭಾರತದ ಬ್ಯಾಟರ್‌ಗೆ ತಕ್ಕ ಸಾಥ್ ನೀಡಿದ ರಾಬ್ ಕೆಯೊ 42 ರನ್ ಗಳಿಸಿದರು.

3ನೇ ಸ್ಥಾನಕ್ಕೇರಿದ ಭಾರತ ಹಾಕಿ ತಂಡ

ನವದೆಹಲಿ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ ಗೆದ್ದುಕೊಂಡ ಭಾರತ ತಂಡ, ಎಫ್‌ಐಎಚ್ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನಕ್ಕೇರಿದೆ.

ಹರ್ಮನ್‌ಪ್ರೀತ್ ಸಿಂಗ್ ಬಳಗ ಈ ಟೂರ್ನಿಗೆ ಮುನ್ನ ನಾಲ್ಕನೇ ಸ್ಥಾನದಲ್ಲಿತ್ತು. ಇದೀಗ 2771.35 ಪಾಯಿಂಟ್ಸ್‌ಗಳೊಂದಿಗೆ ಒಂದು ಸ್ಥಾನ ಬಡ್ತಿ ಪಡೆದುಕೊಂಡಿದೆ. ಮೂರನೇ ಸ್ಥಾನದಲ್ಲಿದ್ದ ಇಂಗ್ಲೆಂಡ್ (2763.50) ಒಂದು ಸ್ಥಾನ ಕುಸಿತ ಕಂಡಿದೆ. ನೆದರ್ಲೆಂಡ್ಸ್ (3095.90) ಮತ್ತು ಬೆಲ್ಜಿಯಂ (2917.87) ತಂಡಗಳು ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿ ಮುಂದುವರಿದಿವೆ.

ಎಫ್‌ಐಎಚ್ ರ್‍ಯಾಂಕಿಂಗ್‌ನಲ್ಲಿ ಭಾರತ ತಂಡ ಮೂರನೇ ಸ್ಥಾನಕ್ಕೇರಿರುವುದು ಇದು ಎರಡನೇ ಬಾರಿ. 2021ರಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಸಾಧನೆ ಮಾಡಿದಾಗಲೂ ಮೂರನೇ ಸ್ಥಾನ ಅಲಂಕರಿಸಿತ್ತು.

ಶನಿವಾರ ನಡೆದಿದ್ದ ಫೈನಲ್‌ನಲ್ಲಿ ಭಾರತ ತಂಡ 4–3 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಒಟ್ಟಾರೆಯಾಗಿ 4ನೇ ಬಾರಿ ಈ ಟೂರ್ನಿ ಗೆದ್ದುಕೊಂಡ ಸಾಧನೆ ಮಾಡಿತ್ತು.

ಚೀನಾದ ಹಾಂಗ್‌ಝೌನಲ್ಲಿ ಸೆ.23 ರಂದು ಆರಂಭವಾಗಲಿರುವ ಏಷ್ಯನ್ ಕ್ರೀಡಾಕೂಟವು ಭಾರತ ಹಾಕಿ ತಂಡದ ಮುಂದಿನ ಟೂರ್ನಿ ಆಗಿದೆ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ 'ರನ್ನರ್ ಅಪ್' ಆಗಿರುವ ಮಲೇಷ್ಯಾ, ರ್‍ಯಾಂಕಿಂಗ್‌ನಲ್ಲಿ 9ನೇ ಸ್ಥಾನವನ್ನು ಕಾಪಾಡಿಕೊಂಡಿದೆ. ದಕ್ಷಿಣ ಕೊರಿಯಾ ಮತ್ತು ಪಾಕಿಸ್ತಾನ ತಂಡಗಳು ಕ್ರಮವಾಗಿ 11 ಹಾಗೂ 16ನೇ ಸ್ಥಾನಗಳಲ್ಲಿವೆ.

ಚೆಸ್: ಗುಕೇಶ್–ಕಾರ್ಲ್‌ಸನ್ ಪೈಪೋಟಿ

ಬಾಕು (ಪಿಟಿಐ): ಭಾರತದ ಡಿ.ಗುಕೇಶ್, ಆರ್.ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ ಅವರು ಇಲ್ಲಿ ನಡೆಯುತ್ತಿರುವ ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಗುಕೇಶ್ 1.5–0.5 ಪಾಯಿಂಟ್ಸ್‌ಗಳಿಂದ ಚೀನಾದ ವಾಂಗ್ ಹಾವೊ ವಿರುದ್ಧ ಗೆದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಸವಾಲು ಎದುರಿಸಲಿದ್ದಾರೆ.

ಕಾರ್ಲ್‌ಸನ್, 16ರ ಘಟ್ಟದಲ್ಲಿ ಉಕ್ರೇನ್‌ನ ವಾಸಿಲಿ ಇವಾಂಚುಕ್ ಅವರನ್ನು ಮಣಿಸಿದರು.

ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಪ್ರಜ್ಞಾನಂದ ಮತ್ತು ಇರಿಗೇಶಿ ಎದುರಾಗಲಿದ್ದಾರೆ. 16ರ ಘಟ್ಟದಲ್ಲಿ ಇರಿಗೇಶಿ ಅವರು ಸ್ವೀಡನ್‌ನ ನೀಲ್ಸ್ ಗ್ರಾಂಡೆಲಿಯಸ್ ವಿರುದ್ಧ ಗೆದ್ದರು.

ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ಪದಕ ಗೆದ್ದ ಕರ್ನಾಟಕ ಬ್ಯಾಸ್ಕೆಟ್‌ಬಾಲ್ ತಂಡಗಳನ್ನು ಕೆಎಸ್‌ಬಿಬಿಎ ವತಿಯಿಂದ ಸನ್ಮಾನಿಸಲಾಯಿತು. ಕೆ.ಗೋವಿಂದರಾಜ್, ಬಿ.ದಯಾನಂದ ಮತ್ತು ಕೆಎಸ್‌ಬಿಬಿಎ ಅಧ್ಯಕ್ಷ ಆರ್.ರಾಜನ್ ಪಾಲ್ಗೊಂಡರು

ಬ್ಯಾಸ್ಕೆಟ್‌ಬಾಲ್ ತಂಡಗಳಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಋತುವಿನಲ್ಲಿ ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ರಾಜ್ಯದ ಬ್ಯಾಸ್ಕೆಟ್‌ಬಾಲ್ ತಂಡಗಳನ್ನು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ (ಕೆಎಸ್‌ಬಿಬಿಎ) ವತಿಯಿಂದ ಭಾನುವಾರ ಇಲ್ಲಿ ಸನ್ಮಾನಿಸಲಾಯಿತು.

ಕಂಠೀರವ ಕ್ರೀಡಾಂಗಣದ ಒಲಿಂಪಿಕ್ ಭವನದಲ್ಲಿ ನಡೆದ ಸಮಾರಂಭದಲ್ಲಿ ಮೂರು ತಂಡಗಳಿಗೆ ಒಟ್ಟು ₹ 10 ಲಕ್ಷ ನಗದು ಬಹುಮಾನ ನೀಡಲಾಯಿತು.

47ನೇ ರಾಷ್ಟ್ರೀಯ ಸಬ್ ಜೂನಿಯರ್ ಟೂರ್ನಿಯಲ್ಲಿ ಚಿನ್ನ ಜಯಿಸಿದ್ದ ಕರ್ನಾಟಕ ಸಬ್ ಜೂನಿಯರ್ ಬಾಲಕಿಯರ ತಂಡಕ್ಕೆ ₹ 5 ಲಕ್ಷ, 37ನೇ ಯೂತ್ ನ್ಯಾಷನಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿದ್ದ ಬಾಲಕಿಯರ ತಂಡಕ್ಕೆ ₹ 3 ಲಕ್ಷ ಹಾಗೂ 72ನೇ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಮಹಿಳಾ ತಂಡಕ್ಕೆ ₹ 2 ಲಕ್ಷ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಕೆಎಸ್‌ಬಿಬಿಎ ಗೌರವ ಕಾರ್ಯದರ್ಶಿ ಕೆ.ಗೋವಿಂದರಾಜ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮತ್ತು ಕೆಎಸ್‌ಬಿಬಿಎ ಅಧ್ಯಕ್ಷ ಆರ್.ರಾಜನ್ ಪಾಲ್ಗೊಂಡರು.

ಸಂಕ್ಷಿಪ್ತ ಸುದ್ದಿ

'ನೀಟ್ ಮಸೂದೆಗೂ ರಾಜ್ಯಪಾಲರಿಗೂ ಸಂಬಂಧವಿಲ್ಲ'

ಚೆನ್ನೈ (ಪಿಟಿಐ): ನೀಟ್ ವಿರೋಧಿ ಮಸೂದೆ ಕುರಿತಂತೆ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರ ಹೇಳಿಕೆಯನ್ನು ಆರೋಗ್ಯ ಸಚಿವ ಮಾ. ಸುಬ್ರಮಣಿಯನ್ ಅವರು ಭಾನುವಾರ ಕಟುವಾಗಿ ಟೀಕಿಸಿದ್ದು, 'ಮಸೂದೆಗೂ ರಾಜ್ಯಪಾಲರಿಗೂ ಯಾವುದೇ ಸಂಬಂಧವಿಲ್ಲ' ಎಂದಿದ್ದಾರೆ.

'ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ನೀಟ್ ವಿರೋಧಿ ಮಸೂದೆಗೆ ನಾನು ಯಾವುದೇ ಕಾರಣಕ್ಕೂ ಅನುಮೋದನೆ ನೀಡುವುದಿಲ್ಲ' ಎಂದು ರವಿ ಅವರು ಶನಿವಾರ ಹೇಳಿಕೆ ನೀಡಿದ್ದರು.

ಈ ಹೇಳಿಕೆಗೆ ಪ್ರತಿಕ್ರಿಯಿಸಿದ ಸುಬ್ರಮಣಿಯನ್ ಅವರು, 'ಈಗ ಬೇರೆ ದಾರಿ ಇಲ್ಲ. ರಾಜ್ಯಪಾಲರು ಮಸೂದೆಯನ್ನು ಈಗಾಗಲೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳುಹಿಸಿದ್ದಾರೆ. ಅಲ್ಲಿಗೆ ಅವರ ಕೆಲಸ ಮುಗಿಯಿತು. ಮಸೂದೆಗೆ ರಾಜ್ಯಪಾಲರ ಅನುಮತಿ ನೀಡುವ ಅವಶ್ಯಕತೆಯೂ ಇಲ್ಲ. ರಾಷ್ಟ್ರಪತಿಯವರು ಮಸೂದೆಗೆ ಒಪ್ಪಿಗೆ ನೀಡಿದರೆ, ಆ ಮಾಹಿತಿಯನ್ನು ಅವರೊಂದಿಗೆ (ರಾಜ್ಯಪಾಲ) ಹಂಚಿಕೊಳ್ಳಲಾಗುವುದು' ಎಂದಿದ್ದಾರೆ.

ಮಣಿಪುರ: ಸಿಬಿಐಗೆ ಒಂಬತ್ತು ಪ್ರಕರಣ

ನವದೆಹಲಿ (ಪಿಟಿಐ): ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿ ಇನ್ನೂ ಒಂಬತ್ತು ಪ್ರಕರಣಗಳ ತನಿಖೆ ನಡೆಸಲು ಸಿಬಿಐ ಸಿದ್ಧತೆ ನಡೆಸಿದೆ. ಈ ಮೂಲಕ, ಮಣಿಪುರಕ್ಕೆ ಸಂಬಂಧಿಸಿದಂತೆ ಸಿಬಿಐ ಕೈಗೆತ್ತಿಕೊಂಡಿರುವ ಪ್ರಕರಣಗಳ ಸಂಖ್ಯೆ 17ಕ್ಕೆ ತಲುಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣ ದಾಖಲಿಗೆ ಅನುಮತಿ ಕಡ್ಡಾಯ: ಸುಪ್ರೀಂ ಕೋರ್ಟ್

ನವದೆಹಲಿ: ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲು ಸಂಬಂಧಪಟ್ಟ ಇಲಾಖೆಯ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಸುಪ್ರೀಂ ಕೋರ್ಟ್ ಎಂದು ಹೇಳಿದೆ.

ನೌಕರ ಎಸಗಿದ ಕೃತ್ಯದ ಬಗ್ಗೆ ಪ್ರಕರಣ ದಾಖಲಿಸಲು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಸೆಕ್ಷನ್ 19ರ ಅಡಿ ಇಲಾಖೆಯ ಅನುಮತಿ ಪಡೆಯಬೇಕಿದೆ. ಆದರೆ, ನೌಕರನ ವಿರುದ್ಧ ಐಪಿಸಿ ಸೆಕ್ಷನ್‌ನಡಿ ದಾಖಲಾಗುವ ಪ್ರಕರಣಗಳಲ್ಲಿ ಈ ಮಾನದಂಡ ಪಾಲಿಸುವ ಅಗತ್ಯವಿಲ್ಲ ಎಂದು ಬಿ.ಆರ್. ಗವಾಯಿ ಮತ್ತು ಜೆ.ಬಿ. ಪಾರ್ದಿವಾಲಾ ಅವರಿದ್ದ ನ್ಯಾಯಪೀಠ ಹೇಳಿದೆ.

'ಸೈನಿಕರನ್ನು ಏರ್‌ಲಿಫ್ಟ್ ಮಾಡಿದ್ದ ಸೇನೆ'

ನವದೆಹಲಿ (ಪಿಟಿಐ): ಗಾಲ್ವಾನ್ ಕಣಿವೆಯಲ್ಲಿ ಚೀನಿ ಸೈನಿಕರೊಂದಿಗಿನ ಘರ್ಷಣೆಯ ನಂತರ ಭಾರತೀಯ ವಾಯು ಪಡೆಯು (ಐಎಎಫ್) 68,000ಕ್ಕೂ ಹೆಚ್ಚು ಸೈನಿಕರು, ಸುಮಾರು 90 ಟ್ಯಾಂಕ್‌ಗಳು ಮತ್ತು ಇತರ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಪೂರ್ವ ಲಡಾಖ್‌ಗೆ ಅತ್ಯಂತ ಕ್ಷಿಪ್ರಗತಿಯಲ್ಲಿ ಏರ್‌ಲಿಫ್ಟ್ ಮಾಡಿತ್ತು ಎಂದು ರಕ್ಷಣಾ ಮತ್ತು ಭದ್ರತಾ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

2020ರ ಜೂನ್ 15ರಂದು ಸೈನಿಕರ ನಡುವೆ ಗಾಲ್ವಾನ್ ಕಣಿವೆಯಲ್ಲಿ ಸಂಘರ್ಷ ನಡೆದಿತ್ತು. ಇದರಿಂದಾಗಿ ಶತ್ರು ಸೈನಿಕರ ನೆಲೆಗಳ ಮೇಲೆ ನಿರಂತರ ಕಣ್ಗಾವಲು ಮತ್ತು ಬೇಹುಗಾರಿಕೆಗಾಗಿ ಐಎಎಫ್ ತನ್ನ ಸುಖೋಯ್-30 ಎಂಕೆಐ ಮತ್ತು ಜಾಗ್ವಾರ್ ಜೆಟ್‌ಗಳನ್ನು ಈ ಪ್ರದೇಶದಲ್ಲಿ ತ್ವರಿತವಾಗಿ ನಿಯೋಜಿಸಿತು. ಇವುಗಳ ಕಣ್ಗಾವಲು ವ್ಯಾಪ್ತಿಯು ಸುಮಾರು 50 ಕಿ.ಮೀ. ವರೆಗೂ ಇತ್ತು. ಚೀನಾ ಸೈನಿಕರ ನೆಲೆಗಳು ಮತ್ತು ಚಲನವಲನಗಳ ಮೇಲೆ ನಿಖರವಾಗಿ ಕಣ್ಗಾವಲಿಡಲಾಗಿತ್ತು. ರಫೇಲ್ ಮತ್ತು ಮಿಗ್ -29 ವಿಮಾನಗಳನ್ನು ಒಳಗೊಂಡಂತೆ ಹಲವು ಯುದ್ಧ ವಿಮಾನಗಳ ಹಲವಾರು ಸ್ಕ್ವಾಡ್ರನ್‌ಗಳನ್ನು ವಾಯು ಗಸ್ತು ನಡೆಸಲು ನಿಯೋಜಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

'ಆರ್ಥಿಕ ಅಪರಾಧ: ಆಶ್ರಯ ನೀಡುವುದಿಲ್ಲ'

ನವದೆಹಲಿ (ಪಿಟಿಐ): 'ನ್ಯಾಯದ ಕುಣಿಕೆಯಿಂದ ತಪ್ಪಿಸಿಕೊಂಡವರಿಗೆ ಆಶ್ರಯ ಕಲ್ಪಿಸುವ ಯಾವುದೇ ಉದ್ದೇಶ ಬ್ರಿಟನ್ ಸರ್ಕಾರಕ್ಕೆ ಇಲ್ಲ' ಎಂದು ಬ್ರಿಟನ್ ಭದ್ರತಾ ಸಚಿವ ಟಾಮ್ ಟುಗೆಂಧಟ್ ಸ್ಪಷ್ಟಪಡಿಸಿದ್ದಾರೆ.

ಕೋಟ್ಯಂತರ ರೂಪಾಯಿ ವಂಚನೆ ಎಸಗಿ ಬ್ರಿಟನ್‌ಗೆ ಪಲಾಯನ ಗೈದಿರುವ ಉದ್ಯಮಿ ವಿಜಯ್ ಮಲ್ಯ ಹಾಗೂ ವಜ್ರದ ವ್ಯಾಪಾರಿ ನೀರವ್ ಮೋದಿ ಅವರನ್ನು ಹಸ್ತಾಂತರಿಸುವಂತೆ ಭಾರತ ಒತ್ತಡ ಹೇರುತ್ತಿರುವ ಬೆನ್ನಲ್ಲೇ ಸಚಿವ ಟಾಮ್ ಅವರು ನೀಡಿರುವ ಈ ಹೇಳಿಕೆಯು ಮಹತ್ವ ಪಡೆದಿದೆ.

ಎಫ್‌ಐಆರ್ ದಾಖಲು

ಇಂದೋರ್ (ಪಿಟಿಐ): ಮಧ್ಯಪ್ರದೇಶ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆಯೆಂದು ಆರೋಪಿಸಿದ್ದ ಕಾರಣ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್‌ನಾಥ್ ಮತ್ತು ಕೇಂದ್ರ ಮಾಜಿ ಸಚಿವ ಅರುಣ್ ಯಾದವ್ ಅವರ 'ಎಕ್ಸ್' ಖಾತೆ ನಿರ್ವಹಿಸುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಇಂದೋರ್ ಪೊಲೀಸರು ತಿಳಿಸಿದ್ದಾರೆ.

ಶೇ 50ರಷ್ಟು ಕಮಿಷನ್ ನೀಡುವಂತೆ ರಾಜ್ಯದ ಗುತ್ತಿಗೆದಾರರನ್ನು ಕೇಳಲಾಗುತ್ತಿದೆ ಎಂದು ಆರೋಪಿಸಿರುವ ನಕಲಿ ಪತ್ರವನ್ನು ಜ್ಞಾನೇಂದ್ರ ಅವಸ್ತಿ ಎಂಬ ವ್ಯಕ್ತಿಯ ಹೆಸರಲ್ಲಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬಗ್ಗೆ ಸ್ಥಳೀಯ ಬಿಜೆಪಿ ಕಾನೂನು ಪ್ರಕೋಷ್ಠದ ಸಂಚಾಲಕ ನಿಮೇಶ್ ಪಾಠಕ್ ದೂರು ನೀಡಿದ್ದರು.

ಐಸಿಸಿಆರ್ ಕಾರ್ಯವೈಖರಿ ಅಧ್ಯಯನ: ಸಲಹೆ

ನವದೆಹಲಿ: ಜಾಗತಿಕ ಮಟ್ಟದಲ್ಲಿ ಭಾರತದ 'ಸಾಫ್ಟ್ ಪವರ್' (ಘರ್ಷಣೆ ಬದಲಿಗೆ ಪ್ರಭಾವ ಬೀರುವ ಕಾರ್ಯತಂತ್ರ) ಅನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರಚುರಪಡಿಸುವುದು ಹೇಗೆ ಎಂಬುದರ ಬಗ್ಗೆ ಅಧ್ಯಯನ ನಡೆಸಿ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ. ಇದಕ್ಕಾಗಿ ವಿದೇಶಗಳಲ್ಲಿ ಇರುವ ಚೀನಾದ 'ಕನ್ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್'ನ ಕಾರ್ಯವೈಖರಿಯನ್ನು ಅಧ್ಯಯನಕ್ಕೆ ಒಳಪಡಿಸುವಂತೆ ಸಮಿತಿಯು ಶಿಫಾರಸು ಮಾಡಿದೆ.

ಬೇರೆ ದೇಶಗಳೊಟ್ಟಿಗೆ ಭಾರತದ ಸಾಂಸ್ಕೃತಿಕ ಅನುಸಂಧಾನದ ಹೊಣೆ ಹೊತ್ತಿರುವ 'ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತಿ'ನ (ಐಸಿಸಿಆರ್) ಕಾರ್ಯತಂತ್ರ ಬಲಪಡಿಸುವ ಸಂಬಂಧ ಸಂಸದೀಯ ಸಮಿತಿಯು ಇತ್ತೀಚೆಗಷ್ಟೇ ಮುಕ್ತಾಯಗೊಂಡ ಅಧಿವೇಶನದಲ್ಲಿ ಸಲ್ಲಿಸಿದ ವರದಿಯಲ್ಲಿ ಈ ಶಿಫಾರಸುಗಳಿವೆ.

ಚೀನಾ ವಿದೇಶಗಳೊಂದಿಗೆ ಸಾಂಸ್ಕೃತಿಕ ಅನುಸಂಧಾನಕ್ಕಾಗಿ ಕನ್ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್‌ಗಳನ್ನು ತೆರೆದಿದೆ. ಭಾರತದಲ್ಲೂ ಇಂತಹ ಎರಡು ಕೇಂದ್ರಗಳಿವೆ. ಕೇಂದ್ರ ಸರ್ಕಾರವು ಬೇರೆ ಬೇರೆ ಕಾರಣಗಳಿಗಾಗಿ ಈ ಅಧ್ಯಯನ ಕೇಂದ್ರಗಳ ಮೇಲೆ ನಿಗಾ ಇರಿಸಿದೆ. ಆದರೆ, ಜಾಗತಿಕ ಮಟ್ಟದಲ್ಲಿ ಚೀನಾದ 'ಸಾಫ್ಟ್ ಪವರ್' ಅನ್ನು ಪ್ರಚುರಪಡಿಸುವಲ್ಲಿ ಈ ಕನ್ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್‌ಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಶೇ 75 ಅಂಕ ಕಡ್ಡಾಯದ ಮಾನದಂಡ ಸಲ್ಲ

ನವದೆಹಲಿ: ಶಿಕ್ಷಣ ವ್ಯವಸ್ಥೆಯಲ್ಲಿ 'ಕ್ರೀಡಾ ಕೋಟಾ'ವನ್ನು ಇರಿಸಿರುವ ಉದ್ದೇಶವೇ ಶಿಕ್ಷಣ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮತ್ತು ಅಂತಿಮವಾಗಿ ದೇಶದಲ್ಲಿ ಕ್ರೀಡೆಗೆ ಉತ್ತೇಜನ ನೀಡುವುದಾಗಿದೆ. ಶೈಕ್ಷಣಿಕ ಅರ್ಹತೆಗೆ ಅವಕಾಶ ಮಾಡಿಕೊಡುವ ಉದ್ದೇಶ ಈ ಕೋಟಾಕ್ಕೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪಂಜಾಬ್‌ನ ಚಂಡೀಗಢದ ಪಿಇಸಿ ತಾಂತ್ರಿಕ ವಿ.ವಿಯಲ್ಲಿ ನೀಡಲಾಗಿರುವ ಶೇ 2ರಷ್ಟು ಕ್ರೀಡಾ ಕೋಟದ ಅಡಿ ಪ್ರವೇಶಾತಿ ಪಡೆಯಲು ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಶೇ 75 ಅಂಕ ಕಡ್ಡಾಯವಾಗಿ ಗಳಿಸಿರಬೇಕು ಎಂಬ ನಿಯಮ ರೂಪಿಸಲಾಗಿದೆ. ಈ ನಿಯಮದ ವಿರುದ್ಧ ಕೆಲವರು ಸಲ್ಲಿಸಿದ್ದ ಅರ್ಜಿಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಈಚೆಗೆ ವಜಾಗೊಳಿಸಿತ್ತು. ಹೈಕೋರ್ಟ್ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ.

ಶೇ 75 ಅಂಕಗಳನ್ನು ಕಡ್ಡಾಯಗೊಳಿಸುವುದು ಕ್ರೀಡಾ ಕೋಟಾವನ್ನು ಪರಿಚಯಿಸಿರುವ ಉದ್ದೇಶವನ್ನು ಉತ್ತೇಜಿಸುವುದಿಲ್ಲ, ಬದಲಾಗಿ ಅದಕ್ಕೆ ಮಾರಕವಾಗಿದೆ. ಅಲ್ಲದೇ, ಈ ಮಾನದಂಡವು ತಾರತಮ್ಯದಿಂದ ಕೂಡಿದೆ. ಹೀಗಾಗಿ ಇದು ಸಂವಿಧಾನದ 14ನೇ ವಿಧಿ ನೀಡುವ ಸಮಾನತೆಯ ಹಕ್ಕಿಗೆ ವಿರುದ್ಧವಾಗಿದೆ ಎಂದು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಮತ್ತು ಅರವಿಂದ್ ಕುಮಾರ್ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ವಿಶ್ವವಿದ್ಯಾಲಯಗಳು ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಪೋಷಿಸುವ ಕೇಂದ್ರಗಳು. ಶಿಕ್ಷಣ ಸಂಸ್ಥೆಗಳು ಪ್ರವೇಶಾತಿ ದೃಷ್ಟಿಯಿಂದ ಕನಿಷ್ಠ ಅರ್ಹತಾ ಮಾನದಂಡವನ್ನು ನಿಗದಿಪಡಿಸಬಹುದು. ಆದರೆ ಆ ಮಾನದಂಡಗಳು ಸಾಮಾನ್ಯ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಅನ್ವಯಿಸುವಂಥ ಮಾನದಂಡಗಳಾಗಿರಬಾರದು ಎಂದು ಕೋರ್ಟ್ ಹೇಳಿದೆ.

ವಿ.ವಿಗಳು ಅಥವಾ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು 2023ರ ಕ್ರೀಡಾ ನೀತಿ ನಿಗದಿಪಡಿಸಿರುವ ಅರ್ಹತಾ ಮಾನದಂಡಕ್ಕಿಂತ ಹೆಚ್ಚು ಉನ್ನತವಾಗಿರುತ್ತವೆ. ಹಾಗಾಗಿ ಕ್ರೀಡಾ ಕೋಟಾದಡಿ ಅದನ್ನು ಪರಿಗಣಿಸುವುದು ಸರಿಯಲ್ಲ ಎಂದು ಕೋರ್ಟ್ ಹೇಳಿದೆ.